UNIVERSAL LIBRARY
OU_200630
UNIVERSAL LIBRARY

KANNADA

# BARTHRUHARI–SUBHASITHA.

# ಕನ್ನಡ ಭರ್ತೃಹರಿ ಸುಭಾಷಿತವು.

ಶ್ರೀಮನ್ಮಹಾರಾಜರವರ ಆಸ್ಥಾನ ಕವಿಗಳಾಗಿದ್ದ

ಬಸವಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟದ್ದು.

MYSORE:

E GOVERNMENT BRANCH PRESS,

1894.

(All rights reserved.)



# ಕನ್ನಡ ಭರ್ತೃಹರಿ ಸುಭಾಷಿತವು.

## ಪೀಠಿಕೆ.

ವೃ॥ ಶ್ರೀಮದಿಳಾಧರೇಂದ್ರ ತನಯಾ ವದನಾಂಬುಜಚಂಚ
ರೀಕನು । ದ್ದಾಮಗುಣಾಭಿರಾಮ ನಿಜವಿಷ್ಣುಮುಖಾಮರ ನಮ್ರ
ಮೌಳಿಮಾ ॥ ಲಾ ಮಕರಂದಸಿಕ್ತಪದತಾಮರಸಂ ನತಕಲ್ಪಭೂ
ರುಹಂ । ಪ್ರೇಮದೆ ಚಾಮಭೂಮಿಪತಿಯಂ ಪರಿಪಾಲಿಕೆ ಸೋಮಶೇ
ಖರಂ ॥ ೧

ಕಂ॥ ನುತಗುಣ ಚಾಮಮಹೀಪತಿ । ಮತಿಸಚಿವ ನೃಸಿ
ಹ್ಮವರ್ಯ ನುತ್ಸಾಹಿಸೆ ಸಂ ॥ ಸ್ಕೃತ ಭರ್ತೃಹರಿಸುಭಾಷಿತ । ಕೃ
ತಿಯಂ ಬಸವಪ್ಪ ಶಾಸ್ತ್ರಿ ಕನ್ನಡಿಸಿದಪಂ ॥ ೨

ಕಂ ॥ ಮುನ್ನಿನ ಸಂಸ್ಕೃತ ಕೃತಿಗಿದು । ಕನ್ನಡಿ ಯೆನೆ
ಕನ್ನಡಿಪ್ಪುದುಚಿತಂ ಕವಿಗಳ್ ॥ ಎನ್ನರಿವುಳ್ಳನಿತರಿಂದಾಂ । ಕನ್ನ
ಡಿಸಿರ್ಪೆಂ ಗುಣಜ್ಞರಭಿಮತಿಪುದಿದಂ ॥ ೩

# ನೀತಿಶತಕ.

ಕಂ || ಸ್ಥಾನಾದಿ ಪರಿಚ್ಛೇದವ | ನಾನದ ಸಚ್ಚಿತ್ಸುಖಾತ್ಮ ಮಾಗೆಸೆಯುವ ನೈ || ಜಾನುಭವದಿಂದಮೇ ತಿಳಿ | ವಾ ನಿರ್ಮಲಮಾದ ತೇಜಕಭಿನಮಿಸಿದಪೆಂ || ೧

## ಮೂರ್ಖಪದ್ಧತಿ.

ಕಂ || ತಿಳಿವರ್ಗ್ಗೆಮತ್ಸರಂ ಪಿರಿ | ದಿಳೆಯಾಣ್ಮರಖರ್ವ್ವಗರ್ವ ದೂಷಿತಹೃದಯರ್ || ತಿಳಿವಿಲ್ಲದರಿನ್ನುಳಿದರ್ | ಮುಳುಗಿತ್ತು ದರಿಂಸು ಭಾಷಿತಂ ತಾನೊಡಲೊಳ್ || ೨

ಕಂ || ತಿಳಿಯಿಸಲಕ್ಕುಂ ಸುಖದಿಂ | ತಿಳಿಯದನಂ ತಿಳಿದಜನ ಮನತಿಸುಖದಿಂದಂ || ತಿಳಿಯಿಸಲಕ್ಕುಂ ತಿಳಿವುಂ | ತಿಳಿಯದ ಮೂರ್ಖಂಗೆ ತಿಳಿಸೆ ವಿಧಿಯು ಮಶಕ್ತಂ || ೩

ವೃ || ಬಲುಹಿಂದಂ ಕೀಳಲಕ್ಕುಂ ಮಕರದಣಲ ನೊಂದಿಪ್ಪ ಮಾಣಿಕ್ಯಮುಂ ಸಂಚಲದೂರ್ಮಿವ್ರಾತದಿಂ ಭೋರ್ಗ್ಗರೆವ ಜಲಧಿಯಂ

---

(೧) ಟಿಪ್ಪಣಿ || ಸ್ಥಾನಾದಿಪರಿಚ್ಛೇದವಂ—ದೇಶಕಾಲ ವಸ್ತುಗಳಿಂದ ಪರಿಮಿತಿಯನ್ನು; ಆನದ—ಹೊಂದದ; ಅಂದರೆ ಎಲ್ಲಾ ದೇಶಕಾಲ ವಸ್ತುಗಳಲ್ಲಿಯೂ ಪೂರ್ಣವಾದದ್ದೆಂದಭಿಪ್ರಾಯವು; ಸಚ್ಚಿತ್ಸುಖಾತ್ಮಮಾಗಿ—ಸತ್ಯಜ್ಞಾನಾನಂದರೂಪವಾಗಿ; ಎಸೆಯುವ—ಪ್ರಕಾಶಿಸುವ; ನೈಜಾನುಭವದಿಂದಮೇ—ತನ್ನ ಅನುಭವದಿಂದಲೇ; ತಿಳಿವ—ತಿಳಿಯಲ್ಪಡುವ; ಆ ನಿರ್ಮಲಮಾದತೇಜಕೆ—ಪ್ರಸನ್ನವಾದ ಆ ಪರಂಜ್ಯೋತಿಗೆ; ಅಭಿನಮಿಸಿದಪೆಂ—ನಮಸ್ಕರಿಸುತ್ತೇನೆ.

(೨) ತಿಳಿವರ್ಗ್ಗೆ—ವಿದ್ವಾಂಸರಿಗೆ; ಪಿರಿದು—ಹೆಚ್ಚಾಗಿರುವದು; ಇಳೆಯಾಣ್ಮರ್—ಭೂಪಾಲಕರು; ಅಖರ್ವ್ವಗರ್ವದೂಷಿತಹೃದಯರ್—ಅಧಿಕವಾದ ಅಹಂಕಾರದಿಂದ ದುಷ್ಟವಾದ ಮನಸ್ಸುಳ್ಳವರು; ತಿಳಿವಿಲ್ಲದರ್—ಜ್ಞಾನಶೂನ್ಯರು; ಇನ್ನುಳಿದರ್—ಮಿಕ್ಕವರು; ಒಡಲೊಳ್—ಅಂತರಂಗದಲ್ಲಿ.

(೩) ಅಕ್ಕುಂ—ಆಗುವದು; ತಿಳಿದುಂತಿಳಿಯದ—ಅಲ್ಪಜ್ಞನಾದ; ತಿಳಿಸೆ—ಬಡಂಬಡಿಸುವದಕ್ಕೆ.

(೪) ಅಣಲಂ—ದವಡೆಯನ್ನು; ಭೋರ್ಗ್ಗರೆವ—ಭೋರೆಂದು ಕೂಗು

ಯತ್ನದಿಂ ದಾಂಟಲಕ್ಕುಂ ॥ ಸಲೆಕೋಪಂದಾಳ್ದಪಾವಂ ಪಿಡಿವು
ಶಿರದೆ ಪೂಮಾಲೆವೋಲ್ತಾಳಲಕ್ಕುಂ । ಚಲದಿಂ ಬೀಗಿರ್ಪ ಮೂರ್ಖಾ
ವಳಿಯು ತಿಳಿಯಿಸಲ್ಕಾವನುಂ ಶಕ್ತನಲ್ಲಂ ॥ ೪

ಕಂ ॥ ಹಿಳಿಯಲ್ಬಕ್ಕುಂ ತೈಲವ ಮಳಲೊಳಗುಂ ಮೊಲ
ದ ಕೋಡ ಕಾಣಲುಮಕ್ಕುಂ ॥ ಪೊಳೆವ ಬಿಸಿಲ್ದೊರೆಯೊಳ್ನೀ ।
ರ್ಗೊಳಲಕ್ಕುಂ ಮೂರ್ಖಜನವ ನೊಲಿಪುದಶಕ್ಯಂ ॥ ೫

ವೃ॥ ಸವಿನುಡಿಯಿಂದೆ ಮೂರ್ಖರ ನೊಡಂಬಡಿಸಲ್ಬಗೆದಪ್ಪ
ಮಾನವಂ । ನವಬಿಸಸೂತ್ರದಿಂದೆ ನೆರೆ ಬಂಧಿಸಲುಜ್ಜುಗಿಪಂ ಮ
ದೇಭಮಂ ॥ ಪವಿಮಣಿಯಂ ಶಿರೀಷ ಕುಸುಮಾಂಚಲದಿಂ ಕೊರೆಯ
ಲ್ಕೊಡರ್ಚುವಂ । ಲವಣಸಮುದ್ರಕಿಂಪ ಮಧುಬಿಂದುವಿನಾಗಿ
ಸಲುಂ ಪ್ರಯತ್ನಿಪಂ ॥ ೬

ಕಂ ॥ ಮರೆಗೊಳುವಂತಜ್ಞತೆ ಮೇ । ಣರಿದರ ಬಳಿಯಲ್ಲಿ
ತೊಡವೆನಿಪ್ಪಂತೆ ಹಿತಂ ॥ ನೆರೆ ಸಮನಿಪಂತೆಯುಂ ವಿಧಿ । ಯರಿಯ
ದರೊಳ್ ಮೌನವಂ ನಿರ್ಮಿಸಿದನಲ್ತೇ ॥ ೭

---

ತ್ತಿರುವ ; ಕೋಪಂದಾಳ್ದ—ಕೋಪವನ್ನು ತಾಳಿದ ; ಪೂಮಾಲೆವೋಲ್—ಪುಷ್ಪ ಮಾಲೆಯಹಾಗೆ ; ಬೀಗಿರ್ಪ—ಉಬ್ಬಿರುವ ; ತಿಳಿಯಿಸಲ್ಕೆ—ಒಡಂಬಡಿಸುವದಕ್ಕೆ ; ತಾಳಲಕ್ಕುಂ—ಧರಿಸಬಹುದು ; ಆವನುಂಶಕ್ತನಲ್ಲಂ—ಯಾವನೂ ಸಮರ್ಥನಲ್ಲ

(೫) ಹಿಳಿಯಲ್ಬಕ್ಕುಂ—ಹಿಂಡಬಹುದು ; ಬಿಸಿಲ್ದೊರೆಯೊಳ್—ಮರೀಚಿಕೆಯಲ್ಲಿಯು.

(೬) ಸವಿನುಡಿಯಿಂದೆ—ಮಧುರವಚನದಿಂದ ; ಬಗೆದಪ್ಪ—ಮನಸ್ಸನ್ನು ಮಾಡುವ ; ಬಿಸಸೂತ್ರ—ತಾವರೆದಂಟಿನನೂಲು ; ನೆರೆ—ಚೆನ್ನಾಗಿ ; ಉಜ್ಜುಗಿಪಂ—ಯತ್ನಿಸುತ್ತಾನೆ ; ಪವಿ—ವಜ್ರ ; ಶಿರೀಷ—ಬಾಗೇಹುವ್ವು ; ಒಡರ್ಚುವಂ—ಉತ್ಸಾಹಿಸುತ್ತಾನೆ ; ಇಂಪಂ—ಮಾಧುರ್ಯವನ್ನು ; ಆಗಿಸಲುಂ—ಉಂಟುಮಾಡುವದಕ್ಕೂ.

(೭) ಅಜ್ಞತೆ—ಮೂಢತನವು ; ಮರೆಗೊಳುವಂತೆ—ಮರೆಯಾಗುವಹಾಗೆ ; ಅರಿದರ—ತಿಳಿದವರ ; ತೊಡವೆನಿಪ್ಪಂತೆ—ಆಭರಣವೆನ್ನಿಸುವಹಾಗೆ ; ನೆರೆ—ಚೆನ್ನಾಗಿ ; ಸಮನಿಪಂತೆ—ಉಂಟಾಗುವಹಾಗೆ : ನಿರ್ಮಿಸಿದಂ—ನಿರ್ಮಿಸಿದನು.

ವೃ॥ ಇನಿಸಂ ತಾಂ ತಿಳಿದಂದು ಗರ್ವಭರಮಂ ತಾಳ್ದಿಲ್ಲಮಂ ಬಿಲ್ಲನೆಂ । ದೆನುತಂ ಬಿರ್ರನೆ ಬೀಗುತಿರ್ದ್ದನಕಟಾ ಮತ್ತದ್ವಿಪಂಬೊಲ್ ವಲಂ ॥ ಜನಿಸಲ್ಕನ್ನೊಳೆ ಮೆಲ್ಲಮೆಲ್ಲನರಿವಾ ವಿದ್ವತ್ಸಹಾವಾಸದಿಂ । ಮನಕಂಟಿರ್ದ್ದ ಮಹಾಮದಂ ಜ್ವರದವೊಲ್ ಪೋಯ್ತಾಗಳೇನೆಂದಪೆಂ ॥ ೮

ವೃ ॥ ಕ್ರಿಮಿಯುತಮಾಗಿ ಮಾಂಸಮಣಮಿಲ್ಲದೆ ಜೊಲ್ಲೊಳೆ ನಾಂದು ಪೂತಿಗಂ । ಧಮನೊಳಕೊಂಡ ಕಳ್ತೆಯೆಲುವಂ ಸವಿಗೊಂಡಗಿಯುತ್ತೆ ಕುರ್ಕುರಂ ॥ ಅಮರವರಂ ಸಮೀಪದೊಳಗಿರ್ದ್ದಡಮೀಕ್ಷಿಸಿ ಲಜ್ಜೆಯಾನದಾ । ಕ್ರಮದೊಳಗಲ್ಪಜೀವಿ ಯೆಣಿಸಂ ಬಯಸಿಪ್ಪುದರಲ್ಲಿ ನೈಚ್ಯಮಂ ॥ ೯

ವೃ॥ ಸುರಪದದತ್ತಣಿಂದೆ ಹರಮಸ್ತಕಮಂ ಹರಮಸ್ತಕಾಗ್ರದಿಂ । ಧರಣಿಧರೇಂದ್ರನಂ ಧರಣಿಭೃದ್ವರನಿಂ ಧರೆಯಂ ಧರಿತ್ರಿಯಿಂ ॥ ಶರಧಿಯ ಮತ್ತಮಾ ಶರಧಿಯಿಂ ಫಣಿಲೋಕವ ನೈದಿದತ್ತು ಬಾಂ । ದೊರೆ ವಿನಿಪಾತ ಸಂತತಿ ವಿವೇಕ ಪರಿಚ್ಯುತಿಯಿಂದೆ ಬಾರದೇ ॥ ೧೦

---

(೮) ಇನಿಸಂ—ಸ್ವಲ್ಪವನ್ನು; ಬಿರ್ರನೆ ಬೀಗುತ್ತಿರ್ದ್ದಂ—ಅತ್ಯಂತವಾಗಿ ಉಬ್ಬುತ್ತಿದ್ದನು; ಮತ್ತದ್ವಿಪಂಬೊಲ್—ಮದಹತ್ತಿದ ಆನೆಯಂತೆ; ವಲಂ—ವ್ಯಕ್ತವಾಗಿ; ಅರಿವು—ಜ್ಞಾನವು.

(೯) ಅಣಂ—ಸ್ವಲ್ಪವಾದರೂ; ನಾಂದು—ನೆನೆದು; ಪೂತಿಗಂಧಮಂ—ದುರ್ಗಂಧವನ್ನು: ಒಳಕೊಂಡ—ಹೊಂದಿದ; ಕಳ್ತೆಯೆಲುವಂ—ಕತ್ತೆಯ ಮೂಳೆಯನ್ನು; ಸವಿಗೊಂಡು—ರುಚಿಹತ್ತಿ; ಕುರ್ಕುರಂ—ನಾಯಿಯು ಅಮರ ವರಂ—ಇಂದ್ರನು; ಆನದು—ಧರಿಸದು; ಬಯಸಿಪ್ಪುದರಲ್ಲಿ—ಮೆಚ್ಚಿದ ವಸ್ತುವಿನಲ್ಲಿ.

(೧೦) ಸುರಪದದತ್ತಣಿಂದೆ—ಸ್ವರ್ಗದದೆಸೆಯಿಂದ; ಧರಣಿಧರೇಂದ್ರನಂ-ಹಿಮವಂತನನ್ನು; ಫಣಿಲೋಕವಂ—ಪಾತಾಳವನ್ನು; ವಿವೇಕಪರಿಚ್ಯುತಿ—ವಿಚಾರಶೂನ್ಯತೆ ಮತ್ತು ಸ್ಥಾನಭ್ರಷ್ಟತೆ; ವಿನಿಪಾತ—ಕೇಡು ಮತ್ತು ಬೀಳುವಿಕೆ; ಬಾಂದೊರೆ—ಆಕಾಶಗಂಗೆ.

ವೃ॥ ಬಿಸಿಲಂ ಛತ್ರದೆ ವಹ್ನಿಯಂ ಸಲಿಲದಿಂ ಮತ್ತೇಭಮಂ ಕೂರದಂ । ಕುಸದಿಂದೌಷಧದಿಂದೆ ರೋಗತತಿಯಂ ಮಂತ್ರಪ್ರಯೋಗಂಗಳಿಂ ॥ ಬಿಸಮಂ ದಂಡದೆ ಗೋವುಮಂ ಖರಮುಮಂ ತಾಂ ವಾರಿಸಲ್ಬಕ್ಕುಂ ಮಾ । ರಸೆಯೊಳ್ಮೂರ್ಖನ ಮೌರ್ಖ್ಯಮಂ ಕಳೆವ ಮರ್ದ್ದೊಂದಿಲ್ಲ ಶಾಸ್ತ್ರಂಗಳೊಳ್ ॥ ೧೧

## ವಿ ದ್ವ ತ್ಪ ದ್ಧ ತಿ .

ವೃ॥ ಸರಸಕಲಾಪರಿಷ್ಕೃತವಚರ್ನಯ ಬೋಧಕ ಸತ್ಕವೀನ್ದ್ರರಾ । ವರಸನ ನಾಡಿನೊಳ್ಬಡತನಂ ಬಡೆದಿರ್ಪ್ಪರೊ ತಾನದಾ ಮಹೀ ॥ ವರನ ಜಡತ್ವಮಲ್ಲದವರ್ಗ್ಗೇಂ ಧನಮಿಲ್ಲದೊಡಂ ಧನೇಶ್ವರರ್ ಕೊರತೆಯೆ ರತ್ನಗಳ್ಗೆ ಕುಪರೀಕ್ಷಕರಿಂ ಬೆಲೆಹೀನಮಾದೊಡಂ ॥ ೧೨

ವೃ॥ ಬಳೆಗುಂ ಕೊಟ್ಟೊಡಮರ್ಥಿಗಳ್ಗೆ ಸತತಂ ಚಿತ್ತಕ್ಕೆ ಮಾಳ್ಕುಂ ಸಿರ । ರ್ಗ್ಗಳ ಸಂತುಷ್ಟಿಯ ಗೋಚರಂ ಬಡೆಯದಿರ್ಕ್ಕುಂ ತಸ್ಕರರ್ಕ್ಕಳ್ಗಣಂ ॥ ಅಳಿವಂ ಪೊರ್ದ್ದದು ಕಲ್ಪದಂತದೊಳ್ ಮಾ ವಿದ್ಯಾ ಧನಂ ತಾನಿದಂ । ತಳೆದಿರ್ಪ್ಪಾರ್ಯರೊಳಾಂಪುದಲ್ತು ಮದಮಂ ಸತ್ಕೀರ್ತಿಕಾಮರ್ ನೃಪರ್ ॥ ೧೩

---

(೧೧) ಕೂರದ—ಕ್ರೂರವಾದ; ಬಿಸ—ವಿಷ; ಮರ್ದ್ದು—ಔಷಧ;

(೧೨) ಸರಸಕಲಾಪರಿಷ್ಕೃತವಚರ್—ರಸವಿಶಿಷ್ಟಗಳಾಗಿಯೂ ಶಾಸ್ತ್ರಗಳಿಂದ ಪರಿಷ್ಕರಿಸಿದವುಗಳಾಗಿಯೂ ಇರುವವಾಕ್ಕುಳ್ಳವರು; ನಯಬೋಧಕಸತ್ಕವೀಂದ್ರರ್—ನೀತಿಯನ್ನು ತಿಳಿಯಪಡಿಸುವ ಮಹಾಕವಿಗಳು; ಆವರಸನ—ಯಾವದೊರೆಯ; ನಾಡಿನೊಳ್—ದೇಶದಲ್ಲಿ; ತಾನದು—ಆ ಬಡತನದಿಂದಿರೋಣವು; ಆ ಮಹೀವರನ—ಆ ದೊರೆಯ; ಜಡತ್ವಂ—ಅಪ್ರಬುದ್ಧತೆಯು.

(೧೩) ಬಳೆಗುಂ—ವರ್ಧಿಸುವದು; ಮಾಳ್ಕುಂ—ಮಾಡುವದು; ಗೋಚರಂಬಡೆಯದೆ—ಪ್ರತ್ಯಕ್ಷವಾಗದೆ; ಇರ್ಕುಂ—ಇರುವದು; ತಸ್ಕರರ್ಕಳ್ಗೆ—ಕಳ್ಳರಿಗೆ; ಆಂಪುದಲ್ತು—ಹೊಂದುವದು ಯುಕ್ತವಲ್ಲ.

ವೃ॥ ಅವಮತಿಗೆಯ್ಯದಿರ್ ವಿಬುಧರಂ ಮುಳಿಸಾಂತೊಡೆ ತಾಮವರ್ ಮಹೀ । ಧವ ತವ ವೈಭವಂ ತೃಣನಿಭಂ ತಡೆಯಲ್ಕದು ಶಕ್ತಮಪ್ಪುದೇಂ ॥ ನವಮದರೇಖೆಯಿಂದೆ ಕರಿದಪ್ಪ ವಿಶಾಲ ಕಪೋಲ ಯುಗ್ಮದಿಂ । ತವೆ ಪರಿಶೋಭಿಪಾ ನೆಗಳ ವಾರಿಸ ಲೇಂ ಬಿಸ ಸೂತ್ರಮಾರ್ಪುದೇ ॥ ೧೪

ಕಂ॥ ಮುಳಿಯೆ ವಿಧಿ ಯಾನಹಂಸಕೆ । ನಳಿನೀ ವಿಹರಣ ವಿಲಾಸವಂ ತೊಲಗಿಸುವಂ ॥ ಜಲ ದುಗ್ಧ ವಿಭೇದನ ಕೌ । ಶಲ ಕೀರ್ತಿಯು ತೊಲಗಿಸಲ್ಕೆ ತಾಂ ನೆರೆದಪನೇ ॥ ೧೫

ಕಂ॥ ಕ್ಷಿತಿಯೊಳಲಂಕರಿಪುದು ಸಂ । ಸ್ಕೃತವಾಣಿಯದೊಂದೆ ಯುಡಿಗೆ ತೊಡಿಗೆಗಳಂ ದೇಂ ॥ ಕ್ಷತಿಯಾಂಪುವು ತೊಡವೆಲ್ಲಂ ಸತತಂ ವಾಗ್ಭೂಷಣಮೆ ಸುಭೂಷಣಮಲ್ತೇ ॥ ೧೬

ವೃ ॥ ವಿದ್ಯೆಯೆ ರೂಪು ವಿದ್ಯೆಯೆ ನಿಗೂಢ ಸುರಕ್ಷಿತಮಾದ ವಿತ್ತಮುಂ । ವಿದ್ಯೆಯೆ ಕೀರ್ತಿ ಭೋಗಕರಿ ವಿದ್ಯೆಯೆ ದೇಶಿಕರ್ಗೆಲ್ಲ ದೇಶಿಕಂ ॥ ವಿದ್ಯೆಯೆ ಬಂಧುವಪ್ಪುದು ವಿದೇಶದೆ ವಿದ್ಯೆಯೆ ರಾಜ ಪೂಜ್ಯಮುಂ । ವಿದ್ಯೆಯದಿಲ್ಲದಿರ್ಪ ಮನುಜಂ ಬಗೆಯಲ್ಪಶುವಲ್ತೆ ಧಾತ್ರಿಯೊಳ್ ॥ ೧೭

---

(೧೪) ಅವಮತಿಗೆಯ್ಯದಿರ್—ಅವಮಾನವನ್ನು ಮಾಡಬೇಡ ; ಮುಳಿಸಾಂತೊಡೆ—ಕೋಪವನ್ನು ಹೊಂದಿದರೆ ; ತಡೆಯಲ್ಕೆ ಶಕ್ತಮಪ್ಪುದೆ—ಅಡ್ಡಿಮಾಡಬಲ್ಲದೆ ; ತವೆ—ಚೆನ್ನಾಗಿ ; ವಾರಿಸಲು—ತಡೆಯುವದಕ್ಕೆ ; ಆರ್ಪುದೆ—ಶಕ್ತವಾದೀತೆ.

(೧೫) ಮುಳಿಯೆ—ಕೋಪಿಸಿಕೊಂಡರೆ ; ವಿಧಿ—ಬ್ರಹ್ಮನು ; ಯಾನ—ವಾಹನ ; ತೊಲಗಿಸುವಂ—ಪರಿಹರಿಸುವನು ; ನೆರೆದಪನೆ—ಸಮರ್ಥನಾದಾನೆ ?

(೧೬) ಕ್ಷಿತಿಯೊಳ್—ಭೂಮಿಯಲ್ಲಿ ; ಅಲಂಕರಿಪುದು—ಅಲಂಕರಿಸತಕ್ಕದ್ದು ; ಸಂಸ್ಕೃತವಾಣಿಯದೊಂದೆ—ಸಂಸ್ಕೃತಭಾಷೆಯೊಂದೆ ; ಉಡಿಗೆ ತೊಡಿಗೆಗಳು—ವಸ್ತ್ರಾಭರಣಗಳು ; ತೊಡವೆಲ್ಲಂ—ಆಭರಣಗಳೆಲ್ಲಾ ; ಕ್ಷತಿಯಾಂಪುವು—ಭಂಗವನ್ನು ಹೊಂದುವವು.

(೧೭) ವಿದ್ಯೆಯದು—ಪ್ರಸಿದ್ಧವಾದ ವಿದ್ಯೆಯು ; ಬಗೆಯಲ್—ಆಲೋಚಿಸಿದರೆ ; ಪಶುವಲ್ತೆ—ಪಶುವಲ್ಲವೆ,ಪಶುವೇ ಸರಿ ಎಂಬ ಅಭಿಪ್ರಾಯ.

ವೃ॥ ಜ್ಞಾತಿಯೆ ವಹ್ನಿ ನಾಣೆ ತೊಡವಾಪ್ತನೆ ಚಿತ್ತರುಜಾಹರೌಷಧಂ । ಖ್ಯಾತಿಯೆ ಶತ್ರು ಶಾಂತಿಗುಣವೇ ಕವಚಂ ವರವಿದ್ಯೆಯೇ ಧನಂ॥ ಕೌತುಕರೇ ಮಹಾಹಿಗಳು ದಾರಕವಿತ್ವವೆ ರಾಜ್ಯವೈಭವಂ । ಭೂತಲದಲ್ಲಿ ನೋಡೆ ಮನುಜಂಗಿವರಿಂ ಪೆರವಿನ್ನು ಮಿಕ್ಕುವೇ ॥ ೧೮

ವೃ॥ ದಯೆಯುಂ ಸೇವಕರಲ್ಲಿ ಬಂಧುಜನದೊಳ್ ದಾಕ್ಷಿಣ್ಯಮಂ ನಾಡೆ ದು । ರ್ನಯರೊಳ್ ಕ್ರೌರ್ಯವ ಪೂಜ್ಯರೊಳ್ ಕ್ಷಮೆಯ ಸಾಧುವ್ರಾತದೊಳ್ ಪ್ರೀತಿಯುಂ ॥ ನಯಮಂ ರಾಜರೊಳಾರ್ಯರೊಳೃಜುತೆಯುಂ ಶೂರತ್ವಮಂ ಶತ್ರುಸಂ । ಚಯದೊಳ್ ಸ್ತ್ರೀಜನದಲ್ಲಿ ಧೃಷ್ಟತೆಯುನಾಂತಿರ್ಪಾತನೇ ಬಲ್ಲವಂ ॥ ೧೯

ಕಂ॥ ಪರಿಹರಿಪುದಘವ ವಿಮಲೀ । ಕರಿಪುದು ಮಾನಸವ ನುಡಿಗೆ ಸತ್ಯವ ಕುಡುಗುಂ ॥ ಗುರುತೆಯ ನೀವುದು ಕೀರ್ತಿಯ । ಬರಿಕುಂ ಮದೇಂ ಮಾಡದಿಳೆಗೆ ಸಜ್ಜನಸಂಗಂ ॥ ೨೦

ಕಂ॥ ದೊರೆವಡೆದಿರ್ಪರ್ ಸುಕವೀ । ಶ್ವರರ್ಮಹಾಸುಕೃತಶಾಲಿ ಗಳ್ ರಸಸಿದ್ಧರ್ ॥ ಧರೆಯಲ್ಲಿ ಜರಾ ಮೃತಿಭಯ । ವಿರಹಿತವಾಗಿರ್ಪ ಕೀರ್ತಿಮಯವಿಗ್ರಹದಿಂ ॥ ೨೧

---

(೧೮) ಮನುಜಂಗೆ—ಮನುಷ್ಯನಿಗೆ ; ಜ್ಞಾತಿಯೆ — ದಾಯಾದಿಯೆ ; ನಾಣೆ—ನಾಚಿಕೆಯೆ ; ತೊಡವು—ಆಭರಣವು ; ಖ್ಯಾತಿಯೆ—ಕೋಪವೆ ; ಪೆರವು—ಅನ್ಯವಾದವುಗಳು.

(೧೯) ನಾಡೆ—ಚೆನ್ನಾಗಿ ; ದುರ್ನಯರೊಳ್—ದುಷ್ಟರಲ್ಲಿ ; ಕ್ರೌರ್ಯವ—ಕ್ರೂರತ್ವವನ್ನು ; ಆಂತಿರ್ಪಾತನೇ—ಧರಿಸಿಕೊಂಡಿರುವನೆ ; ಬಲ್ಲವಂ—ತಿಳಿದವನು.

(೨೦) ಗುರುತೆಯ—ದೊಡ್ಡತನವನ್ನು ; ಕುಡುಗುಂ—ಕೊಡುವುದು ; ಬರಿಕುಂ—ಬರಮಾಡುವದು ; ಏಂಮಾಡದು—ಯಾವ ಕಾರ್ಯವನ್ನು ತಾನೇ ಮಾಡುವದಿಲ್ಲ, ಅಂದರೆ ಎಲ್ಲವನ್ನು ಮಾಡುತ್ತೆ ಎಂದಭಿಪ್ರಾಯವು.

(೨೧) ದೊರೆವಡೆದು—ಪ್ರಸಿದ್ಧಿಯನ್ನು ಪಡೆದು ; ಇರ್ಪರ್—ಇರುವರು; ರಸಸಿದ್ಧರ್—ಸಿದ್ಧವಾದ ಶೃಂಗಾರಾದಿ ರಸವುಳ್ಳವರು (ಪಾದರಸ ಸಿದ್ಧಿಯುಳ್ಳವರು).

## ಶೌರ್ಯ ಪದ್ಧತಿ.

ವೃ॥ ಜರೆಯಿಂ ಜೀರ್ಣಮದಾದೊಡಂ ಪಸಿವಿನಿಂದಂ ಕ್ಷೀಣ ಮಾಗಿರ್ದೊಡಂ । ಪಿರಿದುಂ ಕಷ್ಟವ ನಾಂತೊಡಂ ಹರಣ ಮೊಂದುತ್ತಿರ್ದೊಡಂ ನಾಶಮುಂ ॥ ಕರಿಕುಂಭಸ್ಥಲ ಮಾಂಸಭಕ್ಷಣಮನೊಂದಂ ನಾಡೆ ವಾಂಛಿಪ್ಪ ಕೇ । ಸರಿಯೇಂ ಮೆಲ್ಗುಮೆ ಜೀರ್ಣಮಾದ ತೃಣಮಂ ಮಾನೋನ್ನತಾಗ್ರೇಸರಂ ॥ ೨೧

ವೃ॥ ಅಣುವಸೆ ಸೋರ್ದ್ದಣಂ ಮಲಿನಮಾಗಿ ನಿರಾಮಿಷಮಾದ ಗೋಸ್ಥಿಯಂ । ಪ್ರಣಯದೆ ಪೊರ್ದ್ದಿ ನಲ್ಮೆವಡೆಗುಂ ಶುನಕಂ ಪಸಿವಿಂಗದಿರ್ದೊಡಂ ॥ ಗಣಿಸದೆ ಸಾರ್ದ್ದ ಜಂಬುಕನ ನಾನೆಯ ಕೊಲ್ವೊಡೆ ಪೋಪುದಲ್ತೆ ಮಾ । ರಣರಿಪು ಕಷ್ಟದೊಳ್ಸಿಲರುಂ ನಿಜಶಕ್ತ್ಯನುರೂಪ ಕಾಂಕ್ಷಿಗಳ್ ॥ ೨೨

ಕಂ॥ ಬಾಲವನಾಡಿಸಿ ಸೀಳ್ತುತೆ । ಕಾಲಂ ಕೂಳೀವ ಗೊಡಲ ತೋರ್ಪ್ಪದು ಶುನಕಂ ॥ ಆಲಿಸಿ ಚಾಟೂಕ್ತಿಗಳಂ । ಲೀಲೆಯೊಳೀಕ್ಷಿಸುತೆ ಭೋಜಿಕುಂ ಗಜರಾಜಂ ॥ ೨೩

---

(೨೧) ಹರಣಂ—ಪ್ರಾಣವು ; ಒಂದುತ್ತಿರ್ದೊಡಂ—ಪಡೆಯುತ್ತಿದ್ದಾಗ್ಯೂ ; ಭಕ್ಷಣಮನೊಂದಂ—ಭಕ್ಷಣೆಯೊಂದನ್ನೇ ; ನಾಡೆ—ಚೆನ್ನಾಗಿ ; ವಾಂಛಿಪ್ಪ—ಅಪೇಕ್ಷಿಸುವ ; ಏಂಮೆಲ್ಗುಮೆ—ಮೆಲ್ಲುವದೇ ಏನು ; ಮಾನೋನ್ನತಾಗ್ರೇಸರಂ—ಬಹುಮಾನಿಯಾದದ್ದು.

(೨೨) ಅಣು—ಅಲ್ಪವಾದ ; ವಸ—ವಯಸ್ಸು ; ಅಣಂ—ಅಧಿಕವಾಗಿ ; ನಲ್ಮೆವಡೆಗುಂ—ಸಂತೋಷವನ್ನು ಪಡೆವುದು ; ಪಸಿವು—ಹಸಿವು ; ಪಿಂಗದಿರ್ದೊಡಂ—ಹಿಂಗದಿದ್ದರೂ ; ಸಾರ್ದ್ದ—ಹತ್ತರಬಂದ.

(೨೩) ಆಡಿಸಿ—ಅಲ್ಲಾಡಿಸುತ್ತ ; ಕೂಳೀವಗೆ—ಕೂಳನ್ನು ಕೊಡುವನಿಗೆ ; ಒಡಲ—ಹೊಟ್ಟೆಯನ್ನು ; ಆಲಿಸಿ—ಕೇಳುತ್ತ ; ಭೋಜಿಕುಂ—ಭೋಜನ ಮಾಡುವದು.

ಕಂ ॥ ಅರೀ ಪರಿವರ್ತನೆ ಸಂ । ಸಾರದೊಳಳಿದುದಿಸದಿರ್ಪ್ಪರಾರು
ದಿಸಿದುದಕ್ಕಿರ್ಗೀ ॥ ಧಾರಿಣಿಯೊಳ್ ನಿಜವಂಶಕೆ । ಗೌರವಮಂ ತಂ
ದೊಡಾತನೇ ಉದಿಸಿದವಂ । ೨೫

ಕಂ ॥ ಬಲ್ಲಿದನ ವರ್ತನಂ ತಾಂ । ಸೊಲ್ಲಿಸ ಲೆರಡಂಗಮುತ್ತಸು
ಮಗುಚ್ಛದವೋಲ್ ॥ ಎಲ್ಲರ ತಲೆಯೊಳ್ ಜೀರ್ಣಿಪ್ಪು । ದಲ್ಲದೊಡೆ
ವನಾಂತವಲ್ಲಿಯೇ ಜೀರ್ಣಿಸುಗುಂ ॥ ೨೬

ಕಂ ॥ ಗುರುಮುಖ್ಯ ಗ್ರಹಪಂಚಕ । ವಿರೆಯು ಮದಂ ತೊ
ರೆದು ಮೆರೆವ ದಿನಕರ ರಜನೀ ॥ ಶ್ವರರನೆ ಪರ್ವದೆ ಕಬಳಿಪ ।
ನುರು ಸಾಹಸ ರುಚಿ ಶಿರೋವಶಿಷ್ಟಂ ದನುಜಂ ॥ ೨೭

ಕಂ ॥ ಇಳೆದಳೆದಹಿಪನ ಕಮಠಂ । ತಳೆದುದು ಬೆನ್ನಿನೊಳ
ದಂ ನಿರಾದರದಿಂದಂ ॥ ಜಲಧಿ ವಡಾಪಕ್ಕೆ ವಶಂ । ಗೊಳಿಸಿತು ನಿಸ್ಸೀ
ಮವಲೆ ಮಹಾತ್ಮರ ಚರಿತಂ ॥ ೨೮

ಕಂ ॥ ಸುರಪಕರ ಕುಲಿಶ ಹತಿಯಿಂ । ಮರುಗುತ್ತಿರೆ ಜನಕ
ನಕಟ ಮೈನಾಕಂ ಸಾ ॥ ಗರದೊಡಲೊಳಡಗಿ ಬಾಳುವ । ಪರಿ
ಯಿಂದಮು ಮಸುವ ತೊರೆವುದೇ ವರಮಲ್ತೇ ॥ ೨೯

---

(೨೫) ಪರಿವರ್ತನ—ಮರಳಿಮರಳಿ ತಿರುಗುವದು; ತಾತ್ಪರ್ಯ—ತನ್ನ ಕುಲಕ್ಕೆ ಯಾವವನು ದೊಡ್ಡತನವನ್ನು ತರುವನೋ ಅವನೇ ಹುಟ್ಟಿದಾತನಲ್ಲದೆ ಮಿಕ್ಕವರು ಹುಟ್ಟಿದರೆಂಬ ಲೆಕ್ಕಕ್ಕೇ ಇಲ್ಲದವರು.

(೨೬) ಬಲ್ಲಿದನ—ಧೀರಮನಸ್ಸುಳ್ಳವನ; ಸೊಲ್ಲಿಸಲ್—ಹೇಳಬೇಕಾದರೆ; ಎರಡಂಗಂ—ಎರಡು ತರವಾದದ್ದು.

(೨೭) ತೊರೆದು—ಬಿಟ್ಟು; ಮೆರೆವ—ಅತ್ಯಂತ ತೇಜೋಮಯರಾದ; ಪರ್ವದೆ—ಪರ್ವಕಾಲದಲ್ಲಿ; ಕಬಳಿಪಂ—ನುಂಗುವನು; ಉರುಸಾಹಸರುಚಿ—ಬಹುಸಾಹಸಿಯಾದ; ಶಿರೋವಶಿಷ್ಟಂ—ತಲೆಮಾತ್ರ ಉಳಿದಿರುವ.

(೨೮) ಇಳೆವಳೆದ—ಭೂಮಿಯನ್ನು ಹೊತ್ತಿರುವ; ಅಹಿಪನ—ಆದಿಶೇಷನನ್ನು; ಅದಂ—ಆ ಕಮಠನನ್ನು; ನಿರಾದರದಿಂದಂ—ಅಸಡ್ಡೆಯಿಂದ; ವಶಂಗೊಳಿಸಿತು—ಸ್ವಾಧೀನಮಾಡಿತು; ನಿಸ್ಸೀಮವಲೆ—ಹೆಚ್ಚಾದದ್ದಲ್ಲವೆ.

(೨೯) ಮರುಗುತ್ತಿರೆ—ದುಃಖಿಸುತ್ತಿರಲು; ಜನಕಂ—ತಂದೆಯಾದ ಹಿಮವಂತನು; ಅಕಟ—ಅಯ್ಯೋ; ಸಾಗರದೊಡಲೊಳ್—ಸಮುದ್ರದ ಮಧ್ಯದಲ್ಲಿ; ಅಡಗಿ—ಅವಿತುಕೊಂಡು; ಪರಿಯಿಂದಮುಂ—ರೀತಿಗಿಂತಲೂ; ವರಮಲ್ತೇ—ಒಳ್ಳೇದಲ್ಲವೇ.

ಕಂ ॥ ತರಣಿಯ ಪಾದಂ ಸೋಂಕಿದೊ । ಡುರಿಗುಂ ಮುಚೇತ
ನ ಮದಾದೊಡಂ ರವಿಕಾಂತಂ ॥ ಉರುತೇಜೋನಿಧಿ ಪುರುಷಂ । ಪರ
ರೆಸಗಿದ ಪರಿಭವಕ್ಕೆ ಸೈರಿಸಿದಪನೇ ॥ ೩೦

ಕಂ ಸಿಂಗದ ಮರಿಯುಂ ಮತ್ತ ಮ ॥ ತಂಗಜ ಕುಂಭಗ
ಳೊಳೆ ರಗುವದು ತಾಂ ಸಹಜಂ ॥ ತುಂಗಬಲಶಾಲಿಯಾದ ನ । ರಂ
ಗೆ ವಯಂ ವಿಕ್ರಮಕ್ಕೆ ಕಾರಣಮಲ್ಲಂ ॥ ೩೧

## ಅ ರ್ಥ ಪ ದ್ಧ ತಿ .

ವೃ ॥ ಪಣಮೆಮಗೊಂದೆ ಮುಖ್ಯಮಲೆ ಜಾತಿ ರಸಾತಲದತ್ತ
ಪೋಕೆ ಸ । ದ್ಗುಣ ಮದರಿಂದ ಮಿನ್ನಡಿಗೆ ಬೀಳ್ಗೆ ಕುಲಂ ಶಿಖಿಯಿಂದೆ
ಬೇಗೆ ಮೇಣ್ ॥ ಮುಣುಗುಗೆ ಶೀಲ ಮಬ್ಧಿಗರಿಶೌರ್ಯಕೆ ತಾಗುಗೆ ಬಲ್
ಸಿಡಿಲ್ ಜರ । ತ್ತೃಣಕೆಣೆಯಪ್ಪುದಲ್ತೆ ಪಣಮಿಲ್ಲದೊಡೀಗುಣಮೆಲ್ಲ
ಮುರ್ವಿಯೊಳ್ ॥ ೩೨

ಕಂ॥ ಪಣಮುಳ್ಳವನೆ ಕುಲೀನಂ ॥ ಗುಣಿ ರೂಪಾಢ್ಯಂ
ಸಮಸ್ತ ವಿದ್ಯಾನಿಪುಣಂ ॥ ಎಣಿಸಲ್ವಾಗ್ಮಿಯು ಮಾತನೆ । ಗುಣಮೆಲ್ಲಂ
ಜಗದಿ ಪಣವ ನಾಶ್ರಯಿಸಿರ್ಕುಂ ॥ ೩೩

---

(೩೦) ಸೋಂಕಿದೊಡೆ—ಮುಟ್ಟಿದರೆ ; ಉರಿಗುಂ—ಜ್ವಲಿಸುವದು(ಕೋ
ಪಿಸಿಕೊಳ್ಳುವದು) ; ಪರರೆಸಗಿದ—ಅನ್ಯರು ಮಾಡಿದ ; ಸೈರಿಸಿದಪನೆ—ಸೈರಿಸು
ತ್ತಾನೆಯೆ.

(೩೧) ಸಿಂಗದ—ಸಿಂಹದ ; ಮತ್ತಮತಂಗಜ—ಮದಿಸಿದಆನೆ ; ಎರಗು
ವದು —ಮೇಲೆ ಬೀಳುವದು ; ಸಹಜಂ—ಸ್ವಾಭಾವಿಕವಾದದ್ದು ; ವಯಂ—
ವಯಸ್ಸು ; ಕಾರಣಮಲ್ಲಂ—ನಿಮಿತ್ತವಲ್ಲವು ; ತುಂಗಬಲಶಾಲಿಯಾದ—ಅಧಿಕ
ಬಲದಿಂದ ಒಪ್ಪುವ.

(೩೨) ಪಣಂ—ಹಣವು ; ಎಮಗೆ—ನಮಗೆ ; ಒಂದೆ—ಆವೊಂದೆ ;
ನಮಗೆ ಹಣವೊಂದೇ ಬೇಕೆಂದರ್ಥವು. ಉಳಿದ—ಮಿಕ್ಕ; ರಸಾತಲದತ್ತ—ರಸಾ
ತಲದ ಕಡೆಗೆ ; ಇನ್ನಡಿಗೆ—ಇನ್ನೂ ಕೆಳಕ್ಕೆ ; ಬೀಳ್ಗೆ—ಬೀಳಲಿ ; ಬೇಗೆ—ಬೇ
ಯಲಿ ; ಮೇಣ್—ಮತ್ತು ; ಪೋಕೆ- ಹೋಗಲಿ ; ಅರಿಶೌರ್ಯಕೆ—ಹಗೆಯಾ
ದ ಶೂರತನಕ್ಕೆ ; ತಾಗುಗೆ—ತಗಲಲಿ ; ಅಬ್ಧಿಗೆ—ಸಮುದ್ರದಲ್ಲಿ.

(೩೩) ಪಣಮುಳ್ಳವನೆ—ಹಣವಿರತಕ್ಕ ಮನುಷ್ಯನೇ ; ಗುಣಮೆಲ್ಲಂ—
ಎಲ್ಲಾ ಗುಣಗಳು ; ಎಣಿಸಲ್— ಯೋಚಿಸಿದರೆ ; ಆಶ್ರಯಿಸಿರ್ಕುಂ—ಆಶ್ರಯ
ಮಾಡಿಕೊಂಡಿರುವವು.

ವೃ ॥ ಯತಿ ಜನಸಂಗದಿಂ ನೃಪತಿ ದುರ್ನ್ನಯದಿಂ ದತಿಲಾಲನಂ ಗಳಿಂ । ಸುತ ನನಪೇಕ್ಷೆಯಿಂಕೃಷಿ ಯಧರ್ಮ್ಮದಿನೇಳ್ಗೆ ಧನಂ ಪ್ರಮಾದದಿಂ ॥ ಕುತನಯನಿಂ ಕುಲಂ ಮದಿರಿಂದಿಂ ಮತಿ ಶೀಲ ಮನಾರ್ಯ್ಯ ಸೇವೆಯಿಂ । ಶ್ರುತಿ ರಹಿತತ್ವದಿಂ ದ್ವಿಜ ನನಾದರದಿಂ ಕೆಳೆ ನಾಶ ವೈದುಗುಂ ॥ ೩೪

ಕಂ ॥ ಗತಿಗಳ್ಮೂರೇವಿತ್ತಕೆ । ವಿತರಣಮುಂ ಭೋಗಮುಂ ವಿನಾಶಮುಮೆಂದೀ ॥ ಕ್ಷಿತಿಯಲ್ಲಿ ಕುಡದ ಭೋಗಿಸ । ದತಿಲೋಭಿಯ ಧನಕೆ ಮೂರನೆಯ ಗತಿಯಕ್ಕುಂ ॥ ೩೫

ವೃ ॥ ಮದವಳಿದಾನೆ ನುಣ್ಮಳಲಳುರ್ದ್ದ ಶರನ್ನದಿ ನಾಡೆ ಸಾಣೆಯಿಕ್ಕಿದ ಮಣಿ ಕೈದುಗಾಯಮಡೆದಿರ್ಪ್ಪ ಭಟಂ ನಿಜನಾಥ ಸೇವೆಯಿಂ ॥ ಮೃದಿತೆ ಯೆನಿಪ್ಪ ಬಾಲೆ ಕಲೆಯೊಂದುಳಿದಿಂದು ಸುಪಾತ್ರ ದತ್ತ ಸಂ । ಪದನಹ ದಾನಿಯುಂ ಬಡತನಂ ಬಡೆದುಂ ಪರಿಶೋಭಿಪರ್ ಕರಂ ॥ ೩೬

ಕಂ ॥ ಸಿರಿಪಿಂಗಿದಂದು ಧನಿಕಂ । ಪಿರಿದಂ ದಪನೋದು ಸೇರೆ

---

(೩೪) ಅನಪೇಕ್ಷೆಯಿಂ—ನೋಡದೆಯಿರುವದರಿಂದ ; ಏಳ್ಗೆ—ಅಭಿವೃದ್ಧಿ; ಕೆಳೆ—ಮಿತ್ರತ್ವವು ; ನಾಶಮೈದುಗುಂ—ನಾಶವನ್ನು ಪಡೆಯುವದು.

(೩೫) ಕುಡದ—ದಾನಮಾಡದ ; ಅಕ್ಕುಂ—ಆಗುವದು.

(೩೬) ನುಣ್ಮಳಲಳುರ್ದ್ದ—ನುಣ್ಣಗಿರುವ ಮರಳುಕವಿದ ; ಸಾಣೆಯಿಕ್ಕಿದ—ಸಾಣೆಹಿಡಿದ ; ಕೈದುಗಾಯಮಡೆದಿರ್ಪ್ಪಭಟಂ—ಆಯುಧದಿಂದ ಗಾಯವನ್ನು ಪಡೆದಿರುವ ವೀರನು ; ಮೃದಿತೆಯೆನಿಪ್ಪ ಬಾಲೆ—ಬಳಲಿರುವ ಸ್ತ್ರೀಯು ; ಕಲೆಯೊಂದುಳಿದಿಂದು—ಒಂದೇಕಲೆಉಳಿದಿರುವ ಚಂದ್ರನು : ಸುಪಾತ್ರದತ್ತಸಂಪದಂ—ಸತ್ಪಾತ್ರದಲ್ಲಿ ಕೊಡಲ್ಪಟ್ಟ ಐಶ್ವರ್ಯವುಳ್ಳವನು ; ಬಡತನಂಬಡೆದುಂ—ಕೃಶತ್ವವನ್ನು ಮತ್ತು ದರಿದ್ರತ್ವವನ್ನು ಪಡೆದಿದ್ದಾಗ್ಯೂ ; ಕರಂ—ಅತಿಶಯವಾಗಿ ; ಪರಿಶೋಭಿಪರ್—ಒಪ್ಪುವರು.

(೩೭) ಸಿರಿಪಿಂಗಿದಂದು—ಐಶ್ವರ್ಯ ಹೋದಮೇಲೆ ; ಪಿರಿದಂದಪನಂ—ದೊ

ಪವಸವುಮನವಂ ॥ ಸಿರಿಕೊಡಿಸಂದು ಮುದದಿಂ । ಧರಣಿಯನೆಲ್ಲವ
ತೃಣಕ್ಕೆ ಸರಿಯೆಂಬೆಣಿಪಂ ॥ ೩೭

ಕಂ ॥ ಅರಸನೆ ಕೇಳ್ ಕ್ಷಿತಿ ಧೇನುವ । ಕರೆವೊಡೆ ನೀಂ ಕ
ರುವ ಪೊರೆವತೆರದಿಂ ಪ್ರಜೆಯುಂ ॥ ಪೊರೆ ಪುಷ್ಟಮಾಗಿರಲ್ಪ್ರಜೆ ।
ಕರೆವಪ್ಪುದಿಳೆ ಕಾಮಧೇನು ಪೋಲ್ ಕಾಮಿತಮಂ ॥ ೩೮

ವೃ ॥ ಪುಸಿ ಯಹುದೊಮ್ಮೆ ಸತ್ಯತರಮಾದಪ್ಪುದೊಮ್ಮೆ
ಕಠೋರವೊಮ್ಮೆ ಭಾ । ಪಿಸೆ ಮೃದುವಾದಿ ಯೊಮ್ಮೆ ಬಲುಹಿಂಸಕ
ವೊಮ್ಮೆ ದಯಾರ್ದ್ರವೊಮ್ಮೆ ಮೇಣ್ ॥ ಅಸುವಿಗುಮರ್ಥಕುಂ ಪೆ
ಸನುಕೊಂಡಿಹುದೊಮ್ಮೆ ಮಹಾವದಾನ್ಯ ಮಾ । ಗೆಸೆವಪ್ಪುದೊಮ್ಮೆ
ಲೋಕದೊಳನೇಕ ವಿಧಂ ನೃಪನೀತಿ ವೇಸಿಪೋಲ್ ॥ ೩೯

ಕಂ ॥ ಎಣಿಸಲ್ಕಾಜ್ಞಾ ದ್ವಿಜರ । ಕ್ಷಣಪಿತರಣ ಭೋಗಕೀರ್ತಿ
ಮಿತ್ರಾವನ ಷ ॥ ಡ್ಗುಣಗಳ ನುಳಿದಿರ್ಪ ಧಾ । ರಿಣಿಯೊಡೆಯರ
ಪಾತ್ರಯುದೊಳದೇಂ ಫಲಮಿಳೆಯೊಳ್ ॥ ೪೦

ವೃ ॥ ಬರೆದನೆನಿತ್ತಮಾನವನ ಫಾಲದೊಳಾ ಸರಸೀರುಹೋ
ದ್ಭವಂ । ದೊರೆವುದನಿತ್ತೆಯೂಷರದೊಳಂ ಪಿರಿದೈದದು ಮೇರುವ

---

ಷ್ಟನೆಂದು ಎಣಿಸುತ್ತಾನೆ: ಒಂದು ನೇರೆದವಸ—ಒಂದು ಕಾಳು ಧಾನ್ಯ;
ಸಿರಿಕೊಡಿಸಂದು—ಐಶ್ವರ್ಯ ಬಂದಾಗ.

(೩೮) ಕರೆವೊಡೆ—ಹಾಲುಕರೆಯುವದಕ್ಕೆ ಇಚ್ಛಿಸುವನಾದರೆ: ಪುಷ್ಟವಾಗಿರಲ್—ಪೋಷಿಸಲ್ಪಟ್ಟರೆ; ಕರುವ ಪೊರೆವತೆರದಿಂ—ಕರುವನ್ನು ಕಾಪಾಡುವಂತೆ; ಪೊರೆ—ರಕ್ಷಿಸು; ಪ್ರಜಾರಕ್ಷಣಪರನಾದ ಅರಸಿಗೆ ಸಂಪತ್ಸಮೃದ್ಧಿಯು ಉಂಟಾಗುವದೆಂದಭಿಪ್ರಾಯವು.

(೩೯) ಪೆಸನುಕೊಂಡಿಹುದು—ಒಂದರೊಡನೆ ಒಂದು ತಗಲಿಕೊಂಡಿಹುದು.

(೪೦) ಧಾರಿಣಿಯೊಡೆಯರ—ಭೂಮಿಪಾಲಕರ; ಅದೇಂಫಲಂ—ಫಲವೇನು; ಆಜ್ಞಾಶಕ್ತಿ ಮೊದಲಾದ ಷಡ್ಗುಣಗಳು ರಾಜನಿಗೆ ಅವಶ್ಯವಾಗಿ ಇರಬೇಕೆಂದಭಿಪ್ರಾಯವು.

(೪೧) ಎನಿತ್ತುಂ—ಎಷ್ಟು ಧನವನ್ನು; ಅನಿತ್ತೆ—ಅಷ್ಟು ಧನವೆ; ಊಷರದೊಳಂ—ಊಷರ ಭೂಮಿಯಲ್ಲಿಯೂ; ದೊರೆವುದು—ಸಿಕ್ಕುತ್ತೆ; ಪಿರಿದು

ಕ್ಷಿಯುಂ ॥ ಎಳೆಯದಿರಾಶ್ಚರ್ಯಂ ಬರಿದೆ ದೈನ್ಯವೆ ಧೈರ್ಯಮ ತಾಳು
ಕೂಪದೊಳ್ । ಕರಗವೆನಿತ್ತು ನೀರನೊಳಕೊಂಬುದ ನಿತ್ತನೆ ವಾ
ರ್ಧಿಯಲ್ಲಿಯುಂ ॥ ೪೧

## ದು ರ್ಜ ನ ಪ ದ್ಧ ತಿ.

ಕಂ ॥ ಪರಧನ ವನಿತಾಸ್ಪೃಹೆ ನಿ । ಷ್ಕರುಣತ್ವಂ ನಿರ್ನಿಮಿ
ತ್ತಕಲಹಂ ವೈರಂ ಸ ॥ ತ್ಪುರುಷ ಸ್ವಬಂಧುಜನರೊಳ್ । ಪಿರಿದಸ
ಹಿಷ್ಣುತೆ ಖಲರ್ಗ್ಗೆತಾಮಿವು ನೈಜಂ ॥ ೪೨

ಕಂ ॥ ಖಲನೆನಿತಾನುಂ ವಿದ್ಯೆಯ । ಕಲಿತಿರ್ದ್ದೊಡಮವನ
ನುಳಿಯ ವೇಳ್ಕುಂ ಬಲ್ಲರ್ ॥ ತಲೆಯೊಳ್ಮಣಿಯಿರ್ಪುದೆನುತಂ । ಮಲಗಿ
ಪರೇಂ ಮರ್ಗ್ಗಳಲ್ಲಿ ಕಾಳೋರಗನಂ ॥ ೪೩

ವೃ ॥ ವ್ರತಿಯೊಳ್ದಂಭವ ಜಾಡ್ಯಮಂ ವಿನಯಿಯೊಳ್ತೇಜಸ್ವಿ
ಯೊಳ್ಗರ್ವಮಂ । ಮತಿಹೀನತ್ವವ ಮೌನಿಯಾದನೊಳೆ ವಾಚಾಲ
ತ್ವಮಂ ವಾಗ್ಮಿಯೊಳ್ ॥ ಹಿತಮಂಪೇಳ್ವವನಲ್ಲಿ ದೈನ್ಯವ ಕೃಪಾಹೀ
ನತ್ವಮಂ ಶೂರನೊಳ್ । ಕಿತವರ್ ಕಲ್ಪಿಪರಿನ್ನದಾವ ಗುಣಮಂ ಶ್ಲಾ
ಘಿಪ್ಪರೋ ಕಾಣೆನಾಂ ॥ ೪೪

—ದಾರಿಸಬೇಡ : ಕರಗ—ಬಿಂದಿಗೆಯು ; ಎನಿತ್ತುನೀರಂ—ಎಷ್ಟುನೀರನ್ನು ; ಒಳ
ಕೊಂಬುದು—ಗ್ರಹಿಸುವದೊ ; ಅನಿತ್ತನೆ—ಅಷ್ಟನ್ನೇ.

(೪೨) ನಿಷ್ಕರುಣತ್ವ—ದಯಾಶೂನ್ಯತ್ವವು ; ನಿರ್ನಿಮಿತ್ತಕಲಹಂ—
ನಿಷ್ಕಾರಣವಾದ ಜಗಳ ; ಸತ್ಪುರುಷ ಸ್ವಬಂಧುಜನರೊಳ್—ಸತ್ಪುರುಷರಲ್ಲಿಯೂ
ತಮ್ಮ ಬಂಧು ಜನರಲ್ಲಿಯೂ ; ಪಿರಿದ ಸಹಿಷ್ಣುತೆ—ಹೆಚ್ಚಿದ ಅಸಹನವು ; ಖಲ
ರ್ಗ್ಗೆ—ದುಷ್ಟರಿಗೆ : ನೈಜಂ—ಸ್ವಾಭಾವಿಕಗಳು.

(೪೩) ಎನಿತಾನುಂವಿದ್ಯೆಯ—ಎಷ್ಟು ವಿದ್ಯೆಗಳನ್ನಾಗಲಿ ; ಉಳಿಯವೇ
ಳ್ಕುಂ—ಪರಿಹರಿಸಬೇಕು ; ಬಲ್ಲರ್—ತಿಳಿದವರು ; ಮಲಗಿಪರೆ—ಮಲಗಿಸಿಕೊ
ಳ್ಳುವರೆ.

(೪೪) ವ್ರತಿಯೊಳ್—ವ್ರತಾಚರಣೆಯುಳ್ಳವನಲ್ಲಿ ; ದಂಭವ—ಡಾಂಭಿಕ
ತ್ವವನ್ನು ; ಜಾಡ್ಯ—ಮೂರ್ಖತನ ; ಕಿತವರ್—ದುಷ್ಟರು ; ಇನ್ನದಾವಗುಣ
ಮಂ—ಇನ್ಯಾವ ಗುಣವನ್ನು ; ಕಾಣೆನಾಂ—ನಾನುಕಾಣೆನು.

ವೃ || ಪಿರಿದಪ ಲೋಭದಿಂ ಪೆರತು ದುರ್ಗುಣಮುಂಟೆ ಮಹಾತ್ಮಕತ್ವದಿಂ | ಪೆರತಘಮುಂಟೆ ಗೌರವದಿ ನಾಭರಣಂ ಪೆರತುಂಟೆ ವಿದ್ಯೆಯಿಂ || ಸಿರಿ ಪೆರತುಂಟೆ ಸತ್ಯದೆ ತಪಂ ಪೆರತುಂಟೆ ವಿಶುದ್ಧಭಾವದಿಂ | ಪೆರತಪ ತೀರ್ಥಮುಂಟೆ ಮರಣಂ ಪೆರತುಂಟೆ ಯಕೀರ್ತಿಯತ್ತಣಿಂ ||

ವೃ || ದಿನದೊಳ್ ಕಾಂತಿವಿಹೀನನಾದ ಹರಿಣಾಂಕಂ ಜವ್ವನಂಪೋದ ಕಾ | ಮಿನಿ ಪಂಕೇರುಹಪಜ್ತಿ ಪಿಂಗಿದ ಕೊಳಂ ವಿದ್ಯಾವಿಹೀನಾನನಂ || ಧನಕಾಂಕ್ಷೈಕಪರಂ ನೃಪಂ ಧನವಿಹೀನಂ ಸಜ್ಜನಂ ರಾಜರಾ | ಮನೆಯಂ ಪೊರ್ದಿರ್ದ ದುರ್ಜನಂ ಬಗೆಯಲ್ಕೇಳುಂ ಕಂಟಂಕಗಳವಲಂ || ೪೬

ಕಂ || ಅತಿಕೋಪಿಯಾವಪೃಥ್ವೀ | ಪತಿಗಿವನೆಂವಾತ ನೆಂಬನೇಹಮದಿಲ್ಲಂ || ಹುತವಹನಂಟದೊಡಿವನಾ | ಹುತಿಬೀವವನೆಂದು ಸುಡದೆ ಪೇಳ್ದೀಕ್ಷಿತನಂ || ೪೭

ವೃ || ಬಳಿಯಿರೆ ದಿಟ್ಟನೆಂಬರತಿ ದೂರದೊಳಿರ್ದೊಡೆ ಮುಗ್ಧನೆಂದಪರ್ | ಗಳಹುವನೆಂಬರುಕ್ತಿಪಟುವಂ ಸಲೆ ಸೈರಿಸೆ ಭೀರು

---

(೪೫) ಪಿರಿದಪ—ದೊಡ್ಡದಾದ : ಲೋಭದಿಂ—ಲೋಭಗುಣಕ್ಕಿಂತಲೂ ಪೆರತು—ಮತ್ತೊಂದು; ದುರ್ಗುಣಮುಂಟೆ—ದುರ್ಗುಣವಿರುವದೆ; ಪೆರತಘಂ—ಮತ್ತೊಂದು ಪಾಪವು; ಗೌರವದಿಂ—ದೊಡ್ಡತನಕ್ಕಿಂತಲು ; ಅಕೀರ್ತಿಯತ್ತಣಿಂ—ಅಪಕೀರ್ತಿಗಿಂತಲೂ.

(೪೬) ಜವ್ವನಂಪೋದ—ಯವ್ವನಹೋದಂಥಾ ; ಪಂಕೇರುಹಪಜ್ತಿಪಿಂಗಿದ—ಕಮಲಗಳಿಲ್ಲದ ; ಬಗೆಯಲ್—ಆಲೋಚಿಸಿ ನೋಡಿದರೆ; ಧನಕಾಂಕ್ಷೈಕಪರಂ—ಹಣದಾಶೆಯೊಂದೇವುಳ್ಳ.

(೪೭) ಇದಂ—ಈ ಮನುಷ್ಯನು ; ನೇಹಂ—ಸ್ನೇಹವು; ಅಂಟದೊಡೆ—ಸೋಕಿದರೆ; ಸುಡದೆಪೇಳ್—ಸುಡದೆ ಬಿಟ್ಟೀತೆ ಹೇಳು ; ಅಂದರೆ ಅತಿಕೋಪಿಷ್ಟನಾದ ಅರಸನ ಆಶ್ರಯವು ಅತ್ಯಂತಕಷ್ಟವಾದದ್ದು.

(೪೮) ಬಳಿಯಿರೆ—ಸಮೀಪದಲ್ಲಿದ್ದರೆ ; ಗಳಹುವಂ—ಹರಟುವವನು ;

ಪೊದಪರ್ ॥ ಖಳನಿವನೆಂದವರ್ ಸಹಿಸದಿರ್ದೊಡೆ ಸೇವಕರಂ ಮಹೀ
ವರರ್ । ತಿಳಿವೊಡೆ ಯೋಗಿಗಳ್ಗಮರಿದಪ್ಪುದು ಸೇವೆಯುದೆಂಬುದು
ರ್ವಿಯೊಳ್ ॥ ೪೮

ವೃ ॥ ದುರಿತಾತ್ಮಕರ್ಕಳೆನಿಪ್ಪ ಮಾನವರ್ಗಳಂ ರಾಷ್ಟ್ರಾಧಿಕಾ
ರಂಗಳಿಂ । ಪಿರಿದುತ್ಸಾಹಿಸಿ ಮೇರೆ ಮೀರಿ ನಡೆಯುತ್ತಂ ತನ್ನ ದುಷ್ಕ
ರ್ಮಮಂ ॥ ಸ್ಮರಣಂಗೆಯ್ಯದೆ ಸದ್ಗುಣಕ್ಕೆ ಪಗೆಯಾಗಿರ್ಪಂಗಣಂ
ವೈಭವಂ । ದೊರೆಯಲ್ ದೈವದಿನಾತನಾಳ್ವಿಳೆಯೊಳಾವಂ ಸೌಖ್ಯದಿಂ
ಬಾಳ್ದಪಂ ॥ ೪೯

ವೃ ॥ ಖಳರ ಸಖಿತ್ವಮೆಂಬುದು ಮೊದಲ್ ಪಿರಿದಾಗಿ ಬಳಿಕ್ಕೆ
ಮುಂಬಗಲ್ । ನೆಳಲಿನ ಮಾಳ್ಕೆಯಿಂದೆ ಕಿರಿದಪ್ಪುದು ಭಾವಿಸೆ ಸಜ್ಜ
ನರ್ಕಳಾ ॥ ಕೆಳೆತನಮಾದಿಯಲ್ಲಿ ಕಿರಿದಾದೊಡಮೇಂ ಕ್ರಮದಿಂ
ಮಹತ್ವಮಂ । ತಳೆವುದು ಪಿಂಬಗಲ್ನೆಳಲಿನಂತೆ ಪೊಲಾವಗಮೀ ಧರಿ
ತ್ರಿಯೊಳ್ ॥ ೫೦

ಕಂ॥ ತೃಣಮಂ ಮೆಲ್ವೇಣಕೆ ನೀ । ರುಣಿಯಾಗಿಹ ಮೀಂಗೆ
ಬಾಧೆಗೆಯ್ಯದೆ ಪರರಂ ॥ ತಣಿವ ಸುಜನರ್ಗೆ ನಿಷ್ಕಾ । ರಣ ವೈರಿ
ಗಳಲೆ ಕಿರಾತಧೀವರ ಪಿಶುನರ್ ॥ ೫೧

---

ಅರಿದಪ್ಪುದು—ಅಶಕ್ಯವಾಗುವದು ; ದಿಟ್ಟಂ—ಭೀತಿಯಿಲ್ಲದವನು.

(೪೯) ಪಿರಿದುತ್ಸಾಹಿಸಿ—ಹೆಚ್ಚಾಗಿ ಸಂತೋಷಪಡಿಸಿ.

(೫೦) ಮುಂಬಗಲ್—ಹಗಲಿನ ಪೂರ್ವಭಾಗ ; ಪಿಂಬಗಲ್—ಹಗಲಿನ ಕಡೆಯಭಾಗ.

(೫೧) ಮೆಲ್ವೇಣಕೆ—ಮೆಲ್ಲುವಜಿಂಕೆಗೆ ; ನೀರುಣಿಯಾಗಿಹ—ನೀರೇ ಆಹಾರವಾಗಿರುವ ; ತಣಿವ—ತೃಪ್ತಿಪಡುವ.

## ಸಜ್ಜನಪದ್ಧತಿ.

ವೃ॥ ಗುರುವೊಳ್ನಮ್ರತೆ ವಿದ್ಯೆಯಲ್ಲಿ ಕುತುಕಂ ಸತ್ಸಂಗ-
ದೊಳ್ವಾಂಛೆ ಶಂ । ಕರನೊಳ್ಭಕ್ತಿ ಜನಾಪವಾದದೆ ಭಯಂ ಸ್ವಸ್ತ್ರೀ-
ಯೊಳಾಸಕ್ತಿಯುಂ ॥ ಣರಿಯೊಳ್ಸ್ಪೃಹಸ ವೊಲ್ಮೆ ಯನ್ಯಗುಣದೊ-
ಳ್ದುಸ್ಸಂಗದೊಳ್ವರ್ಜನಂ । ತರಿಸಂದಿರ್ಪ್ಪವಿಚಾರರೊಳ್ ಸಜ್ಜನರಂ
ಸಂಪ್ರೀತಿಯಿಂ ವಂದಿಪೆಂ ॥ ೫೧

ಕಂ॥ ಸಿರಿಯೊಳ್ಸ್ಮರಣೆ ಕಷ್ಟದೊ ಳುರು ಧೈರ್ಯಂ
ಜಸದೊಳಾಸೆ ಶಾಸ್ತ್ರದೊಳೊಲವುಂ ॥ ಧುರದೊಳ್ಶೌರ್ಯಂ ಸಭೆ-
ಯೊಳ್ । ಪಿರಿದಹ ವಾಕ್ಪಟುತೆ ಸಜ್ಜನರ್ಗ್ಗಿವು ಸಹಜಂ ॥ ೫೨

ವೃ॥ ಗುರುಪದವಂದನಂ ಶಿರಕೆ ಹಸ್ತಕೆ ದಾನಗುಣಂ ಮುಖ-
ಕ್ಕೆ ಸು । ಸ್ಥಿರಮಹ ಸತ್ಯವಾಣಿ ಹೃದಯಕ್ಕೆ ವಿಶುದ್ಧತೆ ಬಾಹುಗಳ್ಗೆ
ಬಂ ॥ ಧುರತರ ಶೌರ್ಯಮಾಗಮವು ವಚಶ್ರವಣಂ ಕಿವಿಗಳ್ಗೆ ನಿರ್ಮ್ಮಲಾ ।
ಭರಣಮೆನಿಪ್ಪುದುತ್ತಮರೆನಿಪ್ಪವರ್ಗೈಸಿರಿ ಯಿಲ್ಲದಿರ್ದ್ದೊಡಂ ॥ ೫೩

ವೃ॥ ಪರಧನಕಾಶೆಗೆಯ್ಯದಿನಿಸುಂ ಪರಹಿಂಸೆಯ ಮಾಡದನ್ಯ-
ಸುಂ । ದರಿಯರ ಸುದ್ದಿಯಾಡದೆ ದುರಾಶೆಯು ತಾಳದೆ ತನ್ನೊಳಿರ್ದ್ದ-
ರ್ಧಂ ॥ ಎರೆದವರ್ಗಿಲ್ಲವೆನ್ನದನೃತೋಕ್ತಿಯನಾಡದೆ ಪೂಜ್ಯರಂ ನಿರಾ-
ಕರಿಸದೆ ಸರ್ವಭೂತದೆ ದಯಾಪರನಪ್ಪುದೆ ಸಾಧುವರ್ತನಂ ೫೪

---

(೫೧) ಕುತುಕಂ—ಕುತೂಹಲವು; ಒಲ್ಮೆ—ಪ್ರೀತಿಯು; ವರ್ಜನಂ—ಪರಿತ್ಯಾಗವು; ತರಿಸಂದು—ನಿಶ್ಚಯವಾಗಿ.

(೫೨) ಒಲವು—ಆಸಕ್ತಿಯು; ಧುರದೊಳ್—ಯುದ್ಧದಲ್ಲಿ; ಸಹಜಂ—ಸ್ವಭಾವಸಿದ್ಧಗಳಾದವುಗಳು.

(೫೩) ಸತ್ಯವಾಣಿ—ಯಥಾರ್ಥವಾದಮಾತು; ಐಸಿರಿ—ಐಶ್ವರ್ಯವು; ನಿರ್ಮ್ಮಲಾಭರಣಂ ಎಂಬ ಪದವನ್ನು ಸರ್ವತ್ರ ಅನ್ವಯಿಸಿಕೊಳ್ಳತಕ್ಕದ್ದು.

(೫೪) ಇನಿಸುಂ—ಸ್ವಲ್ಪವಾದರೂ; ತನ್ನೊಳಿರ್ದ್ದರ್ಧಂ—ತಾನು ಕೊಡುವುದಕ್ಕೆ ಕೈಲಾದಷ್ಟನ್ನು; ಸರ್ವಭೂತದೆ—ಎಲ್ಲಾ ಪ್ರಾಣಿಗಳಲ್ಲಿಯೂ; ಎರೆದವರ್ಗೆ—ಬೇಡಿದವರಿಗೆ.

ಕಂ॥ ಸಿರಿಯೊಳ್ಸತ್ಪುರುಷರ ಮನ । ವರಲ್ದುತ್ಪಲಕುಸು
ಮದಂತೆ ಕೋಮಲವೆನಿಕುಂ ॥ ಪಿರಿದಾದ ಕಷ್ಟದೊಳ್ಮನ । ಗಿರಿಯ
ಶಿಲಾಕೂಟದಂತೆ ಕರ್ಕಶವೆನಿಕುಂ ॥ ೫೬

ವೃ॥ ಹರಣಮೆ ಪೋದೊಡಂ ದುರಿತಕೃತ್ಯವ ಗೈಯ್ಯದೆ
ನೀತಿನಿಷ್ಠೆಗೋ । ಸರಿಸದೆ ಬೇಡದಲ್ಪಧನರಿಂದೆನಿಪಾಪ್ತರುಮಂ ದುರಾ
ತ್ಮರಂ ॥ ಎದೆಯುಡೆ ಕಷ್ಟದಲ್ಲಿ ಧೃತಿಗುಂದದೆ ಸತ್ಪುರುಷಾನುಕೂಲ
ಮಾ । ಗಿರುವ ಸುಮಾರ್ಗದ ವ್ರತವ ಸಾಸ್ವಜನಗ್ಗುಪದೇಶ ವಿತ್ತ
ರೋ ॥ ೫೭

ವೃ॥ ಸದನಕ್ಕೈತಂದವರಂ ಸಂತಸವಡಿಸ ಪೆರರ್ಗಾಣದಂತೀವ
ದಾನಂ ಮಾ । ಡಿದ ಸತ್ಕಾರಂಗಳಂ ಪೇಳದ ಪರರುಪಕಾರಂಗಳಂ
ಸರ್ವರೊಳ್ಸಂ ಮುದದಿಂದಂ ಪೇಳ್ವ ಸಂಪತ್ತಿನೊಳತಿನಯಮಾಂತಿ
ರ್ಪ ಮೇಣ್ಗರ್ವರಂ ದೂ । ರದುದಂಚತ್ಸದ್ಗಧಾರಾವ್ರತವನಿದನದಾ
ರ್ಸಜ್ಜನಗ್ಗೆಲ್ದು ಪೇಳ್ದರ್ ॥ ೫೮

ವೃ॥ ಜಲಧಿತಟಸ್ಥಶುಕ್ತಿಯೊಳಗುರುಳ್ದ ಜಲಂ ಪೊಸಮುತ್ತ
ನಿಸ್ಸುದಾ । ಜಲಮೆ ಸರೋಜಪತ್ರದೊಳಗುರುಳ್ದೊಡೆ ಮೌಕ್ತಿಕದಂತೆ
ತೋರ್ಕುವಾ ॥ ಸಲಿಲಮೆ ಕಾದ ಕಬ್ಬುನದ ಮೇಲುರುಳಲ್
ಪೆಸರುಂ ಮಸುಳ್ಗುಮಾ । ಬಳೆಯೊಳಗಿಂತುಟಾಗಿಸುವದುತ್ತಮ
ಮಧ್ಯಮನೀಚರಾಶ್ರಯಂ ॥ ೫೯

---

(೫೬) ಅರಲ್ದುತ್ಪಲ—ಅರಳಿದನೈದಿಲೆ.

(೫೭) ಹರಣಮೆ—ಪ್ರಾಣವೆ; ಓಸರಿಸದೆ—ಹಿಂದಕ್ಕೆ ಸರಿಯದ; ಎದೆ
ಬಿಡದೆ—ಹೇಸದೆ.

(೫೮) ಐತಂದವರಂ—ಬಂದವರನ್ನು; ಪೆರರ—ಮತ್ತೊಬ್ಬರು; ಈವ—
ಕೊಡುವ; ಒಲ್ದು—ಪ್ರೀತಿಸಿ.

(೫೯) ಉರುಳ್ದು-ಬಿದ್ದು; ಮಸುಳ್ಗುಂ-ಹೋಗುವದು; ಇಂತುಟು-ಹೀಗೆ.

ಕಂ॥ ಪಿತನ ನಿಜಗುಣದಿ ತೋಷಿಪ । ಸುತನೆ ಸುತಂ ಪತಿಗೆ ಹಿತವ ಬಯಸುವ ಸತಿಯೇ ॥ ಸತಿ ಸುಖದುಃಖದೊಳ್ ಸಮ । ಸ್ಥಿತಿ ಸಖನೇ ಸಖನಿವರ್ ಸುಕೃತದಿಂ ದೊರೆವರ್ ॥ ೬೦

ವೃ॥ ಮಣಿದಪರಾರ್ಜಿಸಲ್ಕಿಳೆಯೊಳುನ್ನತಿಯಂ ನಲವಿಂದ ಮನ್ಯರಾ । ಗುಣವ ಪೊಗಳ್ವರಾತ್ಮಗುಣಮಂ ಪ್ರಕಟೀಕರಿಸ ಲ್ಪರಾರ್ಥಮಂ ॥ ಪ್ರಣಯದೆ ಮಾಡುವ ಗ್ಗಳಪುದಕ್ಕೆ ನಿಜಾರ್ಥವ ಶಾಂತಿಯಿಂದೆ ದೂ । ಷಣಪರದುಷ್ಕರಂಮರುಗಿಪಗ್ಗಳಚಿತ್ರಚರಿ ತ್ರರುತ್ತಮರ್ ॥ ೬೧

## ಪ ರೋ ಪ ಕಾ ರ ಪ ದ್ಧ ತಿ .

ಕಂ॥ ತರುಗಳ್ಬಾಗುಗುವುರುಫಲ । ಭರದಿಂದೆ ಮುಗಿಲ್ನವಾಂ ಬುಭಾರದೆ ಜೋಲ್ಗುಂ ॥ ಸಿರಿಯೊಳ್ನಯಯುತರಾರ್ಯರ್ । ಪರಿ ಕಿಪೊಡೆ ಪರೋಪಕಾರಿಗಳ್ದಮ ಸಾಜಂ ॥ ೬೨

ಕಂ॥ ಕರ ಮೆಸೆಗುಂ ದಾನದೆ ಕಿವಿ । ಮೆರೆಗುಂ ಶ್ರುತದಿಂದೆ ಕಟಕಕುಂಡಲಗಳನೇಂ ॥ ಕರುಣಾಳುಗಳೊಡಲೆಸೆಗುಂ । ಪರಹಿತದಿಂ ಚಂದನಾನುಲೇಪನ ದಿಂದೇಂ ॥ ೬೩

ಕಂ॥ ಎರೆಯದೊಡಂ ರವಿಶಶಿಗಳ್ । ಸರಸಿಜ ಕುಮುದಂಗ ಳಂ ವಿಕಾಸಿಪ ರಂಭೋ ॥ ಧರಮುಂ ಸಲಿಲಮನೀವುದು । ಪರಹಿತ ಮಂತಾವೆ ಮಾಳ್ಪರುತ್ತಮ ಪುರುಷರ್ ॥ ೬೪

---

(೬೦) ಸಮಸ್ಥಿತಿಸಖ—ಒಂದೇರೀತಿಯಾಗಿರುವಮಿತ್ರ.

(೬೧) ಮಣಿದಪರ್—ಬಾಗುವರು; ನಲವಿಂದಂ—ಸಂತೋಷದಿಂದ; ಗಳ್ಪುದಕ್ಕೆ—ಸಂಪಾದಿಸಿಕೊಳ್ಳುವದಕ್ಕೆ; ಮರುಗಿಪರ್—ದುಃಖಪಡಿಸುವರು.

(೬೨) ಬಾಗುಗುಂ—ಬಗ್ಗುವವು; ಮುಗಿಲ್—ಮೋಡವು; ಜೋಲ್ಗುಂ—ಕೆಳಕ್ಕಿಳಿವುದು; ಪರಿಕಿಪೊಡೆ—ಆಲೋಚಿಸಿದರೆ; ಸಾಜಂ—ಸ್ವಭಾವಸಿದ್ಧವಾದದ್ದು.

(೬೩) ಕರಂ—ಹಸ್ತವು; ಎಸೆಗುಂ—ಶೋಭಿಸುವದು; ಶ್ರುತದಿಂದೆ—ಶಾಸ್ತ್ರಶ್ರವಣದಿಂದ; ಒಡಲ್—ಶರೀರ.

(೬೪) ಎರೆಯದೊಡಂ-ಯಾಚನೆಮಾಡದಿದ್ದರೂ; ಈವುದು-ಕೊಡುವದು.

ವೃ॥ ಸ್ವಾರ್ಥವ ಬಿಟ್ಟು ಲೋಕದೆ ಪರಾರ್ಥವ ಮಾಳ್ಪವರ
ತ್ತಮರ್ ಕರಂ । ಸ್ವಾರ್ಥಕೆ ಹಾನಿಗೆಯ್ಯದೆ ಪರಾರ್ಥಕೆ ಯತ್ನಿಪರಲ್ತೆ
ಮಧ್ಯಮರ್ ॥ ಸ್ವಾರ್ಥಕೆ ತಾಂ ಪರಾರ್ಥವ ವಿಘಾತಿಸುವರ್ನ್ನರರಾಕ್ಷಸ
ರ್ಗ್ಗಡಾ । ಸ್ವಾರ್ಥಮುಮಿಲ್ಲದಕ್ಕಟ ಪರಾರ್ಥವ ಕೀಳ್ವರ ನೇನನೆಂ
ದಪೆಂ ॥ ೬೫

ವೃ॥ ದುರಿತವ ಕೃತ್ಯದಿಂ ತೊಲಗಿಸಲ್ ಹಿತಕಾರ್ಯದೆ ಯೋ
ಜಿಸಲ್ ಗುಣೋ । ತ್ಕರವ ವಿಕಾಸಿಸಲ್ ಮರೆಸತಕ್ಕುದ ತಾಂ ಮರೆಯಿ
ಸಲ್ ವಿಪತ್ತಿನೊಳ್ ॥ ಪೊರೆಯಲು ಈಯಲುಂ ಸಮಯದೊಳ್ನೆ
ರೆದಿರ್ದ್ದಪನಾವನಾ ಮಹಾ । ಪುರುಷನೆ ಮಿತ್ರನೆಂದುಸಿರ್ವಪರ್ ನಯ
ಶಾಸ್ತ್ರವಬಲ್ಲ ಸಜ್ಜನರ್ ॥ ೬೬

ವೃ॥ ಒಡನೊಂದಿರ್ದ್ದೊಲವಿಂಗೆ ಪಾಲಿನಳಲಂ ನೋಡುತ್ತೆ
ನೀರಗ್ನಿಯೊಳ್ । ಕಿಡೆ ತನ್ನೀರದಳಲ್ಗಣಂ ಕುದಿಯುತಂ ಪಾಲಗ್ನಿ
ಯೊಳ್ಬೀಳಲಾಂ ॥ ತೊಡೆ ನೀರಂ ಕುತೆ ಕೂಡೆ ಸ್ವೈರಣೆಯು ತಾಂ
ತಾಳ್ದತ್ತು ಪಾಲಿಂತು ಸಂ । ಗಡಿಸಿರ್ಕ್ಕಂ ಗಡ ಸಾಧುಮೈತ್ರಿ ಯೆನು
ತಂ ಪೇಳ್ವರ್ ನಯಜ್ಞರ್ವಲಂ ॥ ೬೭

---

(೬೫) ತಾಂ—ತಾವು; ಗಡಾ—ಅಲ್ಲವೆ; ಕೀಳ್ವರ—ಕಿತ್ತುಹಾಕುವರನ್ನು; ಏನನೆಂಬಪೆಂ—ಏನೆಂದು ಹೇಳಲಿ.

(೬೬) ತೊಲಗಿಸಲ್—ನಿವಾರಿಸುವುದಕ್ಕೆ; ಮರೆಸತಕ್ಕುದ—ಗುಟ್ಟು ಮಾಡತಕ್ಕುದನ್ನು; ಮರೆಸಲ್—ಗುಟ್ಟುಮಾಡುವುದಕ್ಕೆ; ಪೊರೆಯಲುಂ—ಕಾಪಾಡುವುದಕ್ಕೂ; ಈಯಲುಂ—ಕೊಡುವುದಕ್ಕೂ; ನೆರೆದಿರ್ದ್ದಪಂ—ಸಮರ್ಥನಾಗಿರುವನೋ; ನಯಶಾಸ್ತ್ರವ—ನೀತಿಶಾಸ್ತ್ರವನ್ನು.

(೬೭) ಒಡನೊಂದಿರ್ದ್ದ—ಸಂಗಡ ಸೇರಿದ; ಒಲವಿಂಗೆ—ಪ್ರೀತಿಗಾಗಿ ಕಿಡೆ—ಇಂಗಲು; ತನ್ನೀರದ—ಆನೀರಿನ; ಅಳಲ್ಗೆ—ದುಃಖಕ್ಕೆ; ಆಂತೊಡೆ—ಉದ್ಯೋಗಿಸಲು; ಕೂಡೆ—ಸೊಗಡಲೆ; ತಾಳ್ದತ್ತು—ಧರಿಸಿತು; ಸಂಗಡಿಸಿರ್ಕ್ಕಂ ಗಡ—ಸೇರಿಕೊಂಡಿರುವದಲ್ಲವೆ.

ವೃ॥ ಒಂದೆಡೆ ಕೇಶವಂ ಪವಡಿಸಿರ್ಪನದೊಂದೆಡೆ ರಾಕ್ಷಸೋತ್ಕರಂ । ಸಂದಣಿಸಿರ್ಪುದೊಂದೆಡೆ ಶರಣ್ಬುಗೆ ಕಾಯ್ದನಗಾಳಿ ಶೋಭಿಕುಂ ॥ ಒಂದೆಡೆ ಬಾಡಬಾಗ್ನಿಯೆಸೆದಿರ್ಪುದದೊಂದೆಡೆ ಕಲ್ಪವಾರಿಭೃ । ದ್ವೃಂದಮದಿರ್ಪುದೆಂದೊಡೆ ಸಮುದ್ರನ ಪೆರ್ಮೆಯತರ್ಕ್ಯಮದ್ಭುತಂ ॥ ೪೮

ವೃ॥ ಪುಟ್ಟಿದನೋರ್ವನೇ ಕಮಠನುರ್ವಿಯ ಭಾರವನಾಂತ ಕಾರಣಂ । ಪುಟ್ಟಿದನೋರ್ವನೇ ಧ್ರುವನುಡು ಪ್ರಜವಂ ನಡೆಯಿಪ್ಪ ಕಾರಣಂ ॥ ಪುಟ್ಟಿದರೇಂ ಪರೋಪಕೃತಿಗೆಯ್ಯದೆ ಸುಮ್ಮನೆ ಪುಟ್ಟಿ ಸತ್ತವರ್ । ಪುಟ್ಟುವೆಸಾಯುವೇ ಜಗದೊಳತ್ತಿಯ ಪಣ್ಗಳೊಳೆನಿತ್ತೊ ಜಂತುಗಳ್ । ೪೯

ವೃ॥ ಬಿಡು ಮದವಂ ವಿವರ್ಜಿಸು ದುರಾಶೆಯ ಶಾಂತಿಯ ಪೊರ್ದು ಸತ್ಯವಂ । ನುಡಿ ದುರಿತಕ್ಕೆ ಪೇಸು ನಡೆ ಸತ್ಪಥದೊಳ್ ಸಲೆ ಸೇವಿಸಾರ್ಯರಂ ॥ ಪಿಡಿ ನಯಮಂ ಸುಕೀರ್ತಿವಡೆ ಮನ್ನಿಸು ಮಾನ್ಯರ ದುಃಖಿಯುಲ್ಲಿ ನೀ । ಸಿಡು ವಯುಮಂ ನಯಂಗೊಳಿಸು ವೈರಿಯುಮಂ ವಲಿದಾರ್ಯವರ್ತನಂ ॥ ೫೦

---

(೪೮) ಒಂದೆಡೆ - ಒಂದು ಸ್ಥಳದಲ್ಲಿ; ಸಂದಣಿಸಿರ್ಪುದು — ಗುಂಪಾಗಿರುವುದು; ಶರಣ್ಬುಗೆ — ಮರೆಹೊಗಲಿಕ್ಕಾಗಿ; ಕಾಯ್ದ-ರಕ್ಷಿಸಲ್ಪಟ್ಟ; ಪೆರ್ಮೆ - ಮಹಿಮೆಯು; ಅತರ್ಕ್ಯಂ— ಊಹಿಸಲಾಗದು.

(೪೯) ಪುಟ್ಟಿದಂ — ಹುಟ್ಟಿದಂಥ; ಪುಟ್ಟಿದರೇಂ — ಅಂದರೆ; ಮನುಷ್ಯನಾಗಿ ಹುಟ್ಟಿದಮೇಲೆ ಪರೋಪಕಾರವನ್ನು ಮಾಡದೆ ಸುಮ್ಮನೆಯಿದ್ದು ಸತ್ತವರೆಲ್ಲಾ ಹುಟ್ಟಿದವರೇ ಅಲ್ಲವೆಂಬ ಅಭಿಪ್ರಾಯ; ಎನಿತ್ತೊ ಜಂತುಗಳ್— ಎಷ್ಟೋ ಪ್ರಾಣಿಗಳು.

(೫೦) ಪೊರ್ದು — ಹೊಂದು; ಪೇಸು — ಅಸಹ್ಯಪಡು; ಸುಕೀರ್ತಿವಡೆ — ಒಳ್ಳೇ ಯಶಸ್ಸನ್ನು ಪಡೆಕೊ; ನಯಂಗೊಳಿಸು — ನಯಪಡಿಸಿಕೋ; ವೈರಿಯುಮಂ — ಹಗೆಯನ್ನಾದರೂ; ಇದು — ಈ ನಡತೆಯು; ಆರ್ಯವರ್ತನಂ — ಸಜ್ಜನರ ವೃತ್ತಿ; ವಲ್ — ನಿಶ್ಚಯವು; ಅಂದರೆ; ಇದೀಗ ಸಜ್ಜನರ ನಡತೆ ಎಂದು ಅಭಿಪ್ರಾಯ.

ಕಂ॥ ಪರಗುಣ ಪರಮಾಣುವ್ರಮಂ । ಗಿರಿಗೈದುಬ್ಬುವ
ಮಹೋಪಕಾರದೆ ಜಗಮಂ ॥ ಹರಿಸಂಬಡಿಪ ಕೃಪಾಮಯ । ಕರ
ಣತ್ರಯರೆನಿಪಸುಜನರಿಳೆಯೊಳ್ಕೆಲಬರ್ ॥ ೩೧

## ಧೈ ರ್ಯ ಪ ದ್ಧ ತಿ .

ಕಂ॥ ನೆಱುಗದೆ ವಿಷದಿಂ ಸಂತಸ । ವಡೆಯದೆ ಜಲನಿಧಿಯಂ
ಫಣಿಯಿ ನಮರ್ದದಿನನ್ನಂ ॥ ಕಡೆವುದು ವಿಬುಧಾಳಿ ಫಲಂ । ಬಡೆ
ವನ್ನಂ ತೊರೆಯರಾತ್ಮಕೃತ್ಯವ ಧೀರರ್ ॥ ೩೨

ಕಂ॥ ಎಡರಡಸುವುದೆಂ ದಂಜುತೆ । ತೊಡಗರ್ ಕಾರ್ಯವನೆ
ನೀಚರೆಡರಡಸಲೊಡಂ ॥ ಬಿಡುವರ್ಮಧ್ಯಮರೆಡರೆನಿ । ತಱಸಿದೊ
ಡಂ ತ್ಯಜಿಸರಾಂತಕೃತ್ಯವ ಧೀರರ್ ॥ ೩೩

ವೃ॥ ಬುವಿಯೊಳ್ಮಲ್ಗಿರ್ಪರೊರ್ಮೆಯೊರ್ಮೆ ಮಣಿಪರ್ಯಂ
ಕಾಗ್ರದೊಳ್ಮಲ್ಗಿರ್ಪರ್ । ಸವಿವರ್ ಶಾಕವ ನೊರ್ಮೆಯೊರ್ಮೆ ಸವಿ
ಪರ್ ಶಾಲ್ಯಂ ನವಂ ಜೀರ್ಣವ ॥ ಸ್ತ್ರಾವನಾಚ್ಛಾದಿಪರೊರ್ಮೆಯೊ
ರ್ಮೆ ಧರಿಪರ್ದಿವ್ಯಾಂಶುಕಾಳಿಂಗಳಂ । ಗಣಿಯಿಸರ್ದುಃಖಮಂ ಸುಖಮೆಂಬು
ದಂ ಗಣಿಪರೇಂ ಕಾರ್ಯಾರ್ಥಿಗಳ್ ಚಿತ್ತದೊಳ್ ॥ ೩೪

---

(೩೧) ಪರಮಾಣುವ್ರಮಂ — ಪರಮಾಣುವನ್ನಾದರೂ ; ಗಿರಿಗೈದು — ಬೆಟ್ಟಮಾಡಿ ; ಉಬ್ಬುವ — ಹಿಗ್ಗುವ ; ಕೆಲಬರ್ — ಕೆಲವರು.

(೩೨) ನೆಱುಗದೆ — ಭಯಪಡದೆ ; ವಿಷದಿಂ — ವಿಷದಿಂದ ; ಸಂತಸವಡೆಯದೆ — ಸಂತೋಷಪಡದೆ ; ಅಮರ್ದದಿನನ್ನಂ — ಅಮೃತ ಹುಟ್ಟುವವರೆಗೂ ; ಕಡೆದುದು — ಮಥಿಸಿತು ; ತೊರೆಯರ್ — ಬಿಡರು ; ಧೀರರ್ — ಧೈರ್ಯಶಾಲಿಗಳು ; ಫಲಂಬಡೆವನ್ನಂ — ಫಲವನ್ನು ಹೊಂದುವವರೆಗೂ ; ಆತ್ಮಕೃತ್ಯವ — ತಮ್ಮ ಕೆಲಸವನ್ನು.

(೩೩) ಎಡರ್ — ವಿಘ್ನವು ; ಅಡಸುವುದು — ಆವರಿಸುವುದು ; ತೊಡಗರ್— ಯತ್ನಿಸುವರು ; ತ್ಯಜಿಸರ್ — ಬಿಡರು ; ಆಂತಕೃತ್ಯವ — ಹಿಡಿದ ಕೆಲಸವನ್ನು.

(೩೪) ಬುವಿಯೊಳ್ — ಭೂಮಿಯಲ್ಲಿ ; ಒರ್ಮೆ — ಒಂದು ವೇಳೆಯಲ್ಲಿ ; ದುಃಖಂ ಸುಖಮೆಂಬುದಂ — ಅಂದರೆ : ಇದು ದುಃಖಕರವಾದದ್ದು ಇದು ಸುಖಕರವಾದದ್ದು ಎಂಬುವುದನ್ನು ; ಗಣಿಪರೇಂ — ಗಣನೆಮಾಡುತ್ತಾರೆಯೆ.

ಕಂ॥ ನಿಂದಿಕೆ ಮೇಣ್ಣುಯು ವಿದರಭಿ । ನಂದಿಕೆ ಸಿರಿ ಯೊಮ್ಮೆ ಬರ್ಕೆ ಪೋಕೆ ಯಥೇಷ್ಟಂ ॥ ಇಂದೇ ಮೃತಿಯೈದುಗೆ ಮೇಣ್ । ಮುಂನ್ಯೈದುಗೆ ನೀತಿಪಥವ ನುಳಿಯಂ ಧೀರಂ ॥ ೭೫

ಕಂ॥ ಕಡಿವಡಿಯುವೆ ಕಾಮಿನಿಯುರ । ಕಡೆಗಂಣಾಂಬಿಂದೆತೀವ್ರಕೋಪಾನಲಸಿಂ ॥ ಸುಡದೆ ಬಹುವಿಷಯಲೋಭ । ಕ್ಕೆಡೆಯಾಗದೆ ಬಾಳ್ವನಲೆ ಜಗತ್ರಯು ಪಿಜಯಂ ॥ ೭೬

ಕಂ॥ ಕೆಡುಕರ್ಕ್ಕೆಡುಕುಗಳಂ ಗೈ । ದೊಡ ಮೆನಿತುಂ ತೊರೆಯನಾತ್ಮಧೈರ್ಯವ ಧೀರಂ ॥ ಬಿಡುವನೆ ಯಧೋಮುಖಂಗೈ । ದೊಡ ಮೂರ್ಧ್ವಜ್ವಲನಮಂ ಹುತಾಶನನೊಡುಂ ॥ ೭೭

ಕಂ॥ ಧರಣೀಧರಶಿಖರವತ್ತಣಿ । ನುರುಳ್ದಂಗಂ ಚೂರ್ಣಮಕ್ಕೆಬೀಳ್ಗೆಮ ಶಿಖಿಯೊಳ್ ॥ ಉರಗಾಸ್ಯದೆ ಕೆಡೆಗೆ ಕರಂ । ವರಮೆಂಬರ್ ತೊರೆಯರಾತ್ಮ ಶೀಲವ ಧೀರರ್ ॥ ೭೮

ಕಂ॥ ಪರಿಕಿಸೆ ಸುಶೀಲವೃಳ್ಳಗೆ । ಹರಿ ಹರಿಣಂ ಶರಧಿ ಕುಲ್ಯಮನಲಂ ಸಲಿಲಂ ॥ ಸುರಗಿರಿ ಮೊರಡಿ ವಿಷಂ ಸುಧೆ । ಯುರಗಂ ತಾಂ ಕುಸುಮಮಾಲೆ ಯಪ್ಪುದು ಜಗದೊಳ್ ॥ ೭೯

---

(೭೫) ನಿಂದಿಕೆ—ನಿಂದಿಸಲಿ ; ಬರ್ಕೆ—ಬರಲಿ ; ಪೋಕೆ – ಹೋಗಲಿ ; ಐದುಗೆ—ಹೊಂದಲಿ ; ನೀತಿಪಥವ—ನ್ಯಾಯಮಾರ್ಗವನ್ನು ; ಉಳಿಯಂ—ಬಿಡನು.

(೭೬) ಕಡಿವಡೆಯುವೆ—ಛೇದವನ್ನು ಪಡೆಯುವೆ ; ಕಡೆಗಣ್ಣಂಬಿಂದೆ—ಕಟಾಕ್ಷವೆಂಬಬಾಣವಿಂದ ; ಸುಡದೆ – ದಹಿಸಲ್ಪಡದೆ ; ಎಡೆಯಾಗದೆ—ಗುರಿಯಾಗದ ; ಬಾಳ್ವನಲೆ —ಬಾಳುವನಲ್ಲವೆ.

(೭೭) ಕೆಡುಕರ್ – ಕೇಡಿಗಳು ; ಎನಿತುಕೇಡುಗಳಂ—ಎಷ್ಟುಕೇಡನ್ನಾದರೂ ; ಗೈದೊಡಂ—ಮಾಡಿದ ಗ್ಯೂ ; ತೊರೆಯಂ — ಬಿಡನು ; ಅಧೋಮುಖಂಗೈದೊಡಂ – ತಲೆಕೆಳಗಾಗಿ ಇಟ್ಟರೂ ; ಊರ್ಧ್ವಜ್ವಲನಮಂ – ಮೇಲುಮುಖವಾಗಿ ಉರಿಯುವದನ್ನು.

(೭೮) ಚೂರ್ಣಮಕ್ಕೆ—ಚೂರಾಗಲಿ ; ಮೇಣ್ – ಅಥವಾ ; ಕೆಡೆಗೆವ್ರು. ಬೀಳಲಿ.

(೭೯) ಹರಿ—ಸಿಂಹ ; ಕುಲ್ಯಂ—ಕಾಲುವೆ ; ಮೊರಡಿ—ಸಣ್ಣಗುಡ್ಡ—

ವೃ॥ ವಿನಯಂ ವಿದ್ಯೆಗೆ ಪೆರ್ಚಿದೈಸಿರಿಗೆ ಸಾಧುತ್ವಂ ಶಮಂ ಜ್ಞಾನಕಾ। ಜನನೆಗೆವರ್ಥಕೆ ಪಾತ್ರದಾನಮತಿ ಶೂರತ್ವಕ್ಕೆ ವಾಕ್ಸಂಯಮಂ ॥ ಘನಮಾಗಿರ್ಪ್ಪತಪಕ್ಕೆಶಾಂತತೆ ಸಹಿಷ್ಣುತ್ವಂ ಪ್ರಭುತ್ವಕ್ಕದೇಂ। ನೆನೆ ನಿರ್ವ್ಯಾಜತೆ ಧರ್ಮಕೆಲ್ಲ ಜನರ್ಗುಂ ಶೀಲಂಪರಂ ಭೂಷಣಂ ॥ ೮೦

ಕಂ॥ ತರು ಕಡಿವಡೆದೊಡ ಮೊಡನಂ। ಕುರಿಪ್ಪುದು ಶಶಿ ಕ್ಷಿತೆಯಾಂತೊಡಂ ವರ್ಧಿಸುವಂ ॥ ಧರೆಯೊಳಿದು ಸಾಜ ಮೆನ್ನುತೆ। ಪರಿತಾಪಂದಾಳರುತ್ತಮ ರ್ಕ್ಕಷ್ಟದೊಳಂ ॥ ೮೧

## ದೈ ವ ಪ ದ್ಧ ತಿ .

ವೃ॥ ಗುರುವೇಂ ಮಂತ್ರಿ ಸಿಜಾಯುಧಂ ಪವಿ ಬಲಂ ದೇವರ್ಕ್ಕಳೈರಾವತಂ । ಕರಿ ಸಗ್ಗಂ ಘನಮರ್ಗೆ ಮಾಹರಿಸಹಾಯಂ ಮತ್ತಮಿಂತಿರ್ದೊಡಂ ॥ ಸುರಪಂ ರಾಕ್ಷಸರಿಂದೆ ಭಂಗವಡೆದಂ ಸಂಗ್ರಾಮದೊಳ್ ಮಿಕ್ಕಜೇಂ। ವರ ಮಾತೇಂ ತೆಗೆ ಪೌರುಷಂ ವಿಫಲಮಕ್ಕುಂ ದೈವಮೇರಕ್ಷಕಂ ॥ ೮೨

ವೃ॥ ಇರುಳೊಳು ಮೂಷಕಂ ಕೊರೆದು ತಾನೆ ಮಹಾಕ್ಷುಧೆಯಿಂ ಕರಂಡದೊಳ್। ಸುರುಗಿದ ಸರ್ಪ ದಾನನದೆ ಬೀಳ್ದುದದಂ ಸಲೆತಿಂದು ತೃಪ್ತಿಯಿಂ ॥ ತಿರದೊಡನೈದಿತಾ ವುರಗನಾ ಬಿಲದಿಂದ ಮೆ ಮರ್ತ್ಯ ಸಂತಮಿರ್। ಪರಿಕಿಸೆ ಹಾನಿವೃದ್ಧಿಯೊಳ್ ದೈವಮೆ ಕಾರಣಮಲ್ತೆ ಧಾತ್ರಿಯೊಳ್ ॥ ೮೩

---

(೮೦) ಪ್ರಭುತ್ವಕ್ಕದೇನವೆ—ಪ್ರಭುತ್ವಕ್ಕೆ ಏನು ಒಡವೆಯೆಂದರೆ, ಇಲ್ಲಿ ಭೂಷಣಂ ಎಂದು ಸರ್ವತ್ರ ಅನ್ವಯಿಸಿಕೊಳ್ಳಬೇಕು.

(೮೧) ಕಡಿವಡೆದೊಡಂ—ಛೇದಿಸಲ್ಪಟ್ಟಾಗ್ಯೂ ; ಪರಿತಾಪಂದಾಳರ—ಸಂತಾಪವನ್ನು ಹೊಂದರು.

(೮೨) ಸಗ್ಗಂ—ಸ್ವರ್ಗವು ; ಇಂತಿರ್ದೊಡಂ—ಹೀಗೆಸಹಾಯವಿದ್ದರೂ ; ಭಂಗವಡೆದಂ—ಪರಾಜಯವನ್ನು ಹೊಂದಿದನು.

(೮೩) ಇರುಳೊಳು—ರಾತ್ರಿಯಲ್ಲಿ ; ಕರಂಡದೊಳ್—ಬುಟ್ಟಿಯಲ್ಲಿ ; ಸುರುಗಿದ—ಹಸಿವಿನಿಂದಬಳಲಿದ ; ಆನನದೆ—ಬಾಯಲ್ಲಿ ; ಸಂತಮಿರ್—ಸುಮ್ಮನಿರು.

ಕಂ ॥ ಹತಕಂತುಕದಂತೇಳ್ವಂ । ಮತಿವಂತಂ ದುಃಖಪತಿತ
ನಾದೊಡಮಿಳೆಯೊಳ್ ॥ ಮತಿಹೀನ ಮನುಜನಾಪ । ತ್ಪತನಂ ಮೃ
ತ್ಪಿಂಡಪತನವಂತೆವೊಲಕ್ಕುಂ ॥ ೮೪

ಕಂ ॥ ಕಡುವಿಸಿಲ ಬೇಗೆ ಶಿರಮಂ । ಸುಡೆ ತಾಳದ್ರುಮದ
ನೆಳಲ್ಗೆ ಬರೆ ಖಲ್ವಾಟಂ ॥ ಕಡೆದವರ ಫಲದೆ ತಚ್ಛಿರ । ವೊಡೆದುದು
ಗಡ ದೈವಹತಕ ನಾವೆಡೆ ಬಾಳ್ವಂ ॥ ೮೫

ಕಂ ॥ ಇನಶಶಿಗಳ್ಗಂ ಗ್ರಹಪೀ । ಡನಮುಂ ಗಜಪಕ್ಷಿಗಳ್ಗೆ
ಬಂಧನ ವಿದ್ವ ॥ ಜ್ಜನರ್ಗಂ ಬಹು ದಾರಿದ್ರ್ಯವ । ನನುಗೊಳಿಸಿದ
ವಿಧಿಯೆ ಬಲ್ಲಿದಂ ಮೂಜಗದೊಳ್ ॥ ೮೬

ಕಂ ॥ ಅಮೃತಾಂಗಂ ಮಹೌಷಧಿ । ರಮಣಂ ಶತಭಿಷ
ಗುಪೇತನೀಶಶಿರಸ್ಥಂ ॥ ಹಿಮಕರನಾತನುಮಂ ಬಿಡದ । ಮಹಾಕ್ಷ
ಯ ಮಕಟ ವಿಧಿಯು ಮೀರುವನಾವಂ ॥ ೮೭

ಕಂ ॥ ಬಿದಿ ಕುಂಬಾರನಂತೆ ಮನೋ । ಮೃದಮಂ ಮುದ್ದೆಯು
ನೊಡರ್ಚ್ಚಿ ತದನಾಪದ್ದಂ ॥ ಡದೆ ಘಟ್ಟಿಸಿ ಚಿಂತಾಚ । ಕ್ರದೆ ಸುತ್ತಿ
ಪಸಿನ್ನದೇನ ಗೈವನೊ ಕಾಣೆಂ ॥ ೮೮

---

(೮೪) ಹತಕಂತುಕದಂತೆ—ಹೊಡೆಯಲ್ಪಟ್ಟ ಚೆಂಡಿನಂತೆ ; ಆಪತ್ಪತನು—ವಿಪತ್ತಿಯಿಂದ ತಗ್ಗಿದದು.

(೮೫) ಕಡುವಿಸಿಲ—ಕಡಿದಾದಬಿಸಿಲಿನ ; ಬೇಗೆ—ತಾಪವು ; ಖಲ್ವಾಟಂ—ಬಟ್ಟತಲೆಯವನು ; ಕಡೆದ—ಬಿದ್ದ ; ಆವೆಡೆ—ಯಾವಸ್ಥಳದಲ್ಲಿ.

(೮೬) ಇನಶಶಿಗಳ್ಗಂ—ಸೂರ್ಯಚಂದ್ರರಿಗೂ ; ಅನುಗೊಳಿಸಿದ—ಉಂಟುಮಾಡಿದ ; ಬಲ್ಲಿದಂ—ಬಲವಂತನು.

(೮೭) ಶತಭಿಷಗುಪೇತಂ—ಶತಭಿಷಾನಕ್ಷತ್ರದಿಂದಕೂಡಿದವನು ಮತ್ತು ನೂರುಮಂದಿ ವೈದ್ಯರಿಂದ ಕೂಡಿದವನು ; ಕ್ಷಯಂ—ಕಲಾಹೀನತೆ ಮತ್ತು ಕ್ಷಯ ರೋಗ.

(೮೮) ಮನೋಮೃದಮಂ—ಮನಸ್ಸೆಂಬ ಮಣ್ಣನ್ನು ; ಒಡರ್ಚ್ಚಿ—ಮಾಡಿ ; ಆಪದ್ದಂಡದೆ—ವಿಪತ್ತೆಂಬ ದಂಡದಿಂದ.

ವೃ॥ ಎಲೆ ವಿಧಿ ಸಾಕದೇತಕೆ ಬಳಲ್ವೆ ದುರಾಗ್ರಹದಿಂ
ವಿಪತ್ತಿನೊಳ್ । ಕಲಿಗಳ ಧೈರ್ಯನಾಶವ ನಭೀಕ್ಷಿಪೆ ನೆಂದು ಜಡಾತ್ಮ
ನಲ್ತೆನೀಂ ॥ ಚಲಿಸುವುವೇಂ ಕುಲಾವನಿಧರಂಗಳವಾ ಪ್ರಳಯಾಂತದ
ಲ್ಲಿಯುಂ । ಜಲಧಿಗಳುಂ ಕರಂ ಬಲಿದ ತಮ್ಮಯ ಮೇರೆಯ ಮೀರಲಾ
ಪ್ಪುವೇ ॥ ೪೯

ಕಂ॥ ಧರೆಗೆ ತೊಡವೆನಿಪ ಸುಗುಣಾ । ಕರಪುರುಷೋತ್ತಮ
ನ ಪುಟ್ಟಿಪಂ ವಿಧಿಯೊಡನಾ ॥ ನರನಂ ಕ್ಷಣಭಂಗುರನಂ । ವಿರಚಿಸಿ
ದಪನಹಹ ವಿಧಿಗುವೇಂ ಗಾಂಪತನಂ ॥ ೫೦

ಕಂ॥ ಜನಪರ ನಾಶ್ರಯಿಸಿದೊಡಂ । ತನಗೆನಿತುಂ ಧಾತೃನೇ
ಮಿಸಿಹನನಿತಕ್ಕುಂ ॥ ಅನಿಶಂ ವರ್ಷಿಸೆ ಮೇಘಂ । ಪನಿ ಯೊಂದೆರ
ಡಲ್ತೆ ಚಾತಕಾಸ್ಯದೆ ಬೀಳ್ಗುಂ ॥ ೫೧

---

## ಕರ್ಮ ಪದ್ಧತಿ.

ವೃ॥ ವಿಧಿವಶರಾದ ನಿರ್ಜರರ ವಂದಿಸಲೇಂ ವಿಧಿವಂದ್ಯನೆಂ
ಬೊಡಾ । ವಿಧಿಯುಮವರ್ಗಂ ವಿಚಾರಿಪೊಡೆ ಕರ್ಮಕೆ ತಕ್ಕ ಫಲೋಪ
ಭೋಗಮಂ । ವಿಧಿಸುವ ನಾಥಲಂ ಜಗದೆ ಕರ್ಮದಧೀನವೆನಿಪ್ಪುದಂ
ತರಿಂ । ದಧಿಕಬಲಾಢ್ಯಮೆಂದೆನಿಪ ಕರ್ಮಮೆ ತಾನಭಿವಂದ್ಯಮುರ್ವಿ
ಯೊಳ್ ॥ ೫೨

---

(೪೯) ಕಲಿಗಳ—ಸಮರ್ಥರ; ಅಭೀಕ್ಷಿಪೆಂ—ನೋಡುವೆನು; ಅವು—ಈ ಕುಲಪರ್ವತಗಳು; ಬಲಿದ—ಸ್ಥಿರವಾಗಿ ನಿಂತಿರುವ.

(೫೦) ತೊಡವೆನಿಪ—ಆಭರಣಗಳೆನಿಸಿಕೊಳ್ಳುವ; ಪುರುಷೋತ್ತಮನ—ಉತ್ತಮ ಪುರುಷನನ್ನು; ಏಂಗಾಂಪತನಂ—ಏನು ಮೂರ್ಖತನ.

(೫೧) ಅಕ್ಕುಂ—ಆಗುವದು; ಪನಿ—ಹನಿ; ಬೀಳ್ಗುಂ—ಬೀಳುವವು.

(೫೨) ವಂದಿಸಲೇಂ—ವಂದಿಸಿದರೆ ಏನಾಯಿತು; ಅಂತರಿಂದೆ—ಆದಕಾರಣದಿಂದ.

ವೃ॥ ಕುಳಿತಂ ಕುಂಬರನಂತಜಂ ಭುವನಭಾಂಡಂಗೈವುತಂ ಏತರಿಂ। ಬಳಲ್ದಂ ವಿಷ್ಣು ದಶಾವತಾರ ಘನ ಕಾಂತಾರಾಂತದಲ್ಲೇತರಿಂ॥ ತಳೆದಂ ಭಿಕ್ಷುಕಲೀಲೆಯಂ ಧೃತಕಪಾಲಂ ರುದ್ರನಂತೇತರಿಂ। ತೊಳಲ್ವಂ ಬಾನೊಳಗರ್ಕನೇತರಿನಿಂ ತತ್ಕರ್ಮಮಂ ವಂದಿಪೆಂ॥

ವೃ॥ ಖಳರ್ಗಳ ನಾರ್ವರೆಂದೆನಿಪ ಮೂರ್ಖರ ಚೋರರ ಮಾಳ್ಪ ನಾಡೆ ಕಂ। ಗೊಳಿಸದ ವಸ್ತುವಂ ಕ್ಷಣದೆ ಕಾಣಿಪ ವೈರಿಯುಮಂ ಕ್ಷಣಾರ್ಧದೊಳ್॥ ಕೆಳೆಯನಮಾಳ್ಪ ಮೋಘವಿಷಮುಮಂ ಸುಧೆಗೈವ ಸುಕರ್ಮಮಂ ಮುದಂ। ದಳೆದಭಿವಂದಿಸಿಷ್ಟವಡೆ ನೀಂ ಬಿಡು ಕಷ್ಟಗುಣಂಗಳಾಸ್ಥೆಯಂ॥ ೯೪

ವೃ॥ ಸಿತಸೌಧಂ ಸವಿಲಾಸಕಾಮಿನಿಯರುಂ ಶ್ವೇತಾತಪತ್ರೋಜ್ವಲಾ। ಯತಭಾಗ್ಯಂ ದೃಢಗಾತ್ರತಾದಿಗಳುಮೆಲ್ಲಂ ಸಂಭವಿಕ್ಕುಂ ಪುರಾ॥ ಕೃತ ಸತ್ಕರ್ಮದೆ ಕಾಣ ತೀರಲದು ತಾಂ ಕೆಳೇ ತ್ರುಟತ್ತಂತುಸಂ। ಗತ ಮುಕ್ತಾಗಣದಂತೆ ಜಾರುಗುಮವೆಲ್ಲಂ ನಾಡೆ ನೋಡಲ್ವಲಂ॥

ಕಂ॥ ಪರಿಣಾಮವ ನವಧರಿಸುತೆ। ವಿರಚಿಪು ದುಚಿತಂ ವಿವೇಕಿ ಕಾರ್ಯಂಗಳ ತಾಂ। ತ್ವರೆಯಿಂ ಗೈದೊಡೆ ಫಲಿಸುವ। ವರೆಗಂ ಪೊಸುವುದು ಮನವ ಕಾರ್ಯವಿಪಾಕಂ॥ ೯೬

ವೃ॥ ಜನಿಸಿದೊಡೇನು ಕರ್ಮಧರೆಯೊಳ್ ಸಲೆ ಸತ್ಕ್ರಿಯೆಗೈಯ್ಯನಾವ ನಾ। ಮನುಜನೊಡಚ್ಛಗವಂ ಕಡಿದು ಬಾಳೆಯ

---

(೯೩) ಕುಂಬರನಂತೆ—ಕುಂಬಾರನಹಾಗೆ; ಅಂತು—ಹಾಗೆ; ಏತರಿಂ—ಯಾವವಿಧಿಯಿಂದ; ಬಾನೊಳಗೆ—ಆಕಾಶದಲ್ಲಿ.

(೯೪) ಕಂಗೊಳಿಸದ—ಕಣ್ಣಿಗೆಕಾಣಿಸದ; ಕೆಳೆಯನವಮಾಳ್ಪ—ಸ್ನೇಹಿತನನ್ನಾಗಿಮಾಡುವ; ಮುದಂದಳೆದು—ಸಂತೋಷವನ್ನು ಹೊಂದಿ; ಇಷ್ಟವಡೆ—ಇಷ್ಟಾರ್ಥವನ್ನು ಹೊಂದು.

(೯೫) ಸಿತಸೌಧಂ—ಉಪ್ಪರಿಗೆ; ಪುರಾಕೃತಸತ್ಕರ್ಮದೆ—ಪೂರ್ವಪುಣ್ಯದಿಂದ; ಕಾಣ—ಕಾಣೆಯಾ.

(೯೬) ಪರಿಣಾಮವ—ಕೊನೆಗೆ ಆಗುವದನ್ನು; ಅವಧರಿಸುತೆ—ನಿಶ್ಚೈಸಿ.

(೯೭) ಜನಿಸಿದೊಡೇನು—ಹುಟ್ಟಿಫಲವೇನು; ಕರ್ಮಧರೆಯೊಳ್—ಕರ್ಮ

ಹಾರಕಗೈಗೆ ಜೇಲಿಯುಂ ॥ ಕನಕದ ನೇಗಿಲಿಂದಿಳೆಯನುಳ್ತು ಪನೆಕ್ಕದ
ಹೊಲಕಾಗಿ ಚಂ । ದನತರುಕಾಷ್ಠದಿಂ ಪಚಿಸುವಂ ತಿಲಪಿಷ್ಟವ
ರತ್ನಪಾತ್ರೆಯೊಳ್ ॥ ೯೭

ಕಂ॥ ಫಲಿಸವು ವಿದ್ಯಾಕೃತಿಗಳ್ । ಕುಲಶೀಲ ನೃಪಾಶ್ರಯಂಗ
ಳುಂ ಮುಂತಪದಿಂ ॥ ಗಳಿಯಿಸಿಕೊಂಡಿಹ ಭಾಗ್ಯಮೆ । ಫಲಿಪುದು
ಕಾಲದೆ ನರಂಗೆ ವೃಕ್ಷಂಗಳವೋಲ್ ॥ ೯೮

ಕಂ॥ ಕಡಲುಂ ಮುಳುಗುಗೆ ಮೇರುವಿ । ನಡೆಗೈದುಗೆ ಕ
ಲಿಗೆ ನಿಪಿಲ ಕಲೆಗಳ ನೃಪರಂ ಎಡೆವಿಡದಾಶ್ರಯಿಸುಗೆ ಮೇಣ್ ।
ಪಡೆವಸಿತಲ್ಲದೆ ನರಂಗೆ ಮಿಗಿಲ್ಕೆ ತಪುದೇಂ ॥ ೯೯

ಕಂ॥ ಜಲದೊಳ್ ಶಿಖಿಯೊಳ್ ವನದೊಳ್ । ಜಲನಿಧಿಯೊ
ಳ್ಪರ್ವತಾಗ್ರದೊ ಳ್ಕಳಂಗುಳದೊಳ್ ॥ ಬಲುಮರವೆ ನಿದ್ರೆಗಳೊ
ಳಂ । ಸಲಹುವುದು ಮನುಷ್ಯನಂ ಪುರಾಕೃತಪುಣ್ಯಂ ೧೦೦

ಕಂ॥ ಬನಮುಂ ಪಟ್ಟಣಮಪ್ಪುದು । ಜನರೆಲ್ಲರ್ ಸ್ವಜನ
ರಪ್ಪರೀ ನೆಲನೆಲ್ಲಂ ॥ ಧನಕನಕವಸ್ತುಪೂರಿತ । ಮೆನಿಪ್ಪುದಣಂ ಪೂ
ರ್ವ ಪುಣ್ಯವುಳ್ಳಂಗನಿಶಂ ॥ ೧೦೧

---

ಭೂಮಿಯಲ್ಲಿ; ಸತ್ಕ್ರಿಯೆಗೈಯ್ಯದೆ—ಸತ್ಕಾರ್ಯವನ್ನು ಮಾಡದೆ; ಬಡಿಚ್ಚರ್
ದಂ—ಮಾಡುವವನು; ಹಾರಕಗೈಗೆ—ಹಾಂಕರದಹೊಲಕ್ಕೆ; ಉಳ್ತಪಂ—ಉಳು
ವನು.

(೯೮) ವಿದ್ಯಾಕೃತಿಗಳ್—ವಿದ್ಯೆಮತ್ತು ಆಕಾರಗಳು; ಮುಂ—ಪೂರ್ವ
ದಲ್ಲಿ; ಗಳಿಯಿಸಿಕೊಂಡಿಹ—ಸಂಪಾದಿಸಿಕೊಂಡಿರುವ; ಕಾಲದೆ—ದಾದಕ್ಕ
ಕಾಲದಲ್ಲಿ.

(೯೯) ಕಡಲುಂ—ಸಮುದ್ರವನ್ನು; ಎಡೆಗೆ—ಸಮೀಪಕ್ಕೆ; ಮಿಗಿಲ್
—ಹೆಚ್ಚು.

(೧೦೦) ಕಳಂಗುಳದೊಳ್—ಯುದ್ಧದಲ್ಲಿ; ಬಲುಮರವೆ—ಬಲವಾದ
ಮತ್ತೆ.

(೧೦೧) ಬನಮುಂ—ವನವುಕೂಡಾ; ಅಣಂ—ಅತ್ಯಂತವಾಗಿ.

ನೀತಿಶತಕಂ ಸಂಪೂರ್ಣಂ.

# ಕನ್ನಡ ಭರ್ತೃಹರಿ ಸುಭಾಷಿತಂ

## ಶೃಂಗಾರ ಶತಕಂ

ಕಂ॥ ಅಂಬುಜಭವಾದ್ಯರಂ ಹರಿ । ಶಾಂಬಕೆಯರ ಗೃಹಕೆ
ಕುಂಭದಾಸರಗೆಯ್ದಿಂ ॥ ತೆಂಬೊತಸುದಳ ನೆಸಿಪ್ಪಾ । ವಿಶಾಂಬುಪಿಗೆ
ಯಂಗೆ ತಃನೆ ಕುಃಬಿಡವೇಳ್ಕಂ ॥ ೧

ಕಂ॥ ನಗೆಯಿಂ ನಾಣಿಂ ಭಾವದೆ । ಬಿಗುಹಿಂ ಮೋಹ ಪಿಂದಿ
ರೂಗಿದರೆ ನೋಟಗಳಿಂ ॥ ಸೊಗಸಂ ಸೂಸುವ ನುಡಿಯಿಂ । ಜಗಳ
ದೊಳಿಂ ಬಗೆಯ ಬಂಧನಂಗಡದ್ಗೋಳ್ ॥ ೨

ಕಂ॥ ಸಿತುವ್ರಪ್ರ್ವಂ ಮುರಿದೀಕ್ಷಿಸ । ಕಡೆಗಣ ನಾಸ್ಮರಿವ
ಸಗೆ ಮನಂಗೊಳಸುವ ಮೆ ॥ ಲ್ನುಡಿಯುಂ ಬೆಡಗಿನ ನಡೆಯುಂ ।
ತೊಡವುಂ ಕೃತುವ್ರಮೆಸಿಪ್ಪವಸಿಯುಗ್ಗಳಂದಮುಂ ॥ ೩

ವೃ॥ ಸಿಡುವ್ರಪ್ರ್ವಂ ಮುರಿದೊರ್ಮ್ಮೆ ಭೂರಿಭಯದಿಂದಂ
ನಾಡೆ ತಳ್ತೊರ್ಮ್ಮೆ ನಾ । ಣ್ಚೆಗೊಂಡಾವಮದೊರ್ಮ್ಮೆ ಬಳ್ಳಿದಾಗಿ
ಸಿಂದಂ ಕೂಡಿ ತಾ ಮೊರ್ಮ್ಮೆನೋ ॥ ಳ್ಪಡುರಾಜಾಸನೆಯರ್ಕ್ಕಳಂ
ಗಜಮುಹಾಚತ್ದ್ರ್ಯಗ್ಗಿಲಾಸಂಗಳಂ । ದಿದಿರಿಪ್ಪೀದೆಸೆಯೆಯ್ದೆ ಸ್ಯದಿಳ
ಸಳಂ ಕೋಮಾತಿರುಷ್ಪಸಿಕಂ ॥ ೪

ವೃ॥ ಸೆಸಿಯೂರ್ಪ್ರೋಲ್ಲವೆಂಗಂ ಸರೋಜದಳಂ ಝುಂಕಿಸ್ಯ
ಕಣ್ತ್ವಿನ್ನನೇ । ಳಸುವಾಂಗದ್ಯುತಿ ಬಿಮ್ಮವೆತ್ತ ಪೂರವಾರ ಲೋಲಂ
ಬನೀಲಾಳಕಂ ॥ ಕುಸುಮಾಸ್ತ್ರದ್ವಿರದಕುಂಭವಂ ನಗುವವಕ್ಷೋ
ಜಂ ಮನೋಹಾರಿ ವಾ । ಗ್ರಸವಿಂತೆಲ್ಲಮ ಕಾಂತೆಯಗ್ಗಳ ಬಿರಿದುಂ
ಸ್ವಾಭಾವಿಕಂ ಭೂಷಣಂ ॥ ೫

ವೃ॥ ನಸುತೋರ್ಪ್ಪ ರ್ವಮುದ್ಧನಗೆ ರಸ । ವೊಸರ್ವೊಳ್ಪಡಿ
ಚಂಚಲಾಕ್ಷಿ ಲೀಲಾಗಮನಂ ॥ ಪೊಸತೆನಿಸೆ ಜೌವನಂಬಡೆ । ದಸಿಯ
ಳೊಳಾವುದು ಮನೋಜ್ಞಮಲ್ಲದುದಕ್ಕುಂ ॥ ೬

ವೃ॥ ಯುವತೀಪ್ರೇಮಪ್ರಸನ್ನಾಸ್ಯಮೆ ವರವೆನಿಕುಂ ನೀರ
ರಿಂದೀಕ್ಷಿಸಲ್ತ । ಕ್ಕುವರಲ್ಲಾಘ್ರಾಣಿಸಲ್ತಕ್ಕುವರೊಳವಳಸುಯ್ಯ
ಲ್ಕೆವಾತಾಲಿಸಲ್ತ ॥ ಕ್ಕುವರೊಳ್ಸಂಸ್ಪರ್ಶಿಸಲ್ತಕ್ಕುವರೊಳೆಸೆವವೆಂಯ
ಜೌವನಂ ಜಾನಿಸಲ್ತ । ಕ್ಕುವರಲ್ಲಾಸ್ವಾದಿಸಲ್ತಕ್ಕುವರೊಳಧರ
ವೆಂತೆತ್ತಲುಂ ತದ್ವಿಲಾಸಂ ॥ ೭

ವೃ॥ ಕೆಲಂದೊಳಗೆ ಹಂಸಿಗಳ್ಗ ಮನಸಂಚಲನ್ಮೇಖಲಾ । ಮಿಳ
ತ್ಕನಕಕಿಂಕಿಣೀವಲಯನೂಪುರಾರಾವದಿಂ ॥ ವಿಲೋಲಹರಿಣಾಂಗ
ನಾನಿಭಕಟಾಕ್ಷಪಾತಂಗಳಿಂ । ವಿಲಾಸಿನಿಯರುಃವನಂ ಮರುಳ್ಗೆಯ್ಯ
ದಿರ್ಪ್ಪರ್ವಲಂ ॥ ೮

ವೃ॥ ಕ್ರಮಕಂಪಿತಹಾರಪಯೋಧರೆ ಕುಂ । ಕುಮಪಂಕಕ
ಳವರೆ ಯಂಘ್ರಿರಣ ॥ ತ್ಸುಮಣೀಮಯನೂಪುರೆ ನೀರೆಯುದಾ ।
ರುಮನಾರಯೆ ಕೈಬಸುಗೆಯ್ವಳಣಂ ॥ ೯

ಕಂ॥ ಯುವತಿಯುರಬಲೆಯರೆಂಬಾ । ಕವಿಗಳ್ವಪರೀತವಚ
ನರಾಲೋಲಕಟಾ ॥ ಕ್ಷವಿಲಾಸಪಾತದಿಂ ವಾ । ಸವಮುಖರಂ ಗೆಲ್ದ
ವಧುಗಳಬಲೆಯರೆಂತೈ ॥ ೧೦

ಕಂ॥ ನಿಜವಾಕಾಂತೆಗೆ ಮಕರ । ಧ್ವಜ ನಾಜ್ಞಾಕರ ನೆನಿಪ್ಪ
ನಂತಲ್ಲದೊಡಾ ॥ ದ್ವಿಜರಾಜಮುಖಿಯ ನೇತ್ರಾಂ । ಬುಜಸೂಚಿತ
ಮಾತ್ರದೊಳ್ಪ್ರವರ್ತಿಸಿದಪನೇಂ ॥ ೧೧

ಕಂ॥ ಕಚಮುಂ ಸಂಯಮಿ ವಕ್ತ್ರಮುಂ ದ್ವಿಜಗಣಾಕೀರ್ಣಂ
ಕುಚದ್ವಂದ್ವಮುಂ । ಶುಚಿಮುಕ್ತಾಶ್ರಯ ಮಾಮಗಂ ನಯನಮುಂ
ಕೃಶ್ಯಂತಪಾರೀಣಮುಂ ॥ ತು ಚಕೋರಾಕ್ಷಿಕರಂ ಪ್ರಕಾಂತವೆನಿಕುಂ

ನಿನ್ನಂಗವೇಂ ಚಿತ್ರಮಂ । ವಚಿಪಂ ನೋಡಲೊಡಂ ಸಮಂತೆನಗೆ
ಚೇತೋರಾಗಮಂ ಪುಟ್ಟಿಕುಂ ॥ ೧೨

ಕಂ॥ ಪೊಸತೀ ಬಿಲ್ಲಾಳ್ತನಮೆಲೆ । ಬಿಸಜಾನನೆ ನಿನ್ನೊಳಂ
ತೆನಲ್ಕಾನಸಮಂ ॥ ಇಸುವೆಗಡಾ ಗುಣದಿಂದಮೆ । ಇಸೆ ನಿಶಿತಶಿಲೀ
ಮುಖಂಗಳಂದದರಿಂದಂ ॥ ೧೩

ಕಂ॥ ದೀಪಮುದಿರ್ದ್ದಂ ಮೇಣಾತ್ತ । ರಾಪತಿ ತಾರಾಗಣಂಗಳ
ದೊರ್ದ್ದಡಮಕಟಾ ॥ ಓಪಳನಗಲಿರ್ಪ್ಪನಗೇ । ನೇಪೊಳ್ತಂ ಲೋ
ಕಪಿದು ತಮೋಮಯಮೆನಿಕುಂ ॥ ೧೪

ವೃ॥ ಒಗೆಯಲ್ಪಕ್ಷೋಜ ಮುದ್ವೃತ್ತಮಿದತಿತರಳಂ ಲೋ
ಚನಂ ಚಂಚಲಂ ಭ್ರೂ । ಯುಗಳಂ ರಾಗಾಂಕ ಮೋಷ್ಠಂ ಮರುಗಿ
ಕೆ ಮನಮಂ ತಾಮಿವಂಗೋದ್ಭವಂ ಕೈ ॥ ಮಿಗೆ ಸಾಭಾಗ್ಯಾಕ್ಷರ
ವ್ಯೂಹಮ ಬರೆದನೆನಲ್ತೋರುಪೀ ನಿನ್ನ ರೋಮಾ । ಳಿಗಡಾ ಮ
ಧ್ಯಸ್ಥಮಾಗಿರ್ದ್ದೊಡ ಮಳಲಿಪುದಿಂತೇತರಂ ಕಾತರಾಕ್ಷೀ ॥ ೧೫

ಕಂ॥ ಗುರುಕುಚಭಾರದೆ ಶಶಿ ಭಾ । ಸುರಮದನದೆ ಭಾಸ್ವ
ದಧರಮಣಿಯಿಂದೆ ಶನೈ ॥ ಶ್ಚರಚರಣಂಗಳ ನೆಸೆವೀ । ತರುಣಿಗೆ ಬ
ಗೆಯಲ್ ಗ್ರಹೋಪಯುಕ್ತತೆ ಸಲ್ಗುಂ ॥ ೧೬

ಕಂ॥ ಮೊಗವೋ ಶಶಿಕಾಂತಂ ಕರ । ಯುಗಳಮೊ ನವಪ
ದ್ಮರಾಗ ಮಾಣಿಕೆಯ ಕುರುಳೋ ॥ ಳಗಳೊ ಮಹಾನೀಲಗಳೆನೆ । ಮು
ಗುಡಿಯ ರತ್ನಾಂಗಿಯೆಂಬೊಡೇಂ ಬಗೆವುಗದೇ ॥ ೧೭

ವೃ॥ ಆವಳ ಪಯೋಧರಂ ಘನತರಂ ಜಘನಂ ಸುಮನೋಜ್ಞ
ಮಾನನಂ । ಕುವಲಯಬಂಧುಕೃದ್ಯಮೆನುತುಂ ಬರಿದೇತಕೆ ಪಂಬ
ಲಿಪ್ಪನೀ ॥ ನವರೊಳಗಂತುಟಾಸೆ ನಿನಗುಳ್ಳೊಡೆ ಚಿತ್ತಮೆ ಮಾಡು
ಪುಣ್ಯಮಂ । ಭುವನದೆ ಕೊರ್ತವಸ್ತು ದೊರೆಕೊಳ್ವುದೆ ಸ್ವಪನೊ
ಡರ್ಚ್ಚದಕ್ಕುಮೇ ॥ ೧೮

ವೃ॥ ಮುಗಮುಗಿಪಚ್ಚ ಜೌವನದ ಸೊಸವಕಿಕ್ಕೆಸುಸಿಲ್ಗಳೊ
ವೆರ್ಮ್ರ್ದಲ್ । ಮುಗುಳ್ಗಳೆವ್ರೊತ್ತ ಬಲ್ಲಹನ ಗೆಲ್ಲದಬಲ್ಪೊಣೆ ಪೊಚ್ಚ
ಲಂಪಿನು ॥ ಜ್ಜುಗಗಳದೇಸಿಗಂ ವಲವೆನಲ್ಮರೆವೀ ಮಿಗಗಣ್ಣ ಪೆಣ್ಗ
ಳಂ । ತೊಗುಮಿಗೆವೆತ್ತ ಬೇಟದೆಡೆಯಾಟಗಳೊಕ್ಕಣಿಸಲ್ಕೆ ತಕ್ಕು
ವೇಂ ॥ ೧೯

ವೃ॥ ಶೃಂಗಾರೈಕರಸಾಶ್ರಯಂ ಪ್ರಣಯಹೃದ್ಯಂ ಸಮ್ಮದೋ
ಲ್ಲಾಸಿ ಯು । ತ್ತುಂಗ ಪ್ರೇಮಭರೋಜ್ಜ್ವಲಂ ಲಲಿತಸಂದರ್ಭಂ ಮ
ನೋಹಾರಿಯಾ ॥ ನಂಗೋತ್ಪತ್ತಿವಿಧಾಯಕಂ ವಿತತವಿಶ್ವಾಸಾರ್ದ್ರ
ಮಾಗಿರ್ಪ್ಪ ತ । ನ್ನಂಗೀ ನರ್ಮವಚಂಗಳಿಕ್ಕಟುಮೊಳೇಂ ನೀಳ್ಕೊ
ಳ್ವನ್ನೋ ಚಿತ್ತಮಂ ॥ ೨೦

---

## ಸಂಭೋಗವರ್ಣನಂ.

ಕಂ॥ ಅಸಿಯುಳದೊರ್ವ್ವ ಳ್ವನತರು । ವಿಸರದ ಬಳಸೆಳಲೊ
ಳಂತೆ ವಿಶ್ರಮಿಸುತ್ತಂ ॥ ಮುಸುರ್ವಸಸಿಗದಿರ್ಗಳಂ ವಾ । ರಿಸುತಂ
ಮೋಲುದಿನ ಸೆರಗಿನ್ನೆತರುತಿರ್ದ್ದಳ್ ॥ ೨೧

ಕಂ॥ ಇಸಿಯುಳ ಕಾಣದ ಮೊದಲಾ । ನನಮಂ ನೋಳ್ಪೊಲ್ಕೆ
ನೋಳ್ದ ಬಳಕವಳಾಲಿಂ ॥ ಗನರತಿ ಯಾಲಿಂಗಿಸೆ ಮೋ । ಹ್ತನುಗಳೊ
ಳೇಕತೆಯ ನೆಳಸಿದಪೆವಾವಾಚಂ ॥ ೨೨

ವೃ॥ ಜಾದಿಮಾಲೆ ಶಿರವಲ್ಲಿ ವಕ್ತ್ರದೊಳ್ । ಮೋದ ಮಾದ
ಮೊಡಲೊ ಳ್ಸುಕುಂಕುಮಾ ॥ ಮೋದಗಂಧ ಮುರದೊ ಳ್ಮದಾಲ
ಸ । ಸ್ತ್ರೀದಲಿರ್ದ್ದೊಡದೆ ಸಗ್ಗಮಲ್ತೆ ಪೇಳ್ ॥ ೨೩

ವೃ॥ ಮೊದಲೊಳ್ಮಾತ್ಮಾನೆನುತ್ತಂ ಸೊಮಡಿಸಿ ಬಳಕಂ ನಲ್ಕೆ
ಯೊನಾಂದು ಮೋ ಹ್ನಾ । ಮದೊಳಾದಂ ನಾಚ್ಚಿಮೋಚ್ಚಂದೆಗೆದು ಬಳ
ಕ ಬಲ್ಪಾರಿಮೋಹ ಸ್ನೇಹಸಾರ । ಹ್ರದದೊಳ್ಮಂದಾಪರಂ ಕೃಪಿಗೆ

ಸುಸಿಲವಿಲಾಸಂಗಳಂ ಬೀರಿ ಮೋಣಂ । ಗದಿಸಂಗಂ ಕೂಡೆ ನೀಡುಂ
ಸೊಗವಡಿಪ ಕುಲಸ್ತ್ರೀರತಂ ರಮ್ಯಮಲ್ತೇ ॥ ೭೪

ಕಂ॥ ಅರೆಮುಚ್ಚಿದಕಣ್ಮಲರಿಂ । ಪರೆದಲಕದೆ ಬೆಮರ್ವರ್ಕ
ದಪಿನಿಂ ರತಿಖೇದಂ ॥ ಬೆರಸುರವೆ ಮಱುಗಿವಸುಂ । ವರಿಯರ ತುಟಿ
ಯುಮರ್ವರ್ ನೀಂಟುವಕೃತಪುಣ್ಯರ್ ॥ ೭೫

ಕಂ॥ ಅರೆಮುಗುಳ್ದನೇತ್ರದಿಂ ಸುಖ । ಪರವಶಮಿಪ್ಪರ್ಂವು
ಜಾನದಿಂ ಸ್ಫುರಿಸಿದ ತ ॥ ತ್ಸುರತರಸಂ ಸ್ಮರಜೀವನ । ಕರವೊಂ
ಪವಧರಿಸ ವೇಳ್ಕುಮಲೆಕಾವಲರಿಂ ॥ ೭೬

ಅನುಚಿತಮಲೆ ಮುಪ್ಪಿನೊಳಂ । ಮನುಜ ಸ್ಮರ್ರನಾಟಕಾ
ಟಪುದುಮಸಿಯುಗ್ರಂ ॥ ಸ್ತನ ಮಿಳಿವನ್ನೆವರಂ ಜೀ । ವನಮುಂ
ರತಮು ನಶ್ಲಾಜಂ ಮಾಡಮುಮಂ ॥ ೭೭

ವೃ॥ ಧರಣಿಯೊಳಾವ ನಾಸೆಗಡಲಂಶಮ ನೆಯ್ದಿದ ನೆನ್ಮಿ
ಜೌವನಂ । ಪರಿಪಡೆ ದೇಪದಿಂ ಗಳಸಿದರ್ಥದಿ ಸಿನ್ನೆಮಗೇಂ ಪ್ರ
ಯೋಜನಂ ॥ ತೆರಳ್ದಪೆವೆಮ್ಮ ಮಂದಿರಕೆ ನೈದಿಲೆಗಣ್ಗಳ ಕೂರ್ತ
ಕೆಣ್ಗಳೊ । ಳ್ಪರಿಜನಡರ್ತು ಪಾಪಿಜರೆ ಲೋಪಿಸುವನ್ನೆಗ ಮಾ
ವಿಳೇಪ್ಪರಾ ॥ ೭೮

ವೃ॥ ಎಸಿಸಲ್ ರಾಗದ ಬೀಡು ಮೋಹ ನರಕದುಃಖಂಗಳ್ಗ
ದಾಡುಂಬೊಲಂ । ಕಣಿ ಸಂಮೋಪಕೆ ಕಾಮ್ಯರ್ಗಿಲ್ಕಣಮಾದಂ
ಜ್ಞಾನಚಂದ್ರಂಗೆ ಪೂ ॥ ಗಣೆಯಂಗಳ್ಕರ ಮಿತ್ರ ಸಿನ್ನಸಿರ್ವ್ವದೇಂ
ದೋಷಂಗಳ್ಗಳ್ಕೆ ಕಾ । ರಣ ವಿನಾಯಪೌಪನ ಮಿನ್ನನರ್ಥ ಮಿದರಿಂ
ಬೇರುಂಟೆ ಲೋಕಂಗಳೊಳ್ ॥ ೭೯

ವೃ॥ ಜಲವಂ ಶೃಂಗಾರಭೂಮಿಜಾಟಕೆ ಪೂಳ್ ನವಕೇಳೀರಸ
ಕ್ಕಿಷ್ಟಮಿತ್ರಂ । ಮಲರಂಬಂಗಿಗಡಲ್ ಜಾಣ್ಮುಡಿ ರತುನಕೆ ಚಂದ್ರಂ
ಪಥಾದೃಕ್ಚಕೋರಾ ॥ ವಳಗುಪ್ಪವದ್ರೂಪಸಂಪತ್ತಿಗೆ ಸಿಧಿಯೆಸಿಬ್ಬೋ

ಯೌವನಂಪ್ರೌಢಿರ್ದ್ಧಿಯುಂ ಭೂ । ತಲದೊಳ್ ಚೇತೋವಿಕಾರಂ
ಪಡೆಯದ ಮನುಜಂ ಪೇಳಲೇಂ ಪೃಥ್ವೀನತ್ತೇ ॥ ೩೦

ವೃ॥ ತಾವರೆಗಣ್ಣಿನ ಚ್ಚಬೆಳುದಿಂಗಳ ಬಣ್ಣದುರೋಜ ಕುಂ
ಭಭಾ । ರಾವಹ ನಮ್ರಮಧ್ಯದ ರಣನ್ಮಣಿಕಾಂಚಿಯ ಚಂಚಲಾಂಗಿ
ಯರ ॥ ತಾವೆಡೆಗೊಳ್ಳದಿರ್ದ್ದೊಡೆ ಕುಸಂಸ್ಕೃತಿಯೊಳ್ ಸಮುದಾತ್ತ
ಚಿತ್ತಮಂ । ಕೋವಿದರೀವರೇಂ ಕುನೃಪಸೇವಕವಾಟವ ಕಾವ
ಸೇವೆಗಂ ॥ ೩೧

ವೃ॥ ಹರವೃಷ ಶೃಂಗಭುಗ್ನತರುವಿಂ ಮುನಿವಾಸಿತ ಕಂದ
ರಂಗಳಿಂ ॥ ಪರಿಪೂರುಗಂಗೆಯಿಂ ಸೊಗಮನೀವ ಹಿಮಾದ್ರಿಯತಪ್ಪ
ಲಿಪ್ಸಿರ್ನಂ ॥ ಸ್ಮರವಿಜಯಾಸ್ತ್ರಮಪ್ಪ ಹರಿಣಾಕ್ಷಿಯರಿಲ್ಲದೊಡುತ್ತ
ಮಾಂಗಮಂ । ಪರನಮನಕ್ರಿಯಾಮಲಿನಮಂ ಗೆಯಲಾಟಪರೇಂ
ಮನಸ್ವಿಗಳ್ ॥ ೩೨

ಕಂ॥ ಘಡ ಸಂಸಾರವ ಸಿನ್ನಯ । ತಡಿಗಾಣ್ಬುದು ಕಷ್ಟ
ಮಲ್ತು ಸಿನ್ನಂತರದೊಳ್ ॥ ಕಡೆವಾಯಲರಿದೆನಿಪ್ಪೀ । ಬೆಡಗಿನ
ಮಡದಿಯರ್ಗ್ಗಳಲ್ಲದೊಡೆ ನಿಜದಿಂದಂ ॥ ೩೩

ವೃ॥ ಕುಡು ವನದೇಣಿಗಳ್ಗೆ ಪರಿತೀಕ್ಷ್ಣ ಶಿಲಾಂಚಲದಿಂದೆ
ಮೂಲವಂ । ಬಿಡಿಸಿ ಕರೀರದಂತೆ ಪಸುರೇರಿದ ಪ್ರೊಚ್ಚಗರುಂಕೆ
ಮೇಪವೇಳ್ ॥ ಕುಡು ಶುಕವಾಣಿಯರ್ಗ್ಗೆ ಕಕದೇಶ ವಧೂಸುಕ
ಪೋಲವಂತೆಬೆ । ಳ್ಪಡಿದು ತೊಳಪ್ಪ ವೀಳೆಯವ ನೆಳ್ಳಗುರಿಂದುಡಿ
ದೋಲ್ಕೆಯಿರ್ದ್ದೆನೀಂ ॥ ೩೪

ವೃ॥ ಎಡೆಗೊಂಡೀ ವನಿತಾದಿ ದುರ್ವಿಷಯ ಮೆಲ್ಲಾ ದೋಷ
ಕಾಡುಂಬೊಲಂ । ಕಡೆಯೊಳ್ ನೀರಸಮುಂ ನಿರರ್ಥಮು ಮೆನುತ್ತಂ
ಮಾಣ್ಬಲ್ಲರ್ದ್ದಲಾ ॥ ದೊಡಮೇಂ ಲೋಕಹಿತಾರ್ಥದಿಂ ಪಿರಿದು
ಪುಣ್ಯಂ ಬೇರದೊಂದಿಲ್ಲನೋ । ಳ್ಪೊಡೆ ಸಾರಂ ಸರಸೀರುಹಾಕ್ಷಿಯರಿ
ನೋರೊಂದಿಲ್ಲಸಂಸಾರದೊಳ್ ॥ ೩೫

ಕಂ॥ ತಕ್ಕರ ಮತ್ಸರಮುಂ ಮಾ । ಣ್ದೊಕ್ಕಣಿಸುಗೆ ಸೇವ್ಯ
ಮಾವುದವನೀತಳದೊಳ್ ಸೊಕ್ಕುಂಜವ್ವನೆಯರ್ಕ್ಕಳ । ವಿಕ್ಕ
ನಿತಂಬವೊ ಮಹೀಧ್ರದ ನಿತಂಬವೊಮೇಣ್ ॥ ೩೬

ವೃ॥ ಕನಸಿನ ಮಾಳ್ಕೆಯಿಂ ಪೊಳೆದಡಂಗುವ ಸಂಸೃತಿಯಲ್ಲಿ
ಸಾರವಿ । ಜ್ಞನಕೆರಡಂಗ ಮೊಂದು ಪರತತ್ವವಿಚಾರ ಸುಧಾರಸಾ
ವಗಾ ॥ ಹನದೊಳೆ ಕಾಲಮುಂ ಕಳೆವುದಲ್ಲದೊ ಡಿಂದುಮುಖೀ ನಿರಂ
ತರ । ಸ್ತನ ಪರಿರಂಭ ಸೌಖ್ಯದೊಳೆ ಕಾಲವ ನೂಂಕುವುದೊಂದು
ಧಾತ್ರಿಯೊಳ್ ॥ ೩೭

ಕಂ॥ ವರಮಾವಾಸಂ ಗೆಯ್ವುದು । ಸುರಗಂಗೆಯ ಪಾಪ
ಹಾರಿ ವಾರಿಯೊಳಂ ಮೇಣ್ ॥ ಸರಸೀರುಹ ಲೋಚನೆಯರ । ಸರಸ
ಮನೋಹಾರಿ ಹಾರಿ ಕುಚಯುಗಳದೊಳಂ ॥ ೩೮

ವೃ॥ ಬರೆದೇಂ ಯುಕ್ತಿನಿಯುಕ್ತ ಮಲ್ಲದ ವೃಥಾಲಾಪಂಗಳಂ
ಮಾನವ । ರ್ಗ್ಗೆರಡೇ ಸೇವಿಸತಕ್ಕು ವಾವೆನಲಮಂ ನಿಷ್ಪಕ್ಷಪಾತಾಂ
ಪೇಳ್ದಪೆಂ ॥ ಸ್ಮರಲೀಲಾಲಸ ಸುಂದರೀಜನರ್ಗಳಾ ಪೀನಸ್ತನದ್ವಂ
ದ್ವದು । ರ್ಭರ ಭಾರಾವಹ ಖಿನ್ನ ಮೆಂದೆನಿಸಿದೀರುಂಜವ್ವನಂ
ಮೇಣ್ವನಂ ॥ ೩೯

ಕಂ॥ ಎನಗಿಲ್ಲ ಪಕ್ಷಪಾತಂ । ಜನಮೆ ವಿನಿಶ್ಚಯಿಸ ನುಸಿರ್ವೆ
ನಾಲಿಸು ದೊಲವಿಂ ॥ ವನಿತೆಯರ ನುಳದ ಲೋಕದೆ । ಮನೋ
ಜ್ಞಮುಂ ದುಃಖಸೇತುವುಂ ಪೆರವಿಲ್ಲಂ ॥ ೪೦

---

## ಕಾಮಿನೀ ಗರ್ಹಣಂ.

ವೃ॥ ತಿಳಿದರು ಮುಕ್ಕಟಾ ಅಶುಚಿಭಸ್ತ್ರಿಕೆ ಯೆಂದೆನಿಸಿರ್ಪ್ಪ
ಪೆಣ್ಣಿ ಕಂ । ಡಳಕಚೆಯೆಂದು ಕುಂಭಕುಚೆಯೆಂದು ವಿಶಾಲ ನಿತಂಬೆ
ಯೆಂದು ನಿ । ರ್ಮಳ ಶಶಿವಕ್ತ್ರೆಯೆಂದು ದಳಿತೋತ್ಪಲ ಲೋಚನೆ
ಯೆಂದು ಸೊಕ್ಕುವ । ರ್ನ್ನಲಿವಪ ರೊಂದುಮರ ಪೊಗಳ್ವ ರೆನ್ನದೊ
ದುಷ್ಟವಿಮೋಹ ಚೇಷ್ಟಿತಂ । ೪೧

ಕಂ॥ ನೆನೆಯಲ್ತಾಪವ ನಸಲೋ । ಕನಂಗೆಯಲ್ ಚಿತ್ತವಿ
ಭ್ರಮವ ನಂಟದೊ ಡೊ ॥ ಯ್ಯನೆ ಮೋಹವ ನಾಗಿಪ ಕಾ । ಮಿನಿ
ಯಂ ಪ್ರಿಯೆ ಯೆಂದದೆಂತು ನುಡಿಯಲ್ಬರ್ಕ್ಕುಂ ॥ ೪೨

ಕಂ॥ ಕಣ್ಣಿದಿರೊಳಪ್ಪ ಪರೆಗವೆ । ಪೆಣ್ಣಮೃತಕೆ ಸಾಟ
ಯೆಂದು ಪೇಳಲ್ಬರ್ಕ್ಕುಂ ॥ ಕಣ್ಣಿನ ಪೊಲಬಂ ಮೀರಿದೊ । ಡಣ್ಣಾ
ಬಿಸದಿಂದಮಧಿಕ ಮೆನಿಸುಗು ಮಲ್ತೇ ॥ ೪೩

ಕಂ॥ ರಮಣಿಯರ ನಾಳದು ಬೇರಿ । ನ್ನಮೃತಂ ವಿಷಮೆಂ
ಬುವಿಲ್ಲ ಲೋಕದೆ ನಿಸಮಂ ॥ ಅಮೃತಲತೆ ಯೆನಿಪಳೊಲಿದಂ । ದ
ಮಮಾ ತಾನೊಲಿಯದಂದು ವಿಷಲತೆ ಯೆನಿಪಳ್ ॥ ೪೪

ವೃ॥ ಸುಳಿ ಸಂದೇಹಕ್ಕೆ ಧೂರ್ತತ್ವಕೆ ನೆಲೆವನೆ ಮೋಹಸಾಹಸ
ಕ್ಕೂರು ಮೋಸಂ । ಗಳ ತಾಣಂ ಕೃತ್ರಿಮಕಟ್ಟಣೆ ನರಕಮುಖಂ
ಸ್ವರ್ಗಸಾಖ್ಯಕ್ಕೆ ವಿಘ್ನಂ ॥ ಬಳವನ್ಮಾಯಾಕರಂಡಂ ವಿಷಮುಮಮೃ
ತಮುಯಂ ಪ್ರಾಣಿಲೋಕಂಗಳಂ ಕ । ಟ್ಟಿಳೆವುದ್ಯತ್ಪಾಶಮುಂ ತಾನೆ
ನಿಸಿದ ವನಿತಾ ಯಂತ್ರಮಂ ಗೆಯ್ದನಾವಂ ॥ ೪೫

ವೃ॥ ಅಸಿಯುಳ ವಕ್ತ್ರಮಾಗಿ ಸಸಿ ಪುಟ್ಟಿದುದಲ್ಲೊಡಲುಂ
ಸುವರ್ಣದಿಂ । ದೆಸಗಿದುದಲ್ಲ ನೈದಿಲೆಗಳಕ್ಷಿಗಳಾದುವುಮಲ್ಲ ವಾರ
ಯುಲ್ ॥ ನಿಸದಮಿದೆಂಬುದಂ ತಿಳದು ಮುಜ್ಞಜನಂ ಕವಿವಂಚಿತೈಕ
ಮಾ । ನಸಮಸೃಗಸ್ಥಿ ಮಾಂಸಮಯ ಮಾದಬಲಾಂಗಮ ನೋ
ವೊ ಸೇವಿಪರ್ ॥ ೪೬

ಕಂ॥ ಮೋಸಂ ಬೋದಪನಲ್ತೆ ವಿ । ಲಾಸಿನಿಯರ ಸಹಜ
ಮಹ ವಿಲಾಸಕಮಜ್ಞಂ ॥ ಆಸೆಮಿಗೆ ಬರಿದೆ ನಳಸಿಯ । ನೈಸರ್ಗಿಕ
ರಾಗಕಾಟಸಂತಿರೆ ಮಧುಪಂ ॥ ೪೭

ಕಂ॥ ಚೆಂದುಟಿ ಮಧುವೆರೆದಾ ಪೂ । ರ್ಣೇಂದುವ ನಿಳಿಕ
ಯ್ವ ಯುವತಿಯರ ಮುಖಕಮಲಂ ॥ ಇಂದಿನಿದ ನಾಗಿಕುಂ ಮಾ ।
ಕಂದದ ಮೋಲ್ ಮುಂದದಿಟ್ಟವಣೆ ಣೆ ಯಕ್ಕಂ ॥ ೪೮

ಕಂ॥ ವಳಿತೆರೆ ಮೊಗಮುೞ್ಗಂ ಪೊ । ಕ್ಕುರ್ಗಳೆ ಸುೞಿ ಮೊಲೆ
ಚಕ್ರಮೆನಿಪ ಪೆಣ್ಬೊಳೆಯುತ್ತಂ ॥ ಸುೞಿಯದಿರಿ ಜನರೆ ಸಂಸೃತಿ ।
ಜಳಸಿಧಿ ಮಜ್ಜನದ ಪೇಕ್ಷೆ ನಿಮಗಿಲ್ಲದಿರಲ್ ॥ ೪೯

ಕಂ॥ ಉಗುಳುತೆ ಕಟಾಕ್ಷವಿಷಮಂ । ಸೊಗಸೆಂಬಾ ಪೆಡೆ
ಯನೆತ್ತಿ ಬಹುದಿದೊ ಲಲನೋ ॥ ರಗ ಮತ್ತೆತೊಲಗು ಮಿತ್ರನೆ ।
ಮೊಗಮಿಕ್ಕರಿ ದಗಿದ ನರನಕಡೆ ಮಂತ್ರಜ್ಞರ್ ॥ ೫೦

ಕಂ॥ ನುಡಿವಪರೊರ್ವನೊಳೊರ್ವನ । ಬೆಡಗಿಂದಂ ನೋೞ್ಪ
ರೊರ್ವನಂ ಮಾನಸದೊಳ್ ॥ ಎಡೆಗೊಂಡು ಚಿಂತಿಪರ್ ಪೋ । ಮ
ಡದಿಯರ್ಗಿನ್ನಾವ ಮಾನವಂ ಪ್ರಿಯನೆನಿಪಂ ॥ ೫೧

ಕಂ॥ ಬಿಂಬೋಷ್ಠ ಮಾಂಸಕೆಳಸಿ ಭ । ವಾಂಬುಧಿಯೊಳ್
ಸುೞಿವ ಮನುಜಮತ್ಸ್ಯಗಳಂಪೆ ॥ ಣ್ಣಂ ಬಲೆಗೈದೈಸರ ನೆಂ । ಬಂ
ಬಿಗ ನೆಳೆದೊಡನೆ ಬೇಟವೆಂಕೆಯೊಳಡುವಂ ॥ ೫೨

ಕಂ॥ ಅಮಮ ಕುಚಗಿರಿಗಳಂ ದು । ರ್ಗಮ ಮೆನಿಸಿದ ಕಾಮಿ
ನೀಕಳೇವರ ವನದೊಳ್ ॥ ಗಮಿಸದಿರು ಹೃದಯ ಪಥಿಕನೆ । ಸುಮ
ಶರನೆಂದೆಂಬ ಚೋರನಿರ್ದ್ದಪ ನದರೊಳ್ ॥ ೫೩

ವೃ॥ ವ್ಯಾಳಂ ಕಚ್ಚಿದವರ್ಗ್ಗೆ ವೈದ್ಯರೊಳರೂರೂರಲ್ಲಿ ಧ
ರ್ಮಾರ್ಥಿಗಳ್ । ಕ್ಷ್ವೇಳಂ ತಾಮಿಳವಂತು ಮಾಳ್ಪರಕಟಾ ತೇಜಸ್ವಿ
ಯುಂ ಭೋಗಿಯುಂ ॥ ನೀಲಾಬ್ಜದ್ಯುತಿಯುಂ ಸುವಕ್ರಗತಿಯುಂ
ತಾನಾದ ಕಾಂತಾವೃಗಂ । ತಾಬೋಕೋರಗ ದಷ್ಟನಾದೆನಗೆ ಮ
ದ್ದುಂ ಮಂತ್ರಮೇನಿಲ್ಲಣಂ ॥ ೫೪

ವೃ॥ ಇದು ಸಪಿವೆತ್ತ ಗಾನಮಿದು ನೂತನನರ್ತನ ಮಿಂತಿದ
ಚ್ಚಗಂ । ಪಿದು ಮೊಲೆಸೋಂಕು ರಯ್ಯಮೆನುತಂ ಸ್ವಹಿತೈಕತೆ
ಯಾಂತು ಮುಂದಣಾ ॥ ಗ್ಗದ ಪರಮಾರ್ಥಮಂ ಕಿಡಿಸಿ ದಿಂದ್ರಿಯ
ಪಂಚಕದಿಂದೆ ಮೋಸಪೋ । ದಾದ ನಕಟಾರ್ಗ್ಗೆ ಪೇಳ್ವೆ ನರಿದಿರ್ದ್ದೊ
ಡವಕ್ಕಳಪಾಂತು ಪೋಪೆನೇ ॥ ೫೫

ವೃ॥ ಬಿಡಿಸಲ್ಕಂತ್ರಕೆ ಗವ್ಯ್ಯವಲ್ತು ಪಲವುಂ ಮದ್ದಿಂದೆ ಬಾರಿಪ್ಪೆನೆಂ । ದೊಡೆತಾಂ ಸಾಧ್ಯವಮಡಲ್ತು ಶಾಂತಿಶತದಿಂದುಂ ಪೋಪು ದಲ್ತ ಕ್ಕಟಾ ॥ ನುಡಿಯುಲ್ಕಾಗದ ಭಂಗವಂ ತನುವಿನೋ ಳ್ಗೈದಾ ಗಳುಂ ಬೇವಸಂ । ಬಡಿಕುಂ ಸುತ್ತಿಸುತಕ್ಷಿಯುಂ ಸ್ಮರವುಹಾ ಪಸ್ಮಾ ರವೋಗ್ರೈವೆನಾಂ ॥ ೫೬

ವೃ॥ ಕುರುಡಂಗಂ ದುರ್ಮುಖಂಗಂ ಕರಮುಪಗತ ಕುಷ್ಠಾ ವಿಲಂಗಂ ಜರಾಜ । ರ್ಜರಿತಂಗಂ ದುಷ್ಕುಲಂಗಂ ಕರಪದವಿಕಲಂಗಂ ಸಮಂತೂರಿಚಂಗಂ ॥ ಅರರೇಲಕ್ಷ್ಮೀ ಲವಾಪೇಕ್ಷೆಯಿ ನಧಿಕಮನೋ ಜ್ಞಾಂಗವಂ ತೆತ್ತುಸಿಚ್ಚಂ । ನೆರೆವೀಸ್ಯೈಪುಣ್ಯ ಸಸ್ಯಚ್ಛುರಿಕೆ ಯೆನಿಪ ವೇಶ್ಯಾಜನಕ್ಕಾವನೊಲ್ವಂ ॥ ೫೭

ಕಂ॥ ಸುಲಲಿತ ರೂಪೇಂಧನದಿಂ । ಜ್ವಲಿಪ ಮನೋಜಾರ್ಚಿ ಯಲ್ತೆ ಬೆಲೆವೆಣ್ಣದರೊಳ್ ॥ ಸಲೆ ಬೇಳದಪರ್ ಕಾಮುಕ । ರೊಲ ವಿಂ ಯೌವನಮುಮಂ ನಿಜದ್ರವ್ಯಮುಮಂ ॥ ೫೮

ಕಂ॥ ಜಾರಭಟ ಚೋರನಟ ವಿಟ । ವಾರೋಚ್ಚಿಷ್ಟಕ್ಕೆ ಪಾತ್ರಮಾಗಿರುತಿರ್ಪ್ಪೀ ॥ ವಾರಸ್ತ್ರೀಯರ ತುಟಿಯಂ । ಪೀರುವನೇಂ ರವ್ಯವಾದೊಡಂ ಕುಲಪುರುಷಂ ॥ ೫೯

ಕಂ॥ ಸುದತಿಯರ ವಚನದೊ ಳ್ಸುಧೆ । ಹೃದಯದೆ ಪರಿಕಿ ಪೊಡೆ ವಿಷಮೆ ತೀವಿರ್ಪ್ಪುದರಿಂ ॥ ಮೊದಲೊ ಳಧರಮನೆ ಚುಂಬಿಸಿ । ಹೃದಯಮ ನುರೆ ಮುಷ್ಟಿಯಿಂದೆ ಮರ್ದ್ದಿಪರಲ್ತೇ ॥ ೬೦

---

### ದುರ್ವಿರಕ್ತ ಸುವಿರಕ್ತ ಪದ್ಧತಿ.

ವೃ॥ ಬಳೆದಡರ್ದಚ್ಚ ಜಾವನದೆ ಪೊಂಗಿದ ಪೀನಪಯೋಧ ರಂಗಳಂ । ತೆಳುವಸಿರಲ್ಲಿ ರಂಜಿಪ ವಳಿತ್ರಯದಿಂ ಕರಮೊಪ್ಪು ತಿರ್ಪ್ಪಚಂ ॥ ಚಳ ಧವಳಾಯತಾಕ್ಷಿಯರ ಚಲ್ವಿಕೆಯಂ ನಡೆನೋಡಿ ಚಿತ್ತದೊಳ್ । ಕಳವಳ ಮೊಂದದಿರ್ಪ್ಪ ಮನುಜಗ್ಗಡ ಧನ್ಯರಿಳಾ ತಳಾಗ್ರದೊಳ್ ॥ ೬೧

ವೃ॥ ತರುಣಿ ಯಿದೇಕೆ ಬಳ್ಚಿಡಗಿನಿಂ ದರೆಮುಚ್ಚಿದ ಕಣ್ಣೊ
ಳೆವ್ಮನೀಂ । ನಿರುಕಿಪೆ ವರ್ಣನ್ಯಥಾ ಶ್ರಮವಲಾ ನಿನಗಾವು ಪೊಸಂ
ಬರಿಂದುಕೇಳ್ ॥ ಕರೆವುದು ಕಾನನಂ ತೆರಳ್ದದಾಹರೆಯುಂ ಸರಿದತ್ತು
ಮೋಹಮಿ । ಧರಣಿಯನೆಲ್ಲಮಂ ತೃಣಗಣಕ್ಕೆ ಸಮಯಾಗಿಸಿ ನೋ
ಳ್ಪವಾಗಳುಂ ॥ ೬೨

ವೃ॥ ಇಂದೀವರಾಂಗಿ ಯಿಡುತಿಪ್ಪರ್ ಳದೇತಕೆನ್ನೊಳ್ । ಳಿಂದೀ
ವರದ್ಯುತಿಯ ಕಳ್ದ ಕಟಾಕ್ಷಮಂ ತಾಂ ॥ ಕಂದರ್ಪಬಾಣ ಕಲಿತ
ಜ್ವರದಾಹ ಮೋಹ । ಕಂದಂ ಕಳಲ್ದ ದೆಮಗಿನ್ನು ಮರಾಕಿ ಮಾ
ಣಳ್ ॥ ೬೩

ವೃ॥ ಅಲರಂಬಾ ಬರಿದೇಕೆ ನೀಂ ಸುಮಧನುಷ್ಟಂಕಾರಮಂ
ಗೈದು ಕೂ । ರಲಗಂ ವ್ಯರ್ಥಮಮಾಳ್ಪೆ ಕೋಕಿಲಮೆ ನೀನೇಕಿಂಚ
ರಂಗೈವೆ ಸಿಲ್ ॥ ಎಲೆ ಮುಗ್ಧೇ ಸಪಿನೋಟಮಂ ಕೆದರ್ದುದಂ ಮಾ
ಣ್ಮನ್ಮನಂ ಪೀರ್ದುದಬ । ಲ್ಪಲಮಿಂ ದಿಪ್ಪುದು ಚಂದ್ರಮೌಳಿ ಚರಣ
ಧ್ಯಾನಾಮೃತಾಸಾರಮಂ ॥ ೬೪

ಕಂ॥ ವಿರಹಮೆ ಸಂಗಮ ಮೆನಿಕುಂ । ಪರಸ್ಪರಾಸಕ್ತ ಮ
ಪ್ಪೊ ಡಿರ್ವರ ಪೃದಯಂ ॥ ವಿರಹಮನೆ ವಿಶೇಷಿಸುಗುಂ । ಪರಿಕಿಸೆ
ಸಂಗಮಮು ಮೊಂದದಿರೆ ನಿಜಹೃದಯಂ ॥ ೬೫

ಕಂ॥ ಇನಿಯಳ್ ಬದುರ್ಕಿಲ್ಲದೊಡಾಂ । ಮನೆಗೆಯ್ದಿಯು ಮೇ
ನದೊರ್ಮ್ಮೆ ಬದುರ್ಕಿದೊರ್ಡೆ ಪ್ರೋ ॥ ಪಸಿವಿತ್ತ ಮೇನೆನುತ್ತಂ ।
ಮನೆಗೆಯ್ದಂ ಪೊಸತುಮುಗಿಲ ನೀಕ್ಷಿಸಿ ಪಥಿಕಂ ॥ ೬೬

ವೃ॥ ಎಲೆ ಬುಧವರ್ಯರೇ ಕ್ಷಣಿಕಮಾದ ವಧೂಜನ ಸಂಗ
ದಿಂದಮೇಂ । ಫಲ ಮೋಮೆತ್ತು ಕೂಡಿಮೆ ದಯಾಮತಿಮೈತ್ರಿಗ
ಳೆಂಬ ಪೆಣ್ಗಳಂ ॥ ಸಲಹುವಮೇಂ ಸಮಂತು ಸರಕಾಂತದೆ ನಿಮ್ಮ
ನಿಮಂಗನಾಜನಂ । ಗಳಮಣಿಹಾರಶೋಭಿಕುಚಮು ರಶನಾ ವಿಲಸ
ನ್ನಿತಂಬಮುಂ ॥ ೬೭

ವೃ॥ ಘನಯೋಗಾಭ್ಯಾಸದಿಂ ಭೋಗವಿರತಿ ಮಿಗೆತಳ್ತಾತ್ಮನೊ
ಳ್ಪೆಂಧಿಸಿತ್ತಾ । ವನ ಚಿತ್ತಂ ತನ್ಮಹಾಯೋಗಿಯ ಸೊಗವಡಿಸಲ್ಕಾ
ಪ್ಪರ್ವೇ ನಿನ್ನ ಕಾಂತಾ ॥ ಜನದಾಲಾಪಂಗಳುಂ ಚೆಂದುಟಿಯ ಸವಿ
ಗಳುಂ ವಕ್ತ್ರಗಂಧಂಗಳುಂ ಮೇಣ್ । ಸ್ತನಸಂಶ್ಲೇಷಂಗಳುಂ ಪೊಂಗಿ
ದ ಸುಸಿಲವಿಲಾಸಂಗಳುಂ ನಾಡೆನೋಡಲ್ ॥ ೧೮

ಕಂ॥ ಸ್ಮರತಿಮಿರ ಭವಾಜ್ಞಾನದೆ । ಪೊರೆದಿಪ್ಪ್ಮಯ ಕಣ್ಗೆ
ಯುವತಿಮಯ ಮಾಯ್ತು ಜಗಂ ॥ ಪರಮ ವಿವೇಕಾಂಜನ ವಿಶ ।
ಲರರೆ ಜಗತ್ತ್ರಯಮು ಮಿಂದುಬೊಮ್ಮ ಮೆನಿಕ್ಕುಂ ॥ ೧೯

ಕಂ॥ ತರುಣ ಹರಿಣಾಕ್ಷಿಯರ್ಕಳ । ತರಳ ಕಟಾಕ್ಷಂಗಳ್ಪೈದೆ
ತಾಗದವರೆಗಂ ॥ ಸ್ಫುರಿಸಿದಪ್ಪುದಲ್ತೆ ವಿದ್ವಾಂ । ಸರ ನಿರ್ಮಲತರ ವಿ
ವೇಕರೂಪಂ ದೀಪಂ ॥ ೨೦

ಕಂ॥ ಬಾಯುವಿರಕ್ತಿಯೊಳೇಂ ಕಂ । ಜಾಯತ ನೇತ್ರೆಯರ
ಕನಕ ಕಾಂಚೀದಾಮ ॥ ಶ್ರೀಯುತ ಜಘನವ ನುಳಿದಿಹು । ದಾಯುಸ
ಮೆಂತಪ್ಪಪಂಡಿತರ್ಗ್ಗಂ ಜಗದೊಳ್ ॥ ೨೧

ಕಂ॥ ಚೊಡವ್ಮೃಗಪತಿಯ ಮದವೇ । ತಂಡವ ನಿಕ್ಕುವ ಸ
ಮರ್ಥ ರಿಪ್ಪರಪ್ಪರಲವರ್ ॥ ಪಂಡಿತರಿದಿರುಸಿರ್ವೆಂ ಸುಮ । ಕಾಂಡನ
ಬಲ್ಸೊಕ್ಕರ್ ನಿಕ್ಕಲಾಪ್ಪರ್ ಕೆಲವರ್ ॥ ೨೨

ವೃ॥ ಧೃತಿಯಂ ಪಾಳ್ಗ್ಯವ ಲೀಲಾವತಿಯರ ಕುಟಿಲ ಭ್ರೂಧ
ನುಃಕೃಷ್ಟ ಮುಕ್ತಾ । ಸಿತ ಪಕ್ಷ್ಮಾಪಾಂಗ ಬಾಣಂ ಶೃತಿಗತ ಮೆ
ರ್ದಯುಂ ತಾಗಿಥಟ್ಟುಜ್ಜರದನ್ನಂ ॥ ಶೃತಿಮಾರ್ಗಾ ಚಾರಮುಂ ಸದ್ವಿ
ನಯನಯ ವಿವೇಕಂಗಳುಂ ಸಾರಧರ್ಮ । ಸ್ಥಿತಿಯುಂ ನಾಣುಂ ಸ
ಮಂತಿಂದ್ರಿಯ ವಿಜಯತೆಯುಂ ಮಾನವಂಗಿಕ್ಕ ಮಳ್ತೇ ॥ ೨೩

ಕಂ॥ ತರುಣಿಯರಂ ಪಳಿವಾತನೆ । ಪರಪಂಚಕವಿಬುಧ ನೆಂತೆ
ನಲ್ ಸ್ವರ್ಗಮೆತಾಂ ॥ ನರರ ತಪಃಫಲ ಮಿನ್ನ । ಲ್ಲಿರುವರ್ ಸುರತ
ರುಣಿಯರ್ಕಳ್ಲವೆ ಪೆರರಾರ ॥ ೨೪

ಕಂ॥ ಪ್ರೇಮೋದ್ರೇಕದೊಳಾವುದ । ಕಾಮಿನಿಯು ಕ್ಕರ್ಗಡುಗಿ ಮಾಡಲಾರಂಭಿಸ ರಾ ॥ ಕಾಮಿತಕೆಡರ ನೊಡರ್ಚ್ಚಲ್ । ತಾಮರಸೋದ್ಭವನು ಮೊರ್ಮ್ಮೆ ತಾನಾರ್ತ್ತಪನೇ ॥ ೩೫

ಕಂ। ಅಂದಿನ ವರೆಗಮೆ ನಯವಿನ । ಯಂ ದಾಕ್ಷಿಣ್ಯಂ ಕುಲೀನತಾವಿಗಳೆಲ್ಲಂ ॥ ಕಂದರ್ಪಬಾಣಶಿಖಿ ಪಾ । ಯ್ತುಂದೆರ್ದೆಯೊಳ್ ಜ್ವಲಿಸದಿರ್ಪ್ಪುದೆಂದಿನವರೆಗಂ ॥ ೩೬

ವೃ॥ ಪರಿಕಿಸೆ ಶಾಸ್ತ್ರಮಂ ತಿಳಿದೊಡಂ ಸುವಿವೇಕನಿಧಾನರಾದೊಡಂ । ಪರಗತಿ ಗೈದಲಾರ್ತ್ತಪನ ದೊರ್ಪ್ಪನೆ ಸಂಸ್ಕೃತಿಯೊಳ್ ದಲೇಕೆನಲ್ ॥ ನರಕದ ಬಾಗಿಲಂ ತೆಗೆವಲೋಹದ ಕುಂಚಿಕೆಯಂತೆ ನೀಳ್ದಸುಂ ॥ ದರಿಯರ ಕೊಂಕುವೆತ್ತ ಸಿಡಿವುರ್ವ್ವಿದರೊಳ್ಸಿಲುಸಿರ್ಪ್ಪದೂಸರಿಂ ॥ ೩೭

ವೃ॥ ಕೆಡುಬಡವಾಗಿ ಕಣ್ಣುಡುಗಿ ಬಾಲಮುಡಂಗಿ ಕೊಡಂಕೆಪೋಗಿ ಪು । ಣ್ಣಿಡಿದೊಡಲೆಲ್ಲಮುಂ ಪುಳುತು ಮುತ್ತು ಕರಂ ಪಸಿವಿಂದೆಬಾಡಿಕಾ । ಲುಡುಗಿದ ಕುಂಡಿಕಾಮುಖಗಳಂ ಶುನಕಂ ಶುನಿಯುಂಸಮಂತು ಬೆಂ । ಬಿಡದೆನೆ ಬಾರಿಸಂ ಮಡಿನ ಜೀವಿಯುಮಂ ಗಡಪಾಪಿ ಮನ್ಮಥಂ ॥ ೩೮

ವೃ। ಪುರುಷಾರ್ಥವಹವಾದ ಕಾಮವಿಜಯ ಸ್ತ್ರೀಮುದ್ರೆಯಂ ಮಾಣ್ದು ಪಾ । ಮರರ್ಗಳ್ ದುರ್ಮತಿಗಳ್ ತೊಳಲ್ವರಕಟಾ ಮಿಥ್ಯಾಫಲಾನ್ವೇಷಿಗಳ್ ॥ ಸ್ಮರನಿಂದಂ ತವಗಾದ ಪೀಡನದನೇನೆಂಬೆಂ ಕೆಲಂಬರ್ ದಿಗಂ । ಬರರಾವರ್ ಜಟೆಗಳ್ಕೆಲರ್ ಧೃತಕಪಾಲ ರ್ವ್ಮೊಳ್ಕೆಲರ್ ಮುಂಡಿತರ್ ॥ ೩೯

ವೃ॥ ಜಲ ಪರ್ಣಾನಿಲ ಮೂಲನುಂ ಸವಿದ ವಿಶ್ವಾಮಿತ್ರಮುಖ್ಯರ್ಕ್ಕಳುಂ । ಲಲನಾಸ್ಯಾಂಬುಜಮಂ ವಿಲೋಕಿಸಲೊಡಂ ಬೆಳ್ಪಾಳ್ದ ರೆಂಬಾಗಳೀ ॥ ಸ್ನಿಳೆಯೊಳ್ ಷಾಲ್ಮೊಸರ್ಗೂಡಿದೋಗರವ ನಾರೋಗಿಪ್ಪ ಮರ್ತ್ಯರ್ಗ್ಗೆ ಸಂ । ಗಳಪಂದಿಂದ್ರಿಯ ನಿಗ್ರಹಂ ಶರಧಿಯೊಳ್ ವಿಂಧ್ಯಾದ್ರಿ ತೇಲ್ಗುಂವಲಂ ॥ ೪೦

## ಋತುವರ್ಣನೆ.

ವೃ॥ ಮುಗಮುಗಿಸಿತ್ತಲರ್ ಮಿಗೆ ತಳಿರ್ತ್ತುವು ಕಾನನ ಶಾಖಿಶಾ
ಖೆಗಳ್ । ಮುಗುಳನಿಮಾವ್ರೊಳುತ್ಕಲಿಕೆಯುಂ ಮಿಗೆ ತಾಳ್ದುದು ಕೋ
ಕಿಲಾಗಣಂ ॥ ಬಗೆದುವು ಮೆಲ್ಲಮೆಲ್ಲನೆ ಬೆಮರ್ ವನಿತಾಜನತಾಸ್ಮಿತಾ
ನನೇಂ । ದುಗಳೊಳದಾಗ್ಗ್ರನಾಗದು ಗುಣೋದಯ ಮೈದೆವಸಂ
ತನುರ್ವಿಯೊಳ್ ॥ ೮೧

ಕಂ॥ ಮಧು ಮಲಯಾನಿಲನಿಂ ಮೇ । ಣ್ಮಧುರ ಪಿಕಾರಾವ
ದಿಂದೆ ವಿರಹಿವ್ರಜಮುಂ ॥ ವಿಧುರಂಗೈದಪ ನಕ್ಕಟ । ಸುಧೆಯುಂ ವಿ
ಷಮಪ್ಪುದಲೆ ವಿಪತ್ತಿನೊಳಾವಂ ॥ ೮೨

ವೃ ಕೆಲದೊಳ್ ಶೃಂಗಾರಲೀಲಾ ಲಲಿತ ದಯಿತೆಯು ರ್ಕರ್ಣ
ದೊಳ್ಕೋಕಿಲಸ್ತ್ರೀ । ಕಲನಾದಂ ಮುಂತೆ ಗುಂಜನ್ಮಧುಪ ಸುಮ
ಲತಾರಂಜಿಕುಂಜಾ ಕವೀಂದ್ರಾ ॥ ವಳಿ ಸಲ್ಲಾಪಾನುಮೋದಂ ಸದ
ಮಳತರ ಚಂದ್ರಾತಪಂ ಚಿತ್ರಮಾಲಾ । ಕುಲಮುಂ ಸಂತೋಷಿಕುಂ
ಚೈತ್ರದೆ ಸುಕೃತಜನ ಸ್ವಾಂತಮಂ ತಾಂ ನಿತಾಂತಂ ॥ ೮೩

ವೃ॥ ರತಿಯಿಂದೀಕ್ಷಿಸೆ ಕೋಕಿಲಾ ವಿತತಿ ಪಾಂಥಸ್ತ್ರೀವಿಯೋ
ಗಾನಲಾ । ಹುತಿ ಸಾಮ್ಯಂಬಡೆದಾಮ್ರಮಂಜರಿಯು ನಾಗಳ್ಮೆಲ್ಲನಾ
ದಿತ್ತಣಂ ॥ ಹೃತತಾಪಂ ಸ್ಫುಟಪಾಟಲೀ ಪರಿಮಳ ಶ್ರೀತಸ್ಕರಂ ಚಂ
ದನ । ಕ್ಷಿತಿಭೃತ್ಸಾನು ನಿಕುಂಜಪುಂಜ ನಿಲಯಂ ಚೈತ್ರಪ್ರಿಯಂ
ಮಾರುತಂ ॥ ೮೪

ಕಂ॥ ನೆಲೆಗೊಂಡಿರ್ಕ್ಕೆ ಕಂಠಂ ಕಾ । ದಲೆಯರ ಮಾನಸದಿ
ಬಲ್ಮೆವೆಂಸಿವ ಮಾನಂ ॥ ಮಲಯಜ ಮಹೀಜ ಸುರಭಿಲ । ಮಲ
ಯಾನಿಲ ನೈದಿನಾಡೆ ತೀಡುವ ವರೆಗಂ ॥ ೮೫

ಕಂ॥ ಮಾವಿನ ಪೂವಿನ ಕಂಪಿಂ । ತೀವಿದುವೆಂದೆನಿಸಿ ದೆಸೆಯ
ನಳಗಳ ಮಧುಸಂ ॥ ಸೇವನದೆ ಸೊರ್ಕ್ಕಿಸಿದ ಮಧು । ಮಾಪಂಗಾಗಿ
ಸದು ಮನಕೆ ಬೇಟಮನಾದಂ ॥ ೮೬

ವೃ॥ ಮಳಯಜಲೇಪದಿಂ ಕುಳಿರ್ವ ಕಾಂತೆಯರುಂ ಜಲ
ಯಂತ್ರಗೇಹಮುಂ । ಸುಳಿವೆಳಗಾಳಿಯುಂ ತೊಳಪ ಜೊನ್ನಮು
ಮು ಜ್ವಳಪುಷ್ಪ ಮಾಲೆಯುಂ ॥ ಪಳುಕಿನ ಮಂಚಮುಂ ಬಿಳಿಯ
ಮಾಡಗಳುಂ ತೆಳುವಟ್ಟೆಯುಂಸಮಂ । ತಳುರ್ವ ನಿದಾಘದೊಳ್ಬಳಿ
ಯಿಕುಂ ನಲಮಂ ಗಿಳಿದೇರನುಕ್ಕರ್ಷಮಂ ॥ ೮೭

ವೃ॥ ಬಗೆಗೊಳಲಾರ್ತ್ತ ಕಮ್ಮಲರ ಮಾಲಿಕೆ ತಂಗೊಳಮು
ಚ್ಚ ಜೊನ್ನಮಿಂ । ಪೊಗೆದ ಫಲಾಸವಂ ಸುಮಪರಾಗಕುಲಂ ಸಿತಚಂ
ದನದ್ರವಂ ॥ ಮೃಗದೃಶೆಯರ್ ಸುಧಾಧವಳ ಹರ್ಮ್ಯತಲಂ ಮೃದು
ವೀಜನಾನಿಲಂ । ದುಗುಲ ಮಿಪ್ರೋಚ್ಛ್ರಿತಂ ಸೊಗಯಿಕುಂ ಸುಕೃತಾ
ತ್ಮಕರಂ ನಿದಾಘದೊಳ್ ॥ ೮೮

ಪೃಥ್ವೀವೃ॥ ಸುಧಾಧವಳ ಮಂದಿರಂ ಪ್ರವಿಲಸತ್ಕರಂ ಚಂದಿ
ರಂ । ವಧೂವದನ ವಾರಿಜಂ ಮಲಯಜಂ ಪ್ರಸೂನಸ್ರಜಂ ॥ ಅಧೀ
ರರಹ ಕಾಮಿಗಳ್ಗಧಿಕ ತಾಪಮಂ ಮಾಡುಗುಂ । ವಿಧೂತ ವಿಷಯ
ಕ್ಕಳಾದರ ನಿಮೇಣಂ ಕಾಡುಗುಂ ॥ ೮೯

ಕಂ॥ ಕಾಮನನಾದಂ ಪೆರ್ಚ್ಚಿಸಿ । ಕೋಮಲ ಜಾತೀ ಸು
ಗಂಧಮಂ ತಳೆದಿರ್ಪ್ಪ ॥ ದ್ದಾಮ ಪಯೋಧರಭರೆ ವ । ರ್ಷಾಮಹಿ
ಳೆಯ ದಾರ ಮನಕೆ ಮುದಮಂ ಮಾಡಳ್ ॥ ೯೦

ಕಂ॥ ಪಸುರೇರಿದ ಧರೆ ಮುಗಿಲಿಂ । ಮುಸುಕಿದ ಬಾನ್ ಕು
ಟಜ ಕುಸುಮ ಸುರಭಿ ಸಮೀರಂ ॥ ಪೊಸಸೋಗೆಯ ಕೇಗುಂ ಸಂ ।
ತಸಗೊಳಿಪ್ಪುವು ಸುಖಿಯುಮಂ ಕರಂ ದುಃಖಿಯುಮಂ ॥ ೯೧

ಕಂ॥ ಮೇಗಡೆ ಮುಗಿಲ್ಗಳನರ್ತಿಪ । ಸೋಗೆಗಳಕ್ಕಾಲದೊ
ಳ್ಳೆಳೆಯುಮಂ ಕುರದೆ ಬೆಡಂ ॥ ಗಾಗಿರ ಲೆತ್ತಂ ಕಣ್ಗಳ । ಸಾಗಿಸಿದ
ಪರಕಟ ಮಾರ್ಗದೋಳ್ಪಥಿಕರ್ಕ್ಕಳ್ ॥ ೯೨

ಕಂ॥ ಬಂದೆಡೆ ಪೊಸಕೇವಗೆಗಂ । ಪೊಂದೆಡೆ ಮಿಂಚುಗಳ
ಬಳಗ ಮೊಂದೆಡೆ ಮೊಳಗಿ ॥ ನ್ನೊಂದೆಡೆ ಸೋಗೆಗಳಂಚರ । ಮೊಂ
ದಿರೆ ವಿರಹಿಣಿಯರೆಂತು ಕಳೆವರೊ ದಿನಮಂ ॥ ೯೩

ವೃ॥ ತಿಮಿರಂ ಸೂಜಿಗಭೇದ್ಯಮಾಗಿರೆ ವಿಯನ್ಮಧ್ಯಂ ಘನ
ಧ್ವಾನದಿಂ । ದಮಣಂ ಘುಮ್ಮೆಂಡೆ ಮಿಂಚೆಪೊಂದಗಡೆನಲ್ ತೋಱಿಮ್ಮಿರ್ಗಂ
ಛು ಪಾರ್ಬಿಂದು ಬೀ ॥ ೞ ಮನೋರಾಗಮುಮಂ ಕರಂ ಮರುಕಮಂ
ಕ್ಕೈಕೊಂಡುದಾಸ್ವೈರಿಣೀ । ಸಮುದಾಯಂ ನಿಜವಲ್ಲಭೋಪಗತ
ಸಂಕೇತಸ್ಥಲೀಂ ಮಾರ್ಗದೊಳ್ ॥ ೯೪

ವೃ॥ ಮಳೆಯಿಂದಂ ಪೊರಗಣ್ಗೆ ಪೋಗಲರಿದಾಗಲ್ ಹರ್ಮ್ಯ
ಮಂ ಬಿಟ್ಟುಮೋಱ । ಕುಳಿರ್ವ ಮಬ್ಜಾನನೆ ತಾನೆತಕ್ಕವಿಸೆ ಸೀಡುಂ
ಮೋಱ ಜಡಗ್ರಾಹಿ ಕೀ ॥ ತಳವಾತಂ ರತಿಖೇದಮಂ ಕಳೆಯೆ ಪೋ
ಕೂತ್ತ್ರಾಂಗನಾ ಸಂಗಮಂ । ಗಳದೊಳ್ ದುರ್ದಿನಮುಂ ಗಡಾ
ಸುದಿನಮಕ್ಕುಂ ಪುಣ್ಯವಂತರ್ಗ್ಗಣಂ ॥ ೯೫

ವೃ॥ ಇರುಳರ್ಧಂಬರೆಗಂ ಮಲಂಗಿ ರತಿಗೆಯ್ದಾಯಾಸದಿಂ
ಬೆಂಡುಗೊಂ । ಡಿರೆಮೈಬಾಯರತಾದಮಾಸವಮದಾಂಕಂ ಪ್ರತಹ
ಮರ್ಕ್ಯಾಂತದೊಳ್ ॥ ಸುರತ ಶ್ರಾಂತ ವಧೂಟಿಕಾ ಶಿಥಿಲ ಬಾಹಾಮು
ಕ್ತ ಚ್ಛಂದ್ರಾಂಶುಪಾಂ । ಡುರಧಾರಾಂಚಿತ ಕರ್ಕರೀ ಸಲಿಲಮಂ ಭಾ
ಗ್ಯಾಧಿಕಂಪೀರ್ದ್ದಪಂ ॥ ೯೬

ವೃ॥ ಪೊಸಕಿಸುವಟ್ಟೆಯಂ ತಳೆದು ಪಾಲ್ಕೊಸರ್ವಯ್ಗಳ
ನುಂಡೊಡಲ್ಗಳಂ । ಘುಸೃಣ ರಸಾಂಬುವಿಂ ಪೊರೆದು ಮೀಳೆಯುಮಂ
ಸವಿದೀಹಿಮರ್ತ್ತು ಪೋಳ್ ॥ ಅಸಿಯರ ಪೀವರಸ್ತನಮುರಂ ಬೊಗ
ಲಪ್ಪಿ ಗೃಹಾಂತರಾಳದೊಳ್ । ಸುಸಿಲ ಬಳಲ್ಕೆಯಿಂ ಸೊಗಸಿ ಸಿದ್ರಿ
ಸುವರ್ ಗಡಭಾಗ್ಯಶಾಲಿಗಳ್ ॥ ೯೭

ವೃ॥ ಕಂದಳಿತ ಪ್ರಿಯಂಗು ಕುಳದಿಂ ವಿದಳನ್ನವ ಕುಂದ
ಮಾದ್ಯದಿಂ । ದಿಂದಿರಬೃಂದದಿಂ ಹಿಮಮರುಚ್ಚಲ ಮಂಜುಳ ಪಾ

ರಿಛಿದ್ರದಿಂ ॥ ಸುಂದರ ಮಾದಕಾಲದೆ ಹಿಮಂಗಳೆ ಮಂಗನೆ ಯಾರ ಕಂ
ಠಮಂ । ಸಂದಿಸಳಂ ತವರ್ಗಣಿಸ ಲಂದಿನಿರುಳ್ ಯಮಮಂದಿರೋ
ಪಮಂ ॥ ೯೮

ವೃ॥ ಲಲನೆಯರೊಳ್ಗದಂಪುಗಳ ಚುಂಬಿಸಿ ಮುಂಗುರುಳ್ಗೊಂ
ದಿದಾಸ್ಯಮಂ । ಡಲದೆ ನಿಮಿರ್ಚ್ಚಿ ಸೀತ್ಕೃತಿಯ ಕಂಚುಕದಿಂ ಬಿಗಿ
ಸಿಪ್ಪ ಬಟ್ಟಬ ॥ ಲ್ಮೊಲೆಯೊಳೊಡರ್ಚ್ಚಿ ಪ್ರೇಂಪುಳಯ ನುಟ್ಟುಡೆ
ಯಂ ಕೆಲಸಾರ್ಚ್ಚಿ ಕಂಪನಂ । ಗೊಳಿಸಿ ತದೂರುವಂ ವಿಟನೆನಲ್
ಸುಳಿವಂ ಶಿಶಿರರ್ತು ಮಾರುತಂ ॥ ೯೯

ವೃ॥ ಕೆದರುತ್ತಂ ಕೇಶಮಂ ಕಣ್ಗಡೆಯ ಮುಗಿಸುತಂ ವಸ್ತ್ರ
ಮಂ ಪಾಗಿಸುತ್ತಂ । ಪದಪಿಂ ರೋಮಾಂಚಮಂ ಪುಟ್ಟಿಸುತ ಮೊಡ
ಲೊಳಾ ಕಂಪಮಂ ಪೆರ್ಚ್ಚಿಸುತ್ತಂ ॥ ಉದಯತ್ಸೀತ್ಕಾರದಿಂದಂ ಕದ
ಕದಿಸುವ ಬಿಂಬೋಷ್ಠಮಂ ಪೀಡಿಸುತ್ತಂ । ಸುದತೀ ಸಂತಾನ
ದೊಳ್ ಕಾಂತನೆನೆ ಸುಳಿದಪಂ ಶೈಶಿರಂಮಾತರಿಶ್ವಂ ॥ ೧೦೦

ಶೃಂಗಾರಶತಕಂ ಸಂಪೂರ್ಣಂ

# ಕನ್ನಡ ಭರ್ತೃಹರಿ ಸುಭಾಷಿತಂ.

# ವೈರಾಗ್ಯಶತಕಂ.

## ತೃಷ್ಣಾದೂಷಣ ಪ್ರಕರಣಂ.

ವೃ॥ ತಲೆದೊಡವಾದ ಚಂದ್ರಕಲೆಯೆಂಬ ಲಸಚ್ಛಿಖೆಗೊಡಿ
ಚಿತ್ತಭೂ । ಶಲಭನ ಸುಟ್ಟು ಪುಣ್ಯಾದಶೆಯೊಳ್ ಸ್ಫುರಿಸುತ್ತಮಪಾರ
ಮೋಹ ಸಂ ॥ ಕುಲ ತಮಮೆಲ್ಲಮಂ ಜವದೊಳೋಡಿಸಿ ಮಂಜುಳ
ಶೋಭೆವೆತ್ತ ಮಂ । ಗಳಕರ ಚಿತ್ರದೀಪ ನೆಸೆವಂ ಮುನಿಮಾನ
ಸಪದ್ಮದೊಳ್ಶಿವಂ ॥ ೧

ವೃ॥ ಆಡಿಯಿಡಲಾಗದಿರ್ಪ್ಪೆಡೆಯ ನೆಲ್ಲವ ಸುತ್ತಿದೆನೇನುಮಿಲ್ಲ
ದಾ । ಯ್ತುಡುಗಿ ಕುಲಾಭಿಮಾನಮ ನೊಡರ್ಚ್ಚಿದ ಸೇವೆಯುಮಾ
ಯ್ತು ನಿಷ್ಫಲಂ ॥ ಕಡೆಗೆ ಪರಾನ್ನಮಂ ಸವಿದೆನಕ್ಕಟ ಮಾನವ
ಮಾಣ್ದು ಕಾಗೆವೋಲ್ ॥ ಬಿಡೆ ಯಿಸಿತಾದೊಡೆನ್ನನಳಿಯಾಶೆಯೆ ಬೀ
ಗುತ ಮಿರ್ಪ್ಪೆ ಯಿಗಳುಂ ॥ ೨

ವೃ॥ ಅಗುಳ್ದೆಂ ನಿಕ್ಷೇಪಶಂಕಾಶಯದೆ ಮಹಿಯ ಪೊನ್ನ
ಪ್ಪುದೆಂದದ್ರಿಭೂಧಾ । ತುಗಳೆಲ್ಲಂ ಸುಟ್ಟೆ ನುರ್ವ್ವೀಶರ ನೊಲಿಸಿದೆ
ನಂಭೋಧಿಯುಂ ದಾಂಟಿದೆಂ ಮೇಣ್ ॥ ಬಗೆಯುಂ ಕಲ್ಮಾಡಿ ಮಂತ್ರಂ
ಜಪಿಸೆ ಮಸಣದೊಳ್ನೊಂಕಿದೇ ನಕ್ಕಟಾ ರಾ । ತ್ರಿಗಳಂ ಕೈಸಾ
ರ್ದುದಿಲ್ಲಂ ಕುರುಡುಗವಡೆಯುಂ ತೃಷ್ಣೆ ನೀಂ ತೃಪ್ತೆಯಾದೌ ॥ ೩

ವೃ॥ ಅರಸರ ಮೆಚ್ಚಿಸಲ್ ಸಹಿಸಲಾಗದ ಮಾತುಮನೆಲ್ಲ
ಸೈಸಿಮೇಣ್ । ಪಿರಿದಳಲಿಂದೆ ಮೀರಿಬಹ ಕಂಬನಿಯಂ ಬಿಡದೌಂಕಿ

ಬಲ್ಪಿನಿಂ ॥ ಬರಿನಗೆ ದೋರಿ ವಿತ್ತಮದದಿಂಮರವಟ್ಟಿರೆಯುಂ ಸು
ಭೀತಿಯಿಂ । ದೆರಗಿದೆ ನಿನ್ನದೇಂ ಕುಣಿಪೆ ಯೆನ್ನ ದುರಾಶೆಯೆ
ಸೊಲ್ಲಿಸಕ್ಕಟಾ ॥ ೪

ವೃ॥ ಹರಣಮಿದಬ್ಜಿನೀ ದಳಗತೋದಕಬಿಂದುವಿನಂತೆನೋ
ಡಲ । ಸ್ಥಿರ ಮಿದಕಾಗಿ ವಿತ್ತಮದದಿಂ ಮರವಟ್ಟಧನಾಢ್ಯರಲ್ಲಿ
ನಾಂ ॥ ವರಗುಣನೆಂದು ಸತ್ಯನಿಧಿಯೆಂದು ಕಲಾವಿದನೆಂದು ಬುದ್ಧಿ
ಗೆ । ಟ್ಟೋರೆಯುತೆ ತನ್ನ ತಾಂ ಪೊಗಳ್ದು ಪಾತಕಕಂ ಗುರಿಯಾದೆ
ನಕ್ಕಟಾ ॥ ೫

ವೃ॥ ರಮಣೀ ಗೇಹಾದಿಯಂ ಮಾಣ್ದುದು ಸುವಿರತಿಯಿಂದಲ್ತು
ಸೈರಿಸಿರ್ದುದಾದಂ । ಕ್ಷಮೆಯಿಂದಲ್ತುಷ್ಣಶೀತಾದಿಯ ಸಹಿಸಿದುದಾ
ದಂ ತಪಸ್ಸಿಂದಮಲ್ಲಂ ॥ ಶಮೆವೆತ್ತೆಲ್ಲಾಗಳುಂ ಧ್ಯಾನಿಸಿದುದು ಧನ
ಮೊಂದಲ್ಲ ದೀಶಾಂಘ್ರಿಯುಲ್ತಿ । ನ್ನೆಮಗಾ ಮೌನೀಂದ್ರ ಕೃತ್ಯಾಚರ
ಣೆಯ ಫಲಮಂ ವಾಂಛಿಸಲ್ಕೆಂತು ಬಕ್ಕರ್ಗಂ ॥ ೬

ವೃ॥ ಭೋಗಿಸಿತಿಲ್ಲ ಭೋಗತತಿ ಬೋಗಿಸಿ ಪೋದೆವು ಸಾವೆ
ಕಾಲಮೇಂ । ಸಾಗಿದುದಿಲ್ಲ ಸಾಗಿದೆವು ನಾವೆ ತಪಂ ಗಡ ತಪ್ತಮ
ಲ್ತು ನಾ ॥ ವೇ ಗಡತಪ್ತರಾದೆ ವಳಿಯಾಸೆ ಸುಜೀರ್ಣಮದಾದು
ದಿಲ್ಲ ಭೂ । ಭಾಗದೆನಾವೆ ಜೀರ್ಣರೆನಿಸಿರ್ದಪೆ ಪಿಂತಿದನಾರ್ಗೆ
ಪೇಳ್ವೆವೈ ॥ ೭

ಕಂ॥ ನರೆ ಶಿರಮಂ ತೆರೆ ಮೊಗಮಂ । ನೆರೆ ಮುಸುಕಿ ಶರೀ
ರಮೆಲ್ಲಬಡವೆನಿಸಿದೊಡಂ ॥ ಅರತೆ ದುರಾಶೆಯದೊಂದೇ । ತರುಣನ
ತೆರದಿಂದೆಕು[illegible]ವು ದೇಗೈದಪೆ ನಾಂ ॥ ೮

ವೃ॥ ಕಳೆದುದು ಭೂರಿ ಭೋಗಗಳ ಭೋಗಿಪ ಕಾಲವು
ಮ್ಮೈದಿತಂದಿನ । ಗ್ಗಳದಭಿಮಾನಮುಂ *ಮಡಿದರೋರಗೆಯಾ
ದಸುವನ್ನರಾಪ್ತರುಂ ॥ ಬಳೆದುದು ಕಣ್ಗೆ ಕಾವಳಮು ಮೇಳ್ವುದು

ದಂಡವಧೀನವಪೂದುದಿಂ । ತಳಲೊಳಮಂಜುಗುಂ ಮರಣಮಂ
ದೊಡೆ ಮೂಢಶರೀರಮುದ್ಭ್ರತಂ ॥ ೯

ವೃ॥ ರಾಗಗ್ರಾಹದೆ ಮೋಹ ವಿತರ್ಕಖಗದಿಂ ತೃಷ್ಣಾತರಂಗಂ
ಗಳಿಂ । ಭೋಗೇಚ್ಛಾಜಲದಿಂ ವಿಮೋಹಬಹುಳಾವರ್ತಂಗಳಿಂ ತಳ್ತು
ಧೈ ॥ ರ್ಯಾಗಧ್ವಂಸಿನಿಯಾಗಿ ದಾಂಟಲರಿದಾದಾಶಾಸರಿತ್ತಂ ಕರಂ ।
ಯೋಗೀಂದ್ರರ್ ಗಡನಾಡೆ ದಾಂಟಿ ಪರಿಶುದ್ಧಸ್ವಾಂತ ರಾನಂದಿಪರ್ ॥ ೧೦

---

ವಿ ಷ ಯ ಪ ರಿ ತ್ಯಾ ಗ ಪ್ರ ಕ ರ ಣಂ.

ಕಂ॥ ಭಯ ಮಿವುದೆನಗೆ ಪುಣ್ಯ । ವ್ಯಯ ಲಬ್ಧ ಮಿದೆಂದು
ತಿಳಿದಸಂಪದಮಂ ತಾ । ರಯೆ ಸುಕೃತ ಕಲಿತ ಭೋಗ ನಿ । ಚಯ
ಮನುಭವಿಸಗ್ಗ ದುಃಖಕವೆ ಪಿರಿದಕ್ಕುಂ ॥ ೧೧

ಕಂ॥ ವನಿತಾದಿ ವಿಷಯ ಮೆನಿತುಂ । ದಿನ ಮಿರ್ದೊಡ ಮಳಿ
ವುದೆಂದದಂ ತಾಮೆ ಬಿಡಲ್ ॥ ಜನರ್ಗೆ ಸುಖಮುಪ್ಪು ದದೆ ತಂ ।
ಮನೆ ತೊರೆವಂದಕಟ ಮನಕೆ ದುಃಖಮ ನೀಗುಂ ॥ ೧೨

ವೃ ॥ ಅನುಭವಿಸುತ್ತಮಿರ್ದ್ದುಮಹಹಾ ತೊರೆವರ್ ವನಿ
ತಾದಿ ಭೋಗ ಸಾ । ಧನ ಧನಮಂ ನಿರಾಶತೆಯಿನಾತ್ಮವಿಚಾರರಿ
ದಲ್ತೆ ದುಷ್ಕರಂ ॥ ಮನದೊಳೆ ಕೊತ್ತುದಲ್ಲದೆ ಕರಂ ಧನಗಂಧಮು
ಕಾಣದಿರ್ದೊಡಂ । ಧನದಳಿಯಾಸೆಯಂ ತೊರೆಯಲಾರದ ನಾ ವಕ
ಟೇನಧನ್ಯರೋ ॥ ೧೩

ವೃ॥ ಇಳಿವಾನಂದಾಶ್ರುವಂ ಶಂಕಿಸದೆಡೆಯೊಳ ಪಕ್ಷಿವ್ರಜಂ
ಸೇವಿಸಲ್ ನಿ । ಶ್ಚಳಶಂಭುಧ್ಯಾನದಿಂ ಕಾಲಮನೆ ಕಳೆದಪರ್ ಶೈಲ
ದೋಳ್ ಧನ್ಯರಾದಂ ॥ ಕಳೆಗುಂ ಪ್ರಾಸಾದ ವಾಪೀತಟ ವಿಪಿನ ವಿಹಾ
ರೋತ್ಸವಾಶಾವಿಶೇಷಂ । ಗಳನಾಯುಷ್ಯಂ ವಲಂ ತಾ ನೆಮಗೆ ನು
ಡಿವೆವಾಗ್ಗ್ರಾವಣಾಂನೋಂತ ಸ್ವೈಪಂ ॥ ೧೪

ವೃ॥ ಸವಿವುದೊ ಸುತ್ತಿಸುತ್ತಿ ತಿರಿತಂದಕದನ್ನ ವುದಂ ಗ
ಡೊಂದೆಸೂಳ್ । ಪವಡಿಪುದೋ ನೆಲಂ ಪೊದೆವುದೋ ಶತಖಂಡವು
ನಾಂತ ಕಂಥೆಯೋ ॥ ತವೆ ಪರಿಚರ್ಯೆಗೈವ ಜನವೋ ತನುಮಾತ್ರ
ಮವಸ್ಥೆ ಯಿಂತು ಸಂ । ಭವಿಸಿಯು ಮೆಮ್ಮ ನೋವೊ ಬಿಡದಿರ್ದ್ದ
ಪುದೀ ವಿಷಯೇಚ್ಛೆಯುತ್ಕಟಾ ॥ ೧೫

ವ ॥ತರಸಗ್ರಂಥಿಗಳಂ ಸ್ತನಂಗಳನುದಂ ಚತ್ಸ್ವರ್ಣಕುಂಭಂ
ಗಳಿಂ । ದಿರದಾಶ್ಲೇಷ್ಮದ ಬೀಡೆನಿಪ್ಪ ಮೊಗಮಂ ರಾಕೇಂದುಸೀಕಾಶ
ಮೆಂ ॥ ದೊರೆದುಂಪೇಸಿಕೆವೆತ್ತ ದುರ್ಘಘನಮಂ ದಂತೀಂದ್ರ ಶೀಷಾರ್
ಭಮೆಂ । ದರರೇ ದೊಡ್ಡಿತುಗೆಯ್ದರಲ್ತೆ ಕವಿಗಳ್ ನಿಂದಾರ್ಹಮಂ
ರೂಪಮಂ ॥ ೧೬

ವೃ॥ ಅಗಜಾರ್ಧಾಂಗವ ನೀಳ್ದುಕೊಂಡ ಗಿರಿಶಂ ತಾನೋ
ರ್ವನೇರಾಗಿ ರಾ । ಗಿ ಗಳೊಳ್ತಾನೆ ವಿರಾಗಿಯುಂ ಬಗೆಯೆ ಕಾಂತಾ
ಸಂಗ ದೂರಂಕರಂ ॥ ತೆಗೆ ಕಂದರ್ಪಶಿಳೀಮುಖಾಹಿ ವಿಷದಗ್ಧರ್
ಮಿಕ್ಕ ಮುಗ್ಧರ್ವಲಂ । ಮಿಗೆ ಭೋಗಂಗಳ ಭೋಗಿಸಲ್ಕು ಮುಳಿ
ಯಲ್ಕುಂ ಶಕ್ತರೇಂ ಲೋಕದೊಳ್ ॥ ೧೭

ವೃ॥ ಸುಡುವುದಿದೆಂದು ಕಾಣದ ಪತಂಗ ಮುದರ್ಚಿಗೆ ಬೀಳ್ಗೆ
ಮೀನಮುಂ । ಬಡಿಶದ ಮಾಂಸಮಂ ಸವಿಗೆ ಚುಚ್ಚ್ವರ್ಗುಮೆಂಬುದ
ಕಾಣದಕ್ಕಟಾ ॥ ಕೆಡುಕನೆ ಮಾಳ್ಪವೀ ವಿಷಯಗಳ್ ಕಡೆಗೆಂಬುದ
ಕಂಡು ಕೇಳಿಯುಂ । ಬಿಡೆವವ ನಕ್ಕಟೆಮ್ಮಯ ವಿಮೋಹ ಮಹ
ತ್ವವನೇನನೆಂಬೆವೈ ॥ ೧೮

ವೃ॥ ಬಣಗಲ್ ಬಾಯ್ ತೃಷೆಯಿಂದೆ ನೀರ್ಗುಡಿವುದಂ ಕ್ಷು
ತ್ಪೀಡೆ ಯುಂಟಾಗಲು । ದುಣಿಸಂ ತಾಂ ಸವಿಗೂಡಿ ಭೋಜಿಸುವು
ದಂ ಕಾಮಾಗ್ನಿಕೈಮೀರೆ ಪೆ ॥ ಣ್ಮಣಿಯಂ ನಲ್ಮೆಯ ನಾಂತು ತಳ್ಕೈ
ಸುವುದಂ ತತ್ತದ್ರುಜಾಶಾಂತಿ ಕಾ । ರಣಮಾಗಿರ್ಪ ಚಿಕಿತ್ಸೆಯೆಂ
ದರಿಯದಜ್ಞರ್ ಭೋಗಮೆಂದಾಡುವರ್ ॥ ೧೯

ವೃ॥ ಪರೆಯಂ ತಾಂ ಪೊಸತಾಲಯಂ ಪಿರಿದು ಮಕ್ಕಳ್ ತಕ್ಕ ರತ್ಯಂತಮೈ । ಸಿರಿ ಸೌಭಾಗ್ಯಮನೋಜ್ಞೆ ಭಾರ್ಯೆ ಗಡಿಮೆಲ್ಲಂ ನಿತ್ಯಮೆಂದಾವಗಂ ॥ ಮರುಳರ್ ತಾಂ ನೆಲಸಿರ್ಪರಕ್ಕಟ ಮಹಾಸಂ ಸಾರಕಾರಾಗೃಹಾಂ । ತರದೊಳ್ ಧನ್ಯನದೆಲ್ಲಮಸ್ಥಿರಮೆನುತ್ತಂ ಕಂಡಮಂ ಮೂಣ್ದಿಪಂ ॥ ೨೦

---

ಯಾ ಚ್ಞಾ ದೈ ನ್ಯ ದೂ ಷ ಣ ಪ್ರ ಕ ರ ಣಂ.

ವೃ॥ ಕಂದಿದ ವಕ್ತ್ರದಿಂ ಪಿಡಿಮ ನಾರುಡೆಯಂ ಪಸಿವಿಂದೆ ಮಕ್ಕಳಾ । ಕ್ರಂದಿಸೆ ನೋಡಿ ನೊಂದುಣಿಸನಿಕ್ಕುವೊಡಿಲ್ಲದೆ ಮುಂ ದೆ ದಂದುಗಂ ॥ ದಂದು ಪುರಂಧ್ರಿ ನಿಂದಿರವ ನೀಕ್ಷಿಸದಿರ್ದೊಡೆ ಧೀ ರಮಾನಸರ್ । ಬೆಂದೊಡಲಿಂಗೆ ಗದ್ಗದಮನೊಂದಿದ ಕಂಠದೆ ದೇಹಿ ಎಂಬರೇ ॥ ೨೧

ವೃ॥ ಬಗೆಗಳವಟ್ಟ ಕಟ್ಟೆಸಕದೊಂದಭಿಮಾನದ ಗಂಟ ಭೇ ದಿಪಾ । ಪ್ಪಿರ್ಗನಕಟೂ ತ್ರಪಾತರುಕುಠಾರ ಮನೇಕಗುಣಾಂಬು ಜಂಗಳಂ ॥ ಮುಗಿಯಿಪಕನ್ನಜೊನ್ನ ಮಿದು ದುರ್ಭರಕುಕ್ಷಿಕ ಟಾಹ ಮಾರಯಲ್ । ನಗೆಗೆಡೆಮಾಡಿ ಕಾಡುಗು ಮಶೇಷರ ನಿಂತಿದ ನೇನ ನೆಂದಪೇಂ ॥ ೨೨

ವೃ॥ ಪೊಡವಿಯ ನಿರ್ಜರರ್ ಬಿಡದೆ ಬೇಳ್ವ ಹುತಾಶನಧೂ ಮಜಾಲದಿಂ । ದಿಡಿದೆಸೆವಗ್ರಹಾರದೊಳ್ ಮೋಣ್ಪನದೊಳ್ತಲೆ ವೋ ಡನಾಂತುಬೆಂ ॥ ದೊಡಲಿಗೆ ಭಿಕ್ಷೆಯಂ ತಿರಿದು ಬಾಳ್ವುದೆ ಮಾನಿಗೆ ಲೇಸೆನಿಕ್ಕು ಮಾ । ಬಡತನವಾಂತು ಬಂಧುಗಳ ಮಧ್ಯದೆ ಕೋಟ ಲೆಗೊಳ್ವ ಬಾಳನಿಂ ॥ ೨೩

ಕಂ॥ ಎಲೆ ಜನರೆ ಮಾನಹಾನಿಗೆ । ನೆಲೆಯೆನಿಪ ಪರಾನ್ನ ಕಳಂಪುತಳ್ವುದ ನೋಡಲ್ ॥ ವಿಲಯಮನೊಂದಿತೊ ಗಂಗಾ । ಜಲ ಕಲಿತಂ ಸಿದ್ಧಸೇವಿ ಹಿಮಗಿರಿಕಟಕಂ ॥ ೨೪

ವೃ॥ ಬನದೊಳ್ಪುಟ್ಟುವೊ ಕಂದಮೂಲುವನೀಭೃನ್ನಿರ್ಝ
ರಂಬತ್ತಿತ್ತೋ । ತನಿವಣ್ಣಿಂ ಪೊಸನಾರನೀವ ಧರಣೀಜಾತಂಗಳೇಂ
ಬೀತುವೋ ॥ ಧನಗರ್ವಾನಿಲನಿಂ ಕರಂ ಕುಣಿವ ಪುರ್ಬಿಂಬಿಂಕ
ವಾಂತಿರ್ಪ ದು । ಜನರಾಸ್ಯಂಗಳ ನೇತಕೀಕ್ಷಿಸಿದಪರ್ ದಗ್ಧೋ
ದರಾರ್ಥಂ ಜನರ್ ॥ ೨೪

ವೃ॥ ವಿನಯ ಕಲಾ ವಿದೂರರವಿವೇಕಿಗಳಾಶ್ರಿತವಿತ್ತರೋಗ
ಸಂ । ಜನಿತವಿಲಾಪರಾದರಸರಾ ಪೆಸರುಂ ಕಿವಿ ದಾಗದಂತೆವೊಲ್ ॥
ಬನದೊಳಗಿರ್ದು ಪುಣ್ಯ ಫಲಮೂಲವ ಸೇವಿಸಿ ಪಲ್ಲವಂಗಳಿಂ ।
ದನುಗತವಾ ದಿಳಾತಲದ ತಲ್ಪದೆ ನಿದ್ರಿಪೆವೇಳು ಮಿತ್ರನೇ ॥ ೨೫

ವೃ॥ ಬನಬನದೊಳ್ ಮಹಾದ್ರುಮಫಲಂ ದೊರೆಗುಂ ಶ್ರಮ
ಮಿಲ್ಲದಂತು ಮೇ । ಣಿನಿದೊಳಕೊಂಡ ಪುಣ್ಯ ತಟನೀಜಲ ಮಿರ್ಪ
ದು ತಾಣತಾಣದೊಳ್ ॥ ತನುಗೊಲವೀವ ಮೆಲ್ದಳಿರ ಶಯ್ಯೆಯು
ಮಿರ್ದಪು ದಿನ್ನದೇತಕೀ । ಧನಿಕರ ಬಾಗಿಲೊಳ್ ಬಳಲುತಿರ್ದಪ
ರಕ್ಕಟ ದೀನರಾಶೆಯಿಂ ॥ ೨೬

ವೃ॥ ಧನಿಕರಮುಂದೆ ಪಲ್ಗಿರಿದು ಬೇಡುವ ದೀನ ರದೊಂದು
ದುಃಖಮಂ । ಮನೆಮನೆವಾಳ್ತೆಯಿಂ ಮರುಳುಗೊಂಡಿಹ ಸಂಸೃತಿ
ಬದ್ಧ ರಾರ್ತಿಯುಂ ॥ ನೆನೆ ನೆನೆದಾನೆ ನಕ್ಕಪೆ ನಿಳಾಧರ ಸಾನು ಶಿಲಾ
ನಿಷಣ್ಣನಾ । ಗನಿಶಮುಮಾತ್ಮಯೋಗದೊಳಗಿರ್ದು ಬಹಿರ್ಮುಖ
ನಾದ ಪೊಳ್ತನೊಳ್ ॥ ೨೭

ವೃ॥ ದೈವಂ ಕೊಟ್ಟುದ ನುಂಡು ತೃಪ್ತಿವಡುವ ಗ್ಗಾನಂದ
ಮೇಂತಪ್ಪಿತಿ । ಲ್ಲೀವೇಳ್ಪಿಂ ಧನಲೋಭದಿಂ ಕುದಿವ ರಾಶಾಪೂರ್ತಿ
ಯೇನಾದುದಿ ॥ ಲ್ಲಾವಂಗಾ ಗಿದ ಗೈದನೋ ವಿಧಿ ಪರಾರ್ಥಕ್ಕೈದದಾ
ತ್ಮೀಯ ಸಂ । ಭಾವಶ್ರೀಕ ಮೆನಿಪ್ಪ ಮೇರುವ ನಿದಂ ನೋಳ್ಪೊ
ಪ್ಪದೆನ್ನೀಮನಂ ॥ ೨೮

ವೃ ॥ ಕ್ಲೇಶ ವಿನಾಶಿ ಯೆಂದು ಮದಮತ್ಸರಮರ್ದನ
ಮೆಂದುಸತ್ಸುಖಾ । ವೇಶಕ ಮೆಂದು ಭೀತಿಹರ ಮೆಂದು ಮಜಸ್ರ ಮ
ಯತ್ನಲಭ್ಯಮೆಂ ॥ ದೀಶನಸತ್ರಮೆಂ ದಳಯದಿರ್ಪ್ಪ ನಿಧಾನ ಮು
ಮಿಂತಿದೆಂದು ಭಿ । ಕ್ಷಾಶನಮಂ ಕರಂ ಪೊಗಳ್ವರೊಲ್ದು ಮುಮುಕ್ಷು
ಗಳಪ್ಪ ಯೋಗಿಗಳ್ ॥ ೩೦

## ಭೋಗಾಸ್ಥಿರತ್ವವರ್ಣನ ಪ್ರಕರಣಂ.

ವೃ ॥ ಬಲದೊಳರಾತಿ ಭೀತಿ ಕುಲದೊಳ್ಚ್ಯುತಿಭೀತಿ ಜ
ರಾತಿಭೀತಿ ರೂ । ಪೊಳ್ ನೃಪಭೀತಿ ವಿತ್ತದೊಳ್ ಭೋಗದೆ ರೋ
ಗದಭೀತಿ ನೀತಿಯೊಳ್ ॥ ಖಲಜನಭೀತಿ ಮಾನದೊಳ್ ದೈನ್ಯದಭೀತಿ
ಕೃತಾಂತಭೀತಿ ಮೆ । ಯ್ಯೊಳ್ ಪರವಾದಿಭೀತಿ ಕಲೆಯೊಳ್ ಸುವಿರ
ಕ್ತಿಯದೊಂದೆ ನಿರ್ಭಯಂ ॥ ೩೧

ವೃ ॥ ಮರಣದೆ ಜನ್ಮ ಮಾಜರೆಯಿ ನೊಪ್ಪುವ ಜೌವನ
ಮರ್ಥಕಾಂಕ್ಷೆಯಿಂ । ಹರುಸಮುದಂಗನಾಜನದ ವಿಭ್ರಮದಿಂ ಶಮೆ
ದುಷ್ಟರಿಂನೃಪರ್ ॥ ಉರಗದೆ ಚಂದನಂ ಗುಣ ಮಸೂಯಿಗಳಿಂ ಸಿರಿ
ಯಸ್ಥಿರತ್ವದಿಂ । ಪರಿಗತಮಾದುದಾಕ್ರಮಿಸದಾವುದುಮಾವುದರಿಂ
ಧರಿತ್ರಿಯೊಳ್ ॥ ೩೨

ವೃ ॥ ಜನದಾರೋಗ್ಯಮ ಮಾಣಿಕುಂ ಪಿರಿದು ಮಾಧಿವ್ಯಾ
ಗಳ್ ಸಂಪದಂ । ಘನಮಾಗಿರ್ಪ್ಪೊಡೆಯುಲ್ಲನಗ್ಗಳಮೆನಲ್ ಬೀಳ್ಗುಂ
ಸಮಂತಾಪದಂ ॥ ಜನನಂ ಪೊರ್ದ್ದಿದ ಜಂತುವಂ ಬಿಡದೆ ಕೊಳ್ಗುಂ
ತಪ್ಪದಾ ಮೃತ್ಯುಗ । ಳ್ಕನೆ ತಾಂ ನೋಡೆ ನಿರಂಕುಶಂ ವಿಧಿ
ಯದೇನಂ ಸುಸ್ಥಿರಂ ಮಾಡಿದಂ ॥ ೩೩

ವೃ ॥ ಸ್ಥಿರಮಲ್ಲಂ ಜೀವಿತಂ ಭೋಗಮೊ ತರಳತರಂಗೋ
ಪಮಂ ಯೌವನ ಶ್ರೀ । ಭರಮೋ ಮೂರೇದಿನಂ ಕಾದಲೆಚಲೆತೆಗೆ
ಸಂಸಾರಮೋಸಾರಮಲ್ಲಂ ॥ ತರಿನೊದಾರಯ್ದು ತತ್ವಾರ್ಥಮ ಬುಧರೆ

ಜನಾನುಗ್ರಹ ಕ್ಕಾತ್ಮಚಿಂತಾ । ಪರರಾಗಿಂ ಶ್ರೇಷ್ಠರೇಗೆಯ್ದಪ ರದನಿ
ಜನರ್ ಶ್ರದ್ಧೆಯಿಂ ಮಾಳ್ಪರಲ್ತೇ ॥ ೩೪

ವೃ॥ ಪಲವಗೆಯಾದ ಭೋಗತತಿ ಮೇಘದೆ ಮಿಂಚುವ ಮಿಂ
ಚಿನಂತೆ ಚಂ । ಚಲತರ ಮಾಯು ವಾಯುನಿಹತಾಬ್ಜದಳೋದಕ
ದಂತೆ ಭಂಗುರಂ ॥ ವಿಲಸಿತ ಯೌವನೋತ್ಸವಮು ಮಸ್ಥಿರಮೆಂದು
ಮರಲ್ಲಿ ಚಿತ್ತಮಂ । ಚಲಿಸ ದಣಂ ಸಮಾಧಿಯೊಳ್ ಸಂದು ಸೊ
ಗಂಬಡೆಯಿಂ ವಿವೇಕಿಗಳ್ ॥ ೩೫

ವೃ॥ ಸಿರಿ ಸಂಕಲ್ಪಕಸಾಟಿ ಯೌವನಭರಂ ಮೂರೇದಿನಂ
ವೀಚಿಯುಂ । ತಿರೆ ತಾಂ ಚಂಚಲಮಾಯು ಕಾರ್ಮುಗಿಲ ಮಿಂಚಂ
ಪೋಲ್ವುವೀ ಭೋಗಗಳ್ ॥ ಸ್ಥಿರಮಲ್ಲಂ ದಯಿತಾಜನೋಪಗತ
ಕಂಠಾಲಿಂಗನಾ ನಂದಮುಂ । ಭರದಿಂ ದಾಂಟ ಭವಾಬ್ಧಿಯಂ ನೆಲಸಿರೈ
ಬ್ರಹ್ಮಾನುಸಂಧಾನದೊಳ್ ॥ ೩೬

ವೃ॥ ಜನನಿಯ ಪೂತಿಗಂಧಮಯ ಗರ್ಭದೆ ಮೆಯ್ಯುಡುಗಿ
ರ್ಪರ್ ಬಾಧೆ ಯೌ । ವನದೊಳಗಂಗನಾವಿರಹದುಃಖಮನುಂಬು
ದದೊಂದುಬಾಧೆಮು ॥ ಪ್ಪಿನೊಳ್ವಧೂಟಿಯುರ್ಕ್ಕಳದಿರೊಳ್ಕಗೆ
ಗೀಡೆನಿಸಿರ್ಪ್ಪ ಬಾಧೆದಲ್ । ಮನುಜರೆ ಪೇಳಿಮೆಳ್ಳನಿತುಸಂಸೃತಿ
ಯೊಳ್ ಸುಖಮಿದ್ರ್ದಡಿನ್ನದಂ ॥ ೩೭

ಕಂ॥ ನಡುಗಿಕುಮುದೆ ಜರೆ ಪುಲಿಯುವೊ । ಲೊಡಲಂ ರುಜೆ
ಪೊಡೆವುದರಿಪ್ರೊಲಾಯುವದೊಸಗರ್ಗಂ ॥ ಒಡೆದಘಟದುದಕದಂತಾ ।
ದೊಡಮುಹಿತಂ ಮಾಳ್ಪರೆಂಬುದಚ್ಚರಿ ಮನುಜರ್ ॥ ೩೮

ವೃ॥ ವಿವಿಧಮೆನಿಪ್ಪ ಭೋಗಕುಲ ಮಸ್ಥಿರ ಮಂತದ ನುಣ್ಬು
ದಕ್ಕಮೇ । ಭವಮಿದು ಬಂದುದಿನ್ನಿದಕದೇಕೆ ತೊಳಲ್ವಿರಿ ತಾನೆ
ಊಡುಗುಂ ॥ ನಿಪಗಿರಲೆಮ್ಮ ಮಾತಿನೊಳೆ ನಂಬಿಕೆ ದುರ್ವಿಷಯಾ

ಭಿಲಾಷೆಯುಂ । ತವೆಪರಿದಿಕ್ಕಿ ಮಾನಸಮ ನಾತ್ಮನೊಳೊಂದಿಪ್ರದ್ಯೆ ಸುಬುದ್ಧಿಗಳ್ ॥ ೩೯

ವೃ॥ ಆವೆಡೆ ನಿಂದೊಡಂ ಬುಜಭವಾದಿಗಳುಂ ತೃಣಕಲ್ಪ ರಾದಪರ್ । ಸೇವಿಸಲಾವುದಂ ತ್ರಿಭುವನೇಶತೆಯುಂ ವಿರಸಂದಲಪ್ಪ ದಾ ॥ ಪಾವನಭೋಗದೊಳ್ ರಮಿಸು ನೀನೆಲೆ ಸಾಧುವೆ ಸಾಕು ಮಿ ಕ್ಕ ಭೋ । ಗಾವಳಿಯೆಲ್ಲಮಸ್ಥಿರಮಿದಂ ಸಲೆ ಕಾಂಕ್ಷಿಸಬೇಡ ಚಿತ್ತ ದೊಳ್ ॥ ೪೦

---

## ಕಾಲಮಹಿಮಾನುವರ್ಣನಂ.

ವೃ ॥ ಆರಮಣೀಯುಪತ್ತನಮುಮಾನ್ಯಪಶೇಖರ ಸಾವಿನ ಮ್ರಭೂ । ವಿಾರಮಣಕ್ಕಳಾ ವರಸಭಾಸದರಾ ಶಶಿಬಿಂಬವಕ್ತ್ರೆ ಯರ್ ॥ ಆರುಚಿರಾಂಗರಾಜಸುತರಾ ವಿಭವಂಗಳವೆಲ್ಲ ಮೇತರಿಂ । ಸೇರಿದುವಕ್ಕಟಾ ನೆನೆಪುವಟ್ಟೆಯುಮಂದಿಪುದಾಸುಕಾಲಮಂ ॥ ೪೧

ವೃ॥ ಪಲರಿರುತಿಪ್ಪರ್ ಮಂದಿರದೊಳಿರ್ದ್ದರ್‍ಪನೋರ್ವನೆ ಯೋ ರ್ವನಿಪ್ಪರ್ ತ । ನ್ನಿಲಯದೊಳಿರ್ದ್ದರ್‍ಪರ್ ಪಲಬರಂತ್ಯದೊಳೋರ್ವ ನು ಮಿಲ್ಲಮಿಂತು ಚಂ ॥ ಚಲತರರಪ್ಪ ಜೀವರನೆ ಕಾಯ್ಗಳ ನಾಗಿ ಸುತಾಡುವಂ ಧರಾಫ । ಲಕದೆ ಧೀರಕಾಲವಿಭು ಚಿಮ್ಮುತಿರುಳ್ಪಗಲಿಂ ಬ ನೆತ್ತಮಂ ॥ ೪೨

ವೃ॥ ಅನುದಿನಮಾಯು ತಾಂ ಸವೆವುದೀಯುದಯಾಸ್ತಮ ಯಂಗಳತ್ತಣಿಂ । ಮನೆಮನೆಪಾಳ್ತೆಯಿಂ ಕಳೆವ ಕಾಲಮುಮಕ್ಕಟ ಕಾಣದಿಕ್ಕರ್ವಿಾ ॥ ಜನದ ಜರಾವಿಪತ್ತಿಮರಣಂಗಳಕಂಡೊಡ ಪೋಕ ಭೀತಿ ಸಂ । ಜನಿಯಿಸದೋಪ್ರೊ ಮೋಹಮಧುವಿಂಟಿ ಜಗಂ ಮರುಳಾಯ್ತು ನಿಕ್ಕುವಂ ॥ ೪೩

ವೃ॥ ಇರುಳಿದು ಪೋದಿರುಳ್ಗೆ ಸರಿ ಯಿಾಪಗಲಾಪಗಲಿಂಗೆ ಸಾಟಿಯೆಂ । ದಿರದೊಡನುಜ್ಜುಗಂಬಡುತಮುಂಡುವನುಂಡು ನಿರೀ

ಕ್ಷಿಸಿರ್ದ್ದುದಂ ॥ ನಿರುಕಿಸಿ ಭೋಗಿಸಿರ್ದ್ದುದನೆ ಭೋಗಿಸಿ ಗೆಯ್ದು
ದಗೆಯ್ದುಮೋಮೊ ಜೀ । ಸರಿಸಿದುದಿಲ್ಲ ಸಂಸ್ಕೃತಿಯೊಳೆಮ್ಮ
ವಿಮೋಹಕದೇನನೆಂಬೆಮೈ ॥ ೪೪

ವೃ॥ ಸ್ಮರಿಸಿದುದಿಲ್ಲ ಶಂಭುಪದಮುಂ ಭವಮುಕ್ತಿಗೆ ಭಕ್ತಿ
ವೆತ್ತು ಮೇಣ್ । ಸುರನಗರೀಕವಾಟಹರಧರ್ಮಮುಮಾರ್ಜನೆಗೆಯ್ದು
ದಿಲ್ಲ ಮೇಣ್ ॥ ಗುರುಕುಚೆಯರ್ಕಳುಂ ಕನಸಿನಲ್ಲಿಯು ಮಪ್ಪಿದ
ರೆಂಬುದಿಲ್ಲ ಮೀ । ಧರೆಯೊಳ್ಪುಟ್ಟಿ ಪೆತ್ತಳುರುಯೌವನಮಂ ಬರಿಗೆ
ಯ್ದುವಕ್ಕಟಾ ॥ ೪೫

ವೃ॥ ಓದಿದುದಿಲ್ಲ ವಾದಿಜಯವಿದ್ಯೆಯುಮುನ್ಮದಕುಂಭಿ ಕುಂ
ಭನಿ । ರ್ಭೇದನಖಡ್ಗದಿಂ ಯಶಮುಮೆಯ್ದಿಸಿತ್ತಿಲ್ಲ ದಿವಕ್ಕೆ ಚಾರು
ಚಂ ॥ ದ್ರೋದಯದಲ್ಲಿ ಕಾಂತೆಯಧರಾಮೃತಮುಂ ನೆರೆಪೀರಿತ್ತಿಲ್ಲ
ಪೋ । ಪೋದುದುಯೌವನಂ ಬರಿದೆ ಪಾಳ್ಮನೆಗೆತ್ತಿದ ದೀಪದಂ
ತೆವೊಲ್ ॥ ೪೬

ವೃ॥ ಕಲೆಯುಮನಾದೊಡಂ ಕಲಿತನಲ್ತು ಸಮಗ್ರಮದಾಗೆ
ಪೊನ್ನುಮಂ । ಗಳಿಸಿದನಲ್ತು ಮಾತೃಪಿತೃಸೇವೆಯುಮಂ ನೆರೆಗೆ
ಯ್ದನಲ್ತು ಮೇಣ್ ॥ ಲಲನೆಯರಂ ಕರಂ ಕನಸಿನಲ್ಲಿಯು ಮಪ್ಪಿದನಲ್ತು
ಕಾಲಮಂ । ಕಳೆದೆನೆ ವಾಯಸಂಬೊ ಲಕಟಾಪರಪಿಂಡವಿಲೋ
ಲುಪತ್ವದಿಂ ॥ ೪೭

ಕಂ॥ ಆಳಿದರ್ ಪೆತ್ತವರುಂ ಮೇಣ್ । ಬಳೆಯಿಸಿದರುಮೆ
ಮ್ಮವಸ್ಥೆಯುಂ ತಾನೀಗಳ್ ॥ ಮಳಲಳುರ್ದ ಪೊಳೆಯತಡಿಯೊಳ್ ।
ಬೆಳೆದ ಮರಂಗಳ್ಗೆ ಸಾಟಿಯೆಂದೆನಿಸಿರ್ಕ್ಕಂ ॥ ೪೮

ವೃ॥ ಶತವರ್ಷಂ ಜನಕಾಯು ಮಂತದರೊಳರ್ಧಂ ರಾತ್ರಿ
ಯೊಳ್ಪೋಯ್ತು ಬಾ । ಲತೆಯೊಳ್ವೃದ್ಧತೆಯೊಳ್ತದರ್ಧದೊಳ
ಗರ್ಧಂ ಪೋಯ್ತು ಮಿಕ್ಕಾಯುಮಂ ॥ ಗತಮಕ್ಕುಂ ಗಡ ರೋಗ

ಬಂಧುವಿರಹ ಕ್ಲೇಶಾಢ್ಯಸೇವಾದಿಯಿಂ । ದತಿಚಾಂಚಲ್ಯದ ಬಾಳ್ಗೊ
ಳೆತ್ತಣಿನಿಣಂ ಜೀವರ್ಗ್ಗಸೌಖ್ಯಂ ವಲಂ ॥ ೪೯

ವೃ॥ ಎಣಿಸಲ್ ಸಂಸಾರಮೀ ನಾಟಕ ಮದರೊಳಗೀ ಮಾ
ನವಂತಾಂ ನಟಂಬೊಲ್ । ಕ್ಷಣದೊಳ್ ಬಾಲಂ ಕ್ಷಣಂ ಜೌವನಿಗನ
ತಿಮದಾಢ್ಯಂಕ್ಷಣಂ ವಿತ್ತಹೀನಂ ॥ ಕ್ಷಣಮೈಶ್ವರ್ಯಪ್ರಪೂರ್ಣಂ
ಕ್ಷಣಮಹಹ ಜರಾಜೀರ್ಣನಾಗಂತ್ಯದೊಳ್ ಸಂ । ದಣಿಮಾಣ್ದಾ ಕಾ
ಲನೂರೆಂದೆನಿಪ ತೆರೆಯೊಳಂತೈದುವಂ ಪೇಳ್ವೆವೇನಂ ॥ ೫೦

---

## ಎತಿನೃಪತಿ ಸಂವಾದ ವರ್ಣನೆ.

ವೃ॥ ದೊರೆನೀನಾವು ಮುಪಾಸಿತಾವಳಗುರು ಪ್ರಜ್ಞಾಭಿಮಾ
ನಂಗಳಿಂ । ದೊರೆವೆತ್ತರ್ ಸಿರಿಯಿಂನೆಗಳ್ತೆನಿನಗೆಮ್ಮಂನರ್ಗ್ಗ ಸದ್ವಿದ್ಯೆ
ಯಿಂ ॥ ಕರಮೀಗಾವರ್ಗ್ಗಮಗಂತರಂ ಪಿರಿದುದೂರಂಜ್ಞಾನವಿತ್ತಂಗಳಿಂ ।
ದೊರದೇನೆಂಮೊಳು ಪೇಕ್ಷೆಗೈದ ಪೊಡನೀಮಾವುಂವಲಂ ನಿಸ್ಪೃಹರ್

ವೃ॥ ಅರಸಾ ನೀನರ್ಥಕಾಣ್ಮಂ ಪರಿಕಿಸುವೊಡೆ ನಾಗರ್ಥ
ಕಾಣ್ಮರ್ಕ್ಕಳಾವಾ । ಅರಿಯಂ ಗೆಲ್ವಾಪ್ಪರ್ ನಿನ್ನಲ್ಲರೆ ಯಮಗಿದೆ
ದಲ್ ವಾದಿಯಂಗೆಲ್ವ ಶೌರ್ಯಂ ॥ ಸಿರಿಗೋಲ್ವೈಪರ್ ಜನರ್ ನಿನ್ನನೆ
ತಿಳಿವಿಕೆಗೋಲ್ವೈಪರೆಮ್ಮಂಗಡೀರ್ವರ್ । ಸರಿ ನೀನೆಮ್ಮೊಳುಪೇಕ್ಷಾ
ಪರನೆನಿಸೆ ಕರಂ ನಿನ್ನೊಳಾವುಂ ನಿರಾಶರ್ ॥ ೫೨

ವೃ॥ ಜನಪತಿ ಪರಿತುಷ್ಟರ್ ವಲ್ಕದಿಂದಾವು ನೀನುಂ । ಕನಕ
ವಸನದಿಂದಂ ತುಷ್ಟನಿನ್ನೇಂವಿಶೇಷಂ ॥ ಮನದೊಳೆ ಪರಿತೋಷಂ
ದಾಳದಂತಾಂದರಿದ್ರಂ । ಮನಕಿರೆ ಪರಿತೋಷಂ ದೀನರಾರಾಢ್ಯನಾವಂ

ಕಂ॥ ಫಲಮುಂಟುಂಬೊಡೆ ಕುಡಿವೊಡೆ । ಜಲಮುಂಟಿಳ್ಪ
ಡುವೊಡುಂಟು ಪೊದೆವೊಡೆ ತರುವ ॥ ಲ್ಕಲಮುಂಟು ಸೈಪುದೇಕೆ ।
ನ್ನಿಳೆಯೊಳ್ಧನಮದ್ಯಮತ್ತಜನಪರಸೊರ್ಕ್ಕಂ ॥ ೫೪

ಕಂ॥ ಉಂಬೆವು ಭಿಕ್ಷಾನ್ನವನೆ ದಿ । ಗಂಬರರಾಗಿಪ್ಪೆವೊಲ್ದು

ದ್ರಿಪನಿಳಯೊಳ್ ॥ ಕುಂಬಿಣಿಯರಸರ ಸೇವಿಪ । ಹಂಬಲವಿನ್ನೇ
ತಕೆಮಗೆಪೇಳ್ಮಿ ಮಿತ್ರಾ ॥ ೫೫

ಕಂ॥ ನಟರಲ್ಲಂ ವಿಟರಲ್ಲಂ । ಘಟಕುಚಭಾರದೊಳ್ ಬಾಗಿದ
ಸಿಯರುಮಲ್ಲಂ ॥ ಕುಟಿಲವಚೋವಿದರಲ್ಲಂ । ಘಟಿಪುದದೆಂತೆಮಗೆ
ದರ್ಶನಂ ಧರಣಿಪನಾ ॥ ೫೬

ವೃ॥ ನೆಲನಂಸ್ಥಾಪಿಸಿದರ್ ಮಹಾಪೃಥು ಹರಿಶ್ಚಂದ್ರಾದಿಗಳ್ತಾ
ಮದಂ । ಬಲುಹಿಂದಾಳಿದರಾ ಯಯಾತಿಮುಖಭೂಪರ್ ಮೇಣವಂ
ಕೊಟ್ಟರಾ ॥ ಬಲಿಮುಖ್ಯರ್ ತೃಣಮೆಂದಿಕ್ಕಿ ಪಲರೀಗೀರೇಳು
ಲೋಕಂಗಳಂ । ಸಲಪುತ್ತಿರ್ದಪರೇಕೆ ಬೀಗುವರೊ ನಾಲೂರಾ
ಳ್ಕಿಗೀ ದುರ್ನೃಪರ್ ॥ ೫೭

ವೃ॥ ಎಡೆದೆರಪಿಲ್ಲಪಂತು ಪಲಬರ್ ಧರಣೀರಮಣರ್ಕಳಾಳಿ
ದೀ । ಪೊಡವಿಯಲಾಭದಿಂದೆ ಬಹುಮಾನಮದೇ ನರಸರ್ಗದಿಕ್ಕೆ
ಯಾ ॥ ಪೊಡವಿಯೊಳೊಂದುಭಾಗ ಮದರೊಂದೆಡೆಯಂ ತದರೊಂ
ದುಮೂಲೆ ಗಾ । ವೊಡೆಯರೆನಿಪ್ಪೆವೆಂವಳಲದೇತಕೆ ಬೀಗುವರೋ
ವೊ ಗಾವಿಲರ್ ॥ ೫೮

ವೃ॥ ಎಣಿಸಲ್ಕೀ ನೆಲ ನಂಬುಸಂವಳಿತವೃತ್ತಿಂಡಂ ಗಡಾ
ತಾನದಂ ॥ ರಣದಿಂ ಸ್ವಾಂಶವಗೆಯ್ದು ಭೋಗಿಪರಸರ್ ತಾಮೇವರಿ
ದ್ರರ್ ವಲಂ ॥ ಪಣಮಂ ಕೊಟ್ಟಪರೇನವರ್ಕ್ಕುಷುವರೇಂ ಪೋಪಿತ್ತ
ಲೇಶಕ್ಕೆ ಬಾಯ್ । ದಣಿವಂತರ್ಥಿಪರಕ್ಕಟಾ ಅವರುಮಂ ಛೀಛೀ ಮ
ನುಷ್ಯಾಧಮರ್ ॥ ೫೯

ವೃ॥ ಹರಶೀರ್ಷಾಗ್ರಕೆ ಸಂದುದಾವನಕಪಾಲಂ ಭೂಷಣಾ
ರ್ಥಂಮಹೀ । ವರನಾತಂ ನೃಪಚಂದ್ರನಾರಯೆ ಕೆಲಂಬರ್ ತಮ್ಮ ದ
ಗ್ಧೋದರಂ ॥ ಬೊರೆಯಲ್ಕಂಬಿಡೆ ಬೀಗಿ ಬಿರ್‍ನೆ ಜಗಕ್ಕಾವೇನ
ರೇಂದ್ರರ್ಕಳೆಂ । ದರರೇ ತಳ್ತು ಮಹಾಮದಜ್ವರದಿನೇಕೀ ದುರ್ನೃ
ಪರ್ ಬೆಂದಪರ್ ॥ ೬೦

## ಮನಸ್ಸಂಬೋಧನ ನಿಯಮನ ಪ್ರಕರಣಂ.

ವೃ॥ ಪರರ ಮನವನೇಕಾಯಾಸದಿಂದಂ ಪ್ರಸನ್ನಿ । ಕರಿಸಲ ಳಲುವೈ ನೀನಾದೊಡಂತಃಪ್ರಸನ್ನಂ ॥ ಸುರಮುಣಿಗಣರೂಪಂ ಸಾರ ಸಂಕಲ್ಪಮಾದಂ । ನೆರೆಪದೆ ನಿಜವಾಂಛಾಸಿದ್ಧಿಯಂಚಿತ್ತಮೇಪೇಳ್ ॥

ಕಂ॥ ಪಲವೆಡೆ ತೊಳಲಿದೊಡಕಟಾ । ಫಲಮೇಂ ಸಂತಮಿರು ಮನವೆ ಬಪ್ಪರ್ದೆ ಬಕ್ಕುರ್ಂ ॥ ಸಲೆ ಭೂತಭಾವಿಗಳ ಹಂ । ಬಲಿ ಸದೆ ದೊರೆದುದನೆ ಸುಖದೊಳನುಭವಿಸಿದಪೆಂ ॥ ೬೦

ವೃ॥ ಆಯುಸಮಿಾವ ದುರ್ವಿಷಯಕಾನನಕ್ಕೈದದೆ ಚಿತ್ತಮೇ ಕರಂ । ಶ್ರೇಯಮನೀವ ಸಾಧುಪಥದೊಳ್ ನಡೆ ಪೋದಪುದೆಲ್ಲ ದುಃಖಮುಂ ॥ ಹೇಯಮೆನಿಪ್ಪ ಸಂಸ್ಕೃತಿಯೊಳಾಸೆಯನಾಂಪ್ರುದರಿಂದ ಮೇನೊ ನಿ । ಶ್ರೈಯಸಸೌಖ್ಯಮಂ ಪಡೆಯ ನಿಶ್ಚಲನಾಗಿ ನಿಜಾತ್ಮ ಯೋಗದೊಳ್ ॥ ೬೩

ವೃ॥ ಮೋಹಮ ವರ್ಜಿಸಾರ್ಜಿಸು ಸುಧಾಕರಶೇಖರಭಕ್ತಿ ಯುಂ ಮರು । ದ್ವ್ಯಾಹಿನಿಯಿರ್ಪ್ಪ ದೇಶದೆ ನಿವಾಸಿಸು ಚಿತ್ತಮೆ ನಂ ಬಲಕ್ಕುಮೇ ॥ ನೂಹಿಸೆ ವೀಚಿಯುಂ ನಲಿಲಬುದ್ಬುದಮಂ ಫಣಿ ಬೃಂದಮಂ ತಟ । ದ್ವ್ಯೂಹಮನಂಗನಾಜನಮನು ಜ್ವಲದಗ್ನಿಶಿ ಖಾಕಲಾಪಮಂ ॥ ೬೪

ವೃ॥ ಸಿರಿ ಭೂಪಭ್ರುಕುಟೀಕುಟೀರದೆ ವಿಹಾರಂ ಮಾಡುವಾ ವಾರಸುಂ । ದರಿ ತಾನಾಕೆಯ ಚಿಂತೆಬೇಡ ಮನಮೇ ನಿಲ್ಲಳ್ಗಡಾರ ಲ್ಲಿಯುಂ ॥ ವರವಾರಾಣಸಿಗೆಯ್ದಿ ಕಂತೆದಳೆದಾ ಆಮಂದಿರಪ್ರಾಂತ ದೊಳ್ । ಚರಿಸುತ್ತಂ ಕರಪಾತ್ರಭಿಕ್ಷೆಯ ನೊರಲ್ದಾಸ್ವಾದಿಸಲ್ಕ ರ್ಥಿಪೆಂ ॥ ೬೫

ವೃ॥ ಇದಿರೊಳ್ಗಂಪಾಂತ ಗಾನಂ ಕೆಲದೆ ಕವಿವರರ್ ದಾಕ್ಷಿ ಣಾರ್ ಪಿಂತೆ ಕಂತೊ । ನ್ಮದಚಂಚಚ್ಚಾಮರಗ್ರಾಹಿಣಿಯರ ವಲಯಾ

ರಾವ ಮಿಂತಿದ್ರೋರ್ಡಾನಂ ॥ ದದೆ ನೀಂ ಸಂಸಾರಸಾರಾಮೃತವ ಸವಿ
ಕರಂ ಚಿತ್ತವೋ ಮತ್ತಮಂತೆ । ಲ್ಲದೊಡೀ ಸಂಸಾರದಿಂದೇಂ ಕಳೆ
ತಳೆ ಪರಮಾತ್ಮಾನುಸಂಧಾನದೊಳ್ಪಂ ॥ ೬೬

ಕಂ॥ ಅರಿಗಳ ತಲೆಮೆಟ್ಟಿದೊಡೇಂ । ಸಿರಿಯಂ ಗಳಸೇನೊ
ಪಿರಿದವಟರ ನೋಲಿಸೇಂ ॥ ಇರಲೇನಾಕಲ್ಪಾಂತಂ । ಬರ ಮರಿವಂ ಪ
ಡೆಯದಿರ್ಪ್ಪರ್ ಮನುಜರ್ ಧರೆಯೊಳ್ ॥ ೬೭

ಕಂ॥ ಹರನೊಳಡು ಭಕ್ತಿಯುಂ ಜನಿ । ಮರಣಂಗಳ್ಗಂಜು
ತೂರೆ ಸತೀಸುತರೊಳ್ಕ ॥ ಟ್ಟೆರಕವ ನಮಲವಿರಕ್ತಿಯು । ಧರಿಸು
ಕರಂ ನೆಲಸು ವಿಜನಮೆನಿಸಿದ ವನದೊಳ್ ॥ ೬೮

ಕಂ॥ ಬಳಕೆ ಜರಾಂತಗಳಿಲ್ಲದೆ । ತೊಳಪಾತ್ಮನ ನೆನೆ ಯ
ಸದ್ವಿಕಲ್ಪಂಗಳ ನೇಂ ॥ ಫಳ ಮಾತ್ಮಸಂಗಿಗೇತಕೆ । ತಿಳವಿಲ್ಲದರೆಳಸು
ವಿಂದ್ರಪದಮುಖಭೋಗಂ ॥ ೬೯

ಕಂ॥ ಪುಗುವೆ ರಸಾತಳಕಲ್ಲಿಂ । ನೆಗೆವೆ ವಿಯತ್ತಳಕೆ
ಚರಿಪೆ ದೆಸೆಗಳೊಳೆಲ್ಲಂ ॥ ತೆಗೆ ಚಿತ್ತಮೆ ಮರೆದುಂ ನೀಂ । ಸೊಗ
ಮಿಾವ ಪರಾತ್ಮಚಿಂತೆಗೆಳಸೆ ಯುದೇಕೈ ॥ ೭೦

---

## ನಿತ್ಯಾನಿತ್ಯವಸ್ತುವಿಚಾರ ಪ್ರಕರಣಂ.

ವೃ॥ ನಿಗಮಪುರಾಣಶಾಸ್ತ್ರಪಠನಂಗಳನೇ ನಮರಾವತೀಪುರ ।
ಪ್ರಗತ ಕುಟೀರವಾಸಫಲಮಿಾವ ಮುಖಂಗಳನೆಲ್ಲ ಮಾಡಲೇಂ ॥ ಜಗ
ದೆಭವಾರ್ತಿಹಾರಿ ಪರಮಾತ್ಮಸುಖಾನುಭವಾಮಳಸ್ಥಳಂ । ಬುಗುವುದ
ನೊಂದಮಾಣ್ದಿಳದ ವರ್ತಕವೃತ್ತಿಗಳಿಂದಮೇಂ ಫಲಂ ॥ ೭೧

ವೃ॥ ಸಿರಿಗೆಡೆಯಾದ ಮೇರುಗಿರಿಯುಂ ವಿಲಯಾಗ್ನಿಶಿಖಾಕ
ಲಾಪದಿಂ । ದುರಿಗು ಮುದಗ್ರಮಾದ ಮಕರಾಲಯಮುಂ ಗಡ ನಾಡೆ

ಬತ್ತುಗುಂ ॥ ಧರಣಿ ಯೆಗೇಂದ್ರಪಾದಧೃತ ಮಾದೊಡೆ ಮಾಂಪುದೆನೆ
ಲ್ಕೆನಾಶವುಂ । ಕರಿಗಳ ಕರ್ಣದಂತೆ ಚಲಮಾದೊಡಲಂಗಮ ನೇನ
ನೊಂಪಪೆಂ ॥ ೨೦

ವೃ॥ ಬಡಲೆಲ್ಲಂ ಕುಗ್ಗಿ ಪೋದತ್ತುಡುಗಿತು ನಡೆ ಮೇಣ್ಪಲ್ಗ
ಳುಂಬೀಳ್ದುವಾಸ್ಯಂ । ಕಡೆವಾಯಿಂ ಸೋರ್ವ್ವಜೊಲ್ಲಿಂದಿಡಿದುದು
ಕಿವಿಯುಂ ಕೇಳದಾದತ್ತು ಕಣ್ಣುಂ ॥ ನಡೆ ನೋಡಲ್ಕಾಣದಾಯ್ತಾದ
ರಿಸರೊರೆದುದಂ ನಂಟರುಂ ಭಾರ್ಯೆಯುಂ ತಾಂ । ಕಡೆಗಾಣ್ಬಳ್
ಪೇಳ್ವುದೇಂ ಮುಪ್ಪಡಸಿದೊಡಕಟಾ ಪುತ್ರನುಂ ಶತ್ರುವಪ್ಪಂ ॥ ೨೩

ವೃ॥ ನರೆತಶಿರದಿಂ ದಸ್ಥಿಮಾತ್ರತಂಪೊದಳ್ದ ಶರೀರದಿಂ । ವಿರಸ
ಮುಖದಿಂ ತೋರುತ್ತಿರ್ಪ್ಪ ಜರಾಪರಿಭೂತನಂ ॥ ತರುಣಿಯುರಣಂ
ಕಂಡಾಚಂಡಾಲವಾಟಿಯ ಕೂಪದಾ । ತೆರದೆ ತೊರೆದೈತರ್ಪ್ಪರ್ ಸ್ವೈ
ಜಾಂತರಂಗದೆ ಪೇಸುತಂ ॥ ೨೪

ವೃ॥ ತನುವಿದು ರೋಗದಿಂ ಮುಸುಕದನ್ನವೊ ಮುಪ್ಪಿದು
ಪೊರ್ದ್ದದನ್ನಮೋ । ಘನಮೆಸಿಪಿಂದ್ರಿಯಾಳಿ ಕಿಡದನ್ನವೊ ಮಿಳ್ತುಡೆ
ವೊರ್ದ್ದದನ್ನಮೋ ॥ ತನಗೆ ವಿಮುಕ್ತಿಯುಪ್ಪದರೊಳುಜ್ಜುಗಿಪಾತನೆ
ಬಲ್ಲವಂ ಗಡಾ । ಮನೆಗುರಿಪತ್ತಿದಂದಕಟ ಬಾವಿಯ ತೋಡಿದರುಂ
ಟೆ ಲೋಕದೊಳ್ ॥ ೨೫

ವೃ॥ ತಪಮಂ ಗೆಯ್ಯುತೆ ಗಾಂಗತೀರದೆ ನಿವಾಸಂಮಾಳ್ಪೆವೋ
ಮೇಣ್ಗುಣಾ । ಢ್ಯಪುರಂಧ್ರೀಜನಮಂ ಸೊಗಂಬಡಿಪೆವೋ ಶಾಸ್ತ್ರಾ
ರ್ಥಮಂ ಮೇಣ್ಮನೋ ॥ ಜ್ಞಪದಶ್ರಾವ್ಯಸುಕಾವ್ಯದಿವ್ಯಸುಧೆಯಂ ಸಂ
ಸ್ವಾದನಂಗೆಯ್ವೆವೋ । ವಿಪುಲಾಭೋಗದೆ ಮಾಳ್ಪವಾವುದುಮ ನೀಯು
ತ್ಯಲ್ಪವಾದಾಯುವೊಳ್ ॥ ೨೬

ವೃ॥ ಅರಿದೊಲಿಸಲ್ ತುರಂಗಗಳವೊಲ್ ಚಪಲಾತ್ಮರೆನಿಪ್ಪ
ಭೂಪರಂ । ಪಿರಿದೆಮಗಾಸೆ ಯಾದೊಡೊಡಲಂ ಜರೆ ಬೇಗಮೆ ಜೀ

ರ್ಣವಾಗಿಕುಂ ‖ ಒರೆಸೆಳೆಗುಂ ಪಲಂ ಪ್ರಿಯಮೆನಿಪ್ಪಸುವಂ ಬಲ
ಶಾಲಿ ಮೃತ್ಯುತಾಂ । ಪರಿಕಿಸೆ ಬಲ್ಲವಂಗೆ ತಪದಿಂ ಪೆರತಾವುದೊ ಮು
ಕ್ತಿಸಾಧನಂ ‖ ೭೭

ವೃ‖ ಪೋದುದು ಮಾನಮುಂ ಸಿರಿಯುಮಿಂಗಿದುದರ್ಥಿಜನರ್
ನಿರರ್ಥರಾ । ಗೈದಿದ ರಿಷ್ಟರುಂ ಕುಸುಗಿದರ್ ಸರಿದರ್ ನಿಜಸೇವಕ
ರ್ಕಳುಂ ‖ ತೇದುದು ಜೌವನಂ ಬುಧರೆ ಸಂಸ್ಕೃತಿಯುಂ ತೊರೆದಿನ್ನು
ಜಾಹ್ನವೀ । ಮೇದುರಪೂತಶೀತನಗಕುಂಜದೆ ನೀಮೆಸಗಿಂ ನಿವಾ
ಸಮಂ ‖ ೭೮

ವೃ‖ ಉದಿಪನ್ನಂ ಸದಸದ್ವಿಚಾರಮದು ಚಿತ್ತಕುತ್ಪಲಾಹ್ಲಾ
ದಿಕಾ । ಮುದಿಯುಂ ಬಾಲತೃಣೋಪಶೋಭಿವನಮುಂ ಸತ್ಸಂಗ
ಮಾನಂದಸಂ ‖ ಪದಮುಂ ಶ್ರೋತ್ರಸುಖಾವಹಂ ಕೃತಿಕಥಾಸಂದೋ
ಹಮುಂ ರೋಷಣಾ । ಸ್ಪದಕಾಂತಾಶ್ರುವಿಮಿಶ್ರವಕ್ತ್ರಶಶಿಯುಂ ರ
ಮ್ಯಂಗಳಕ್ಕುಂಪಲಂ ‖ ೭೯

ವೃ‖ ನವಹರ್ಮ್ಯಾಂತರವಾಸಮೇನಸುಖಮೇ ಸಂಗೀತಮು
ಶ್ರಾವ್ಯಮೇ । ತವಕಂಬೆತ್ತೊಡಗೂಡಿದಂಗನೆಯ ಭೋಗಂ ರಾಗ
ಮುನೀಡದೇಂ ‖ ಸುವಿಚಾರಂಗೆಯೆ ಬಭ್ರಮುಚ್ಚಲಭಪಕ್ಷಾಲೋಲ
ದೀಪಂಬೊಲಿಂ । ತಿವು ಚಾಂಚಲ್ಯಮನಾಂಪುವೊಂದರಿದರಣ್ಯಂಬೊಕ್ಕ
ರಾಯರ್ಗೋತ್ತಮರ್ ‖ ೮೦

## ಶಿವಾರ್ಚನಾ ಪ್ರಕರಣಂ.

ಕಂ‖ ನೀವವಧರಿಸಿಂ ಲೋಕದೊ । ಳಾವವನಂ ಕಂಡುದಿಲ್ಲ
ಕೇಳ್ದುದಿಲ್ಲಂ ‖ ಆವಂ ಭೋಗವಶಾರಾ ಗಾವಿಲನುಹ ಚಿತ್ತಕರಿಯು
ಕಟ್ಟೆದದಿಟ್ಟಂ ‖ ೮೧

ವೃ॥ ಚರಿಸುವೆವಿಚ್ಛೆವಂದೆಡೆಯೊಳುಂಬೆವು ದೀನತೆವೆತ್ತೊರ್ದ್ದರ್
ದೂಟಮಂ । ಗುರುಪರಿಚರ್ಯೆಗೆಯ್ದಪೆವು ಕೇಳ್ವೆವು ಶಾಂತಿಫಲೈಕಶಾ
ಸ್ತ್ರವುಂ ॥ ಪೊರಗಡೆಯಾಡದಿರ್ಪ್ಪ ಮನದಿಂ ನೊಗವಿರ್ದ್ದಪೆವಿಂತು
ಬಾಳ್ವವೈ । ಪೊರೆವೊಡದಾವ ಜನ್ಮದ ತಪಃಪರಿಪಾಕವೊ ಕಾಣೆ
ವಾವದಂ ॥ ೮೧

ವೃ॥ ಮನದೊಳೆ ಜೀರ್ಣವಾದುದು ಮನೋರಥವೆಲ್ಲಮು
ಡಂಗಿದತ್ತು ಜಾ । ವನವುಕಟಾ ಗುಣಜ್ಞರಣಮಿಲ್ಲದನರ್ಥಕವಾ
ಯ್ತು ಸದ್ಗುಣಂ ॥ ಸನಿಹಕೆ ಕಾಲನೈದದಿರನೇಗತಿ ಹಾ ತ್ರಿಳಪೆಂ ಕೃ
ತಾಂತಮು । ದ್ದನನ ಪದಾಬ್ಜವೊಂದೆ ಗತಿಯುಲ್ಲದೆ ಬೇರೆನಗಿಲ್ಲ ಮೆಂ
ಬುದಂ ॥ ೮೩

ಕಂ॥ ಶಿವನೊಳಗಂ ಜಗವ್ರೊಡೆ ಕೇ । ಶವನೊಳಗಂ ವಸ್ತು
ಭೇದಬುದ್ಧಿಯುದಿಂತುಂ ॥ ಸವನಿಸದಾರಯುಲಾದೊಡೆ । ಮೆವಗಕ್ಕುಂ
ಭಕ್ತಿ ತರುಣಶಶಿಶೇಖರನೊಳ್ ॥ ೮೪

ವೃ॥ ತೊಳಗುವ ಸಾಂದ್ರಚಂದ್ರರುಚಿಯಿಂದತಿನಿರ್ಮ್ಮಳವಾದ
ಜಾಹ್ನವೀ । ಪುಳಿನದೆ ಕುಳ್ಳಿರುತ್ತು ಲಿಪಡಂಗಿದ ನಟ್ಟಿರುಳೊಳ್
ಭವಾರ್ತಿನಿ ॥ ಹ್ವಳಮನನಾಗಿ ನಾಂ ಶಿವ ಶಿವಾಧವ ಎಂದವಿದಿಕ್ಕು
ತೆಂದಣಂ । ತಳೆವೆನೊ ಚಿತ್ತಲೀನಸುಖಬಾಷ್ಪಸವಾಕುಲವಾದವ
ಸ್ಥೆಯುಂ ॥ ೮೫

ವೃ॥ ಎರೆದವರ್ಗಿಲ್ಲ ವೆಂದೊರೆಯು ದೈಸಿರಿಯೆಲ್ಲಮು ನಿತ್ತು
ನಲ್ಮೆಯಿಂ । ಪರಿಣತಿಘೋರವೆಂದರಿದು ಸಂಸೃತಿಯುಂ ಸಲೆವಾಣ್ದಿರ
ಣ್ಯದೊಳ್ ॥ ಹರಿಸದಿನೆಂದು ನೂಂಕುವೆನೊ ಶಾರದಚಂದ್ರಮನೋ
ಜ್ಞರಾತ್ರಿಯುಂ । ಹರಚರಣಾರವಿಂದಪರಿಚಿಂತನಕಂದಳಿತಾನುವೋ
ದದಿಂ ॥ ೮೬

ವೃ॥ ಭೂನುತಕಾಶಿಯೊಳ್ ಸುರನದೀತಟದೊಳ್ ನೆರೆನಿಂದು
ತಾಳ್ದು ಕಾ । ಪೀನವನಾಂತು ಶೀರ್ಷದೊಳಗಂಜಲಿಯುಂ ಶಿವ ಶರ್ವ

ಪಾರ್ವತೀ ॥ ಜಾನಿ ಮಹೋಕ್ಷಲಕ್ಷನಿಟಲಾಕ್ಷ ಸುಮೋಕ್ಷದ ಶಂಭು
ರಕ್ಷಿಸೆಂ । ದಾನವಿದಿಕ್ಕೃತಂ ಕಳೆವೆನೆಂದು ದಿನಂ ನಿಮಿಷಾರ್ಧಮೆಂ
ಬಿನಂ ॥ ೮೭

ವೃ॥ ಸುರನದಿಯಲ್ಲಿ ಮಿಂದು ಫಲಪುಷ್ಪದೆ ಶಂಕರ ನಿನ್ನ
ಪಾದಮಂ । ಕರುಹಮನರ್ಚಿಸುತ್ತೆ ರವೆನಾನಿದನೆಂದಿಗನುಗ್ರಹಿಪ್ಪೆಯ್ಯ॥
ಅರಸರ ಸೇವಿಪ್ರೊಂವಳಲ ನೀಗಿ ಗುಹಾಂತರವಾಸಿಯಾಗಿ ಸ । ದ್ಗುರು
ವರನುಕ್ತಿಯುಂ ಸ್ಮರಿಸುತಂ ಸತತಂ ಸುಖಮಿಪ್ಪ ಭಾಗ್ಯಮಂ ॥ ೮೮

ಕಂ॥ ಏಕಾಕಿಯರಾಗಿ ನೀಗಿದು । ರಾಕಾಂಕ್ಷೆಯ ಶಾಂತಿವೆರಸು
ಭಿಕ್ಷೆಯ ಕರದಿಂ ॥ ಸ್ವೀಕರಿಸಿ ದಿಗಂಬರನಾ । ಗೀ ಕರ್ಮದ್ರುಮವ
ನೆಂದು ಕಡಿವೆನೊ ವೃಢನೇ ॥ ೮೯

ವೃ॥ ಕರಮನೆ ಪಾತ್ರೆಗೆಯ್ದು ಶುಚಿಭೈಕ್ಷದೆ ತೋಷಿಪ ಸಂ
ದತಾಣದ । ಲೆಲ್ಲರಗುವ ಲೋಕಮಂ ತೃಣಕೆ ಕಾಣ್ಬ ಶರೀರವ
ಮಾಣದಿದ್ದೋರ್ಡಂ ॥ ಪರಮಸುಖಾವಬೋಧದೆ ವಿದೇಹತೆಯೊಂದು
ವ ಯೋಗಿಗಳ್ಗೆ ಶಂ । ಕರಚರಣಪ್ರಸಾದಸುಲಭಂ ಪಥಮೊಂದಳ
ವಟ್ಟು ತೋರುಗುಂ ॥ ೯೦

ವೃ॥ ಕೌಪಣಮಾಂತು ಜೀರ್ಣತರಕಂಥೆಯನಂಗದೆ ಪೊದ್ದು
ಭೈಕ್ಷಮಂ । ಸೇವಿಸಿ ಚಿತ್ತನಿಶ್ಚಲತೆಯಿಂ ವಿಪಿನಾಂತರದೊಳ್ ಮಲಂ
ಗುತಂ ॥ ಶೀವೆ ಕರಂ ನಿಜಾತ್ಮದ ಪರೋಕ್ಷತೆ ಶಾಶ್ವತಯೋಗ
ರಾಜಲ । ಕ್ಷ್ಮೀವಿಭುವಾದ ಯೋಗಿ ಬಗೆಯಂ ಗಡ ಮೂಜಗದಾಧಿ
ಪತ್ಯಮಂ ॥ ೯೧

---

## ಅವಧೂತ ಚರಿತ್ರಪ್ರಕರಣಂ.

ಕಂ॥ ಪರಿಕಿಪೊಡೆ ಬಟ್ಟಗೆರೆಯನಿ । ತರವಿಂದಭವಾಂಡಮಿದು
ಮನಸ್ವಿಯ ಬಗೆಯುಂ ॥ ಮರಲಿಸಲಾಪ್ಪುರ್ದೆ ಮಿನ್ಗಳ್ । ಪೊರಳಲ್
ಸಾಗರಕೆ ಸಮನಿಕಃಮೆ ಸಂಕ್ಷೋಭಂ ॥ ೯೨

ವೃ॥ ಸಿರಿ ನೀ ನೆಮ್ಮನದೇಕೆ ಕಾಂಕ್ಷಿಸುವೆ ನಿನ್ನಂ ಸೇವಿಪರೆ
ನಾಡೆ ಭೋ । ಗರತರ್ ಸೇರವರಂ ನಿರಾಶರೆನಿಪೆಮ್ಮನ್ನಗ್ಗ ನಿನ್ನಿಂ
ದಮೇಂ ॥ ತರುಪರ್ಣಾಳಿನಿಬದ್ಧಪಾತ್ರದೆ ಪವಿತ್ರೀಭೂತಭಿಕ್ಷಾನ್ನ
ಮಂ । ಕರಮಾರೋಗಿಸಿ ಬಾಳ್ವದೊಂದಿರವನೇ ಕಾಂಕ್ಷಿಪ್ಪೆವಾವು
ರ್ವಿಯೊಳ್ ॥ ೯೩

ವೃ॥ ಧರಣಿಯೆ ನೀಳ್ದಪಾಸು ಭುಜಮೇ ತಲೆಗಿಂಬು ವಿತಾನ
ಮಾಗಸಂ । ಸುರಭಿಳಮಾರುತಂ ವ್ಯಜನ ಮಿಂದುವೆ ದೀವಿಗೆಯಾಗೆ
ಸಂತತಂ ॥ ವಿರತಿವಧೂಟಿಗೂಡಿ ಸುಖಿಪಂ ಮಿಗೆ ಸಂತತ ಯೋಗನಿ
ದ್ರೆಯೊಳ್ । ಗುರುತರ ಸಂಪದಂಬಡೆದ ಭೂಮಿಪನಂದದೆ ಯೋಗಿ
ಪುಂಗವಂ ॥ ೯೪

ವೃ॥ ಜಡಜನ ಸಂಗಮಂ ತೊರೆದು ಭೈಕ್ಷಮನುಂಡು ನಿರಾ
ಶನಾಗಿಮೇಣ್ । ಕುಡುವುದು ಕೊಂಬುದೆಂಬುವನೆ ಮಾಣ್ದು ನಿರಂ
ಕುಶಮಪ್ಪ ವೃತ್ತಿಯಿಂ ॥ ನಡೆದೆಡೆವಟ್ಟೆಯೊಳ್ಪಸುಟ ಬಟ್ಟೆಯತೊ
ಟ್ಟಭಿಮಾನಮೆಂಬುದಂ । ಜಡಿದು ಶಮೋಪಭೋಗಪರನಿರ್ದಪ
ನೊರ್ವ ನುದಾರತಾಪಸಂ ॥ ೯೫

ವೃ॥ ಇವನೇಂ ಚಂಡಾಲನೋ ಮೇಣ್ ದ್ವಿಜನೊ ಪರಿಕಿಸಲ್
ಶೂದ್ರನೋ ಮೇಣ್ ತಪಸ್ವಿ । ಪ್ರವರಂ ತಾನೋ ನಿಜಾತ್ಮಸ್ಥಿತಿವಿತ
ಮತಿಮಹಾಯೋಗಿಯೋ ಮೇಣೆನುತ್ತಂ ॥ ತವೆ ಲೋಗರ್ ಮಾಳ್ಪ
ನಿಂದಾಸ್ತುತಿಗಳೊಳಗಣಂ ಕೋಪಹರ್ಷಂಗಳಂ ಮಾ । ಣ್ದವಧೂತ
ರ್ ಶಾಂತ್ಯುಪೇತರ್ ಚರಿಪರವುವು ಸಂಸಾರಜೀಮೂತವಾತರ್ ॥ ೯೬

ವೃ॥ ಹಿಂಸಾದೂರಮಯತ್ನಲಭ್ಯಮುಮೆನಿಪ್ಪಾ ವಾಯುಮಂ
ಪುಲ್ಲುಮಂ । ತಾಂ ಸರ್ಪವ್ರಜಕಂತೆ ಗೋವ್ರಜಕಜಂ ಮಾಳ್ದಂತಿ
ರಾಹಾರಮಂ ॥ ಸಂಸಾರಾಬ್ಧಿಯ ದಾಂಟುವಗ್ಗಮಿರದೀ ಸದ್ವೃತ್ತಿ
ಯುಂಗೈದನಾ । ದಂ ಸಂಪಾದಿಸಿದಗ್ಗದಂ ಗುಣಮನಿತ್ತುಂ ಶಾಂತಿ
ಯುಂ ಪೊರ್ದುಗುಂ ॥ ೯೭

ವೃ॥ ಸುರಸಿಂಧುಕ್ಷಾಳಿತಾಂಚತ್ತುಹಿನಗಿರಿಶಿಲಾಪೀಠದೊಳ್ಕು
ಳ್ಳಿರುತ್ತಂ । ಪರಮೇಶಧ್ಯಾನ ವಿದ್ಯಾಭ್ಯಸನ ವಿಧಿಯೊಳಾಂ ಯೋಗ
ನಿದ್ರಾ ಸುಖಂದಾ ॥ ಳ್ದಿರೆ ಸಾರಂಗೋತ್ಕರಂ ಶಂಕಿಸದಿನಿತುಮನೆನ್ನಂ
ಗದೊಳ್ ಸಾಶ್ಚರ್ಯಮೆಯ್ಯಂ । ತುರಿಸುತ್ತಂ ಸಂತಮಿಪ್ಪರ್ಗ ಸುದಿನಮೆ
ನಗದೆಂದಪ್ಪುದೋ ಮಿಕ್ಕಸ್ತೈಪಿಂ ॥ ೯೮

ಭುಜಂಗಪ್ರಯಾತ ವೃತ್ತ ॥ ಕರಂಪಾತ್ರೆ ಭೈಕ್ಷಂ ಪವಿತ್ರಾ
ನ್ನಮಾಶೋ । ತ್ಕರಂ ವಸ್ತ್ರ ಮುರ್ವೀತಲಂ ತಲ್ಪಮಾಗಲ್ ॥ ವಿರ
ಕ್ತರ್ ಜನಾಸಂಗದೂರರ್ ಸುತೃಪ್ತರ್ । ಕರಂ ಕರ್ಮಮಂ ಕಿಳ್ತು
ತಾಂ ಸಂತಮಿಪ್ಪರ್ ॥ ೯೯

ಕಂ॥ ಪವನಂ ತಾಂಸೋಂಕಿಯು ಮೆ । ಲ್ಲವ ನಮಲ ನೆನಿಪ್ಪ
ತೆರದಿನಾರಬ್ಧ ಸುಭೋ ॥ ಗವ ನನುಭವಿಸಿಯು ಮುಂಟದೆ । ತವೆ
ಚರಿಪಂ ಚಿತ್ಪ್ರತೃಪ್ತಜೀವನ್ಮುಕ್ತಂ ॥ ೧೦೦

ವೃ॥ ಮಾತೆ ಧರಿತ್ರಿ ತಾತ ಪವನಾ ಸಖವಹ್ನಿಯೆ ಬಂಧು
ತೋಯಮೇ । ಭ್ರಾತೃವೆ ಬಾನೆ ನಾಡೆ ರಚಿಪೆಂ ನಿಮಗಾಂ ಚರ
ಮಪ್ರಣಾಮಮಂ ॥ ಪ್ರೋತನಿಜಾನುಷಂಗಭವಪುಣ್ಯದೆ ಪುಟ್ಟಿದ ಚಿ
ದ್ವಿಶೇಷದಿಂ । ಧೂತಸಮಸ್ತಮೋಹಮಹಿಮಂ ಪರಬೊಮ್ಮದೆ ಲೀ
ನನಾದಪೆಂ ॥ ೧೦೧

ಕಂ॥ ಮುನ್ನಿದು ಸಂಸ್ಕೃತದಿಂ ಬುಧ । ರ ನ್ನಲವಡಿಸಿತ್ತು
ಮತ್ತೆ ಸೊಗವಡಿಸಿತ್ತೋ ॥ ಳನ್ನಡದಿಂದಮುಮೆನೆ ಪೇ । ಳ್ದೆ ನ್ನೀ
ತಿಪ್ರಮುಖಮೆನಿಪ ಶತಕತ್ರಯಮಂ ॥ ೧೦೨

ಕಂ॥ ಸಕ್ಕದಮೇಂ ಕನ್ನಡಮೇಂ । ನೊಕ್ಕಣಿಸಿದ ವಿಷಯ
ಮೊಂದೆಗಡ ತಾಮದರಿಂ ॥ ತಕ್ಕರ್ ಕೇಳ್ದಾನಂದಿಪ । ರಕ್ಕೆ ಗುಣಪ್ರ
ವಣಮತಿಯಿ ನೀನುತಕೃತಿಯಂ ॥ ೧೦೩

ಕಂ॥ ನೀತಿಗಿದು ಬೀಡು ಶೃಂಗಾ । ರಾತಿಶಯಕ್ಕಿದುವೆ ನಾಡು
ವೈರಾಗ್ಯಮಹಾ ॥ ಭೂತಿಗಿದಾಡುಂಬೊಲಮೆನೆ । ಭೂತಲದೊಳ್
ಖ್ಯಾಮಕ್ಕೆ ಶತಕತ್ರಯಮುಂ ॥ ೧೦೪

ವೈರಾಗ್ಯಶತಕಂ ಸಂಪೂರ್ಣಂ.